ಕರ್ಮವೀರ

ಸಂಪುಟ ೨೦]　　ಸಂಚಿಕೆ ೪]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ ಪುರೋಹಿತ
ಎಂ. ಎ

ಸಂಸ್ಥಾಪಕರು— ಪ್ರಿಂಟರು:
ರಂ. ರಾ. ದಿವಾಕರ
ಘಟನಾ ಸಮಿತಿ ಸದಸ್ಯರು


೧

" ನೂರಾರು ದಿನಗಳು ಜಾರಿದವು ಬರಿ
ದಾರಿಕಾಯುತಲಿರುವೆನು
ಹಾರಯಿಕೆಯೆಂತಹದು ! ನನ್ನವ
ಬಾರನೇಕೆನುತಿರುವೆನು
ಬರುವನೆನ್ನುವ ಓಲೆಯಿಲ್ಲವ
ನರುಹಿದೊಸಗೆಗಳಿಲ್ಲ,
ಬರುವನೆನ್ನುತ ಬಗೆಯಿದೇನೋ
ನೊರೆಯುತಿದೆ ಸುಳ್ಳಲ್ಲ
ಎಂತಲೇ ದಿನವೆಲ್ಲಾ....
ಎಂತಲೇ ದಿನವೆಲ್ಲ ಹೀಗೆಯೆ
ನಿಂತು ನಿರುಕಿಸೆನಲ್ಲಾ !

೨

ಸದ್ದನಾವುದ ಕೇಳಿದರೆ ಜು–
ಮ್ಮೆದ್ದ ವ್ಯೆಮನದಿಂದ
ಎದ್ದು ನೋಡುವೆ ಇನಿಯನೆಂದೇ
ಹೊದ್ದಿದಾತುರದಿಂದ
ಆತನಲ್ಲದೆ ಇರಲು ಬಯಕೆಯು
ಬೀತು ಬಳಲಿಕೆಯಾಂತು,
ಕಾತರದಿ ಬಂದೊಳಗೆ ಬೀಳುವೆ–
ಕಾಯ್ದು ಸುಯ್ಲಲಿ– ಸೋತು
ಮತ್ತೆ ಆಶೆಯು ಕೂಗಿ....
ಮತ್ತೆ ಆಶೆಯು ಕೂಗಿ ಕರೆಯಲು
ಒತ್ತಿ ಏಳುವೆ ಬೇಗಿ "

— ಆನಂದಕಂದ



ಲಕ್ಷ್ಮೀನಾರಾಯಣ ಮಂದಿರ

ಹೊಸದಿಲ್ಲಿಯಲ್ಲಿ ಸೇಠ ಲಕ್ಷ್ಮೀ–ನಾರಾಯಣ ಬಿರ್ಲಾರವರು ಕೆಲ ವರ್ಷಗಳಿಗೆ ಕಟ್ಟಿಸಿದ ಈ ದೇವಾಲಯು ಸರ್ವ ಹಿಂದುಗಳಿಗೆ ಮುಕ್ತದ್ವಾರವಿದೆ. ಅಪೂರ್ವ ಶೋಭೆಯ ಈ ಗುಡಿ ಆಧುನಿಕ ವಾಸ್ತುಶಿಲ್ಪದ ಉತ್ತಮ ಮಾದರಿ.

ಹುಬ್ಬಳ್ಳಿ
೩೧—೫—೧೯೪೮

ಹೈದರಾಬಾದ– ಕೊನೆಯ ಅಂಕ

—ಶ್ರೀ. ರಂ. ರಾ. ದಿವಾಕರ (ಪುಟ ೫)



KARMAVEER Kannada Illustrated Weekly - HUBLI

ಚಿಕ್ಕಕತೆ

ಮೂರ್ತಿಯ ಮಬ್ಬು

—ಎನ್. ಎಸ್. ಗದಗೆಕರ ಬಿ. ಎ.

'ಮೂರ್ತಿ, ಇದೇ ಹೇಳಿದ್ದೇ ಹೇಳಿದ್ದು. ನಿನಗೆ ಇನ್ನೊಂದು ಸಲ ಮಾತ್ರ ಅವಕಾಶವಿದ್ದಾದರೆ ನಿನ್ನ ರಾಜೀನಾಮೆ ತೆಗೆದುಕೊಳ್ಳಬೇಕಾದೀತು. ತಿಳಿಯಿತೆ?'

'ಒಳ್ಳೇದು, ರಾಯರೆ'

ತಾನು ಒಳ್ಳೇದು ಅಂದದ್ದು ಏಕೆ ಎಂಬುದು ಮೂರ್ತಿಗೆ ಹೊಳೆಯಲಿಲ್ಲ. ಅದೊಂದು ಮಾತಿನ ರೂಢಿಯಾಗಿ ಬಿಟ್ಟಿದ್ದರಿಂದ ಬಾಯಿ ತಪ್ಪಿ ಬಂದು ಹೋಯಿತು.

ಆಫೀಸಿಗೆ ತಡವಾದದ್ದು ಅವನಿಗೆ ಇದೇ ಮೊದಲ ಸಲವಲ್ಲ. ಅದೊಂದು ಚಟವೇ ಬಿದ್ದಿತ್ತು.

ಸಾಹೇಬನ ಕೋಣೆಯಿಂದ ಹೊರಗೆ ಬಂದಾಗ ಅವನಲ್ಲಿ ಅತೀವ ಪಶ್ಚಾತ್ತಾಪವಾಗಿತ್ತು. ಬೇಸರ ಆಗಿತ್ತು. ಮುಖ್ಯಾಧಿಕಾರಿಯ ದರ್ಪದ ಆ ವಾಣಿಯು ಅವನ ಮೇಲೆ ಸಾಕಷ್ಟು ಕೆಟ್ಟ ಪರಿಣಾಮವನ್ನುಂಟು ಮಾಡಿತ್ತು. ಮೇಲಾಧಿಕಾರಿಯ ಮಾತು ಸಾಮಾನ್ಯವೆಂದು ಗಣಿಸುವಷ್ಟು ಅವನ ಮನಸ್ಸಿನಲ್ಲಿ ಇರಲಿಲ್ಲ, ಸಾಂಪತ್ಯವೆಂದರೆ ಪಾಠು ಪತ್ಯವೇ ಎಂಬುದು ಅವನಿಗೆ ಗೊತ್ತು.

ಮೂರ್ತಿಯು ಆ ಕಂಪನಿಯಲ್ಲಿ ಕೆಲಸಕ್ಕೆ ನಿಂತು ಸುಮಾರು ಹತ್ತು ವರುಷಗಳಾಗಿರಬಹುದು. ಆ ಅವಧಿಯಲ್ಲಿ ಅವನ ಲಗ್ನವಾಗಿ ಐದು ಮಕ್ಕಳಾಗಿದ್ದುವು. ಕೆಲಸ ಕಳೆದುಕೊಳ್ಳುವದಾಗಲಿ ಬಡತಿ ನಿಲ್ಲುವದಕ್ಕೆ ಅವಕಾಶ ಕಲ್ಪಿಸಿಕೊಡುವದಾಗಲಿ ಅವನ ದೃಷ್ಟಿಯಿಂದ ಸಣ್ಣ ಮಾತು ಆಗಿರಲಿಲ್ಲ. ಇಷ್ಟು ದಿನ ದುಡಿದರೂ ಒಂದು ಪೈ ಉಳಿಸುವದಾಗಿರಲಿಲ್ಲ ಅವನಿಗೆ. ತಿಂಗಳಿನ ನೂರಾ ಹದಿನೈದು ರೂಪಾಯಿ ವೇತನದಿಂದ ಉಳಿತಾಯವಾಗುವದಾದರೂ ಎಷ್ಟು?

ಅದೇ ದಿನ ಸಾಯಂಕಾಲ ಮನೆಯಕಡೆಗೆ ಹೊರಟಾಗ ಅವನು ಗಡಿಯಾರದ ಅಂಗಡಿಗೆ ಹೋಗಿ ಒಂದು ಅಲಾರ್ಮ ಗಡಿಯಾರ ಕೊಂಡ. ಮನೆಯಲ್ಲಿ ಈ ಮೊದಲೇ ಒಂದಿದ್ದರೂ ಮೇಲಾಧಿಕಾರಿಯ ಉರಿ ನೋಟದ ಮುಂದೆ ಒಂದು ಸಾಕೆನಿಸಲಿಲ್ಲ. ಅವನ ನಿದ್ದೆಯದು ಒಂದು ವಿಲಕ್ಷಣ ರೀತಿ. ನಿದ್ರೆ ಬರುವದು ತಡ. ಬಂದ ಮೇಲೆ ಗಾಢನಿದ್ರೆ. ಗುಂಡಿನ ಸದ್ದಿಗೂ ಎಚ್ಚರಾಗುವಂತಿಲ್ಲ!

ಅವನ ಕಂಪನಿಯು ದುಡಿತದವೇಳೆ ಮುಂಜಾವು ಒಂಬತ್ತರಿಂದ ಸಂಜೆಯ ಐದೂವರೆಯವರೆಗೆ ನಡೆದು ಉಪಹಾರಕ್ಕೆ ಒಂದು ತಾಸು ಬಿಡುವು. ಶನಿವಾರ ಅರ್ಧದಿನ, ಆದಿತ್ಯವಾರ ಪೂರ್ಣ ಬಿಡುವು.

ಮೂರ್ತಿಯ ಮನೆ ಆಫೀಸಿನಿಂದ ಬಹಳ ದೂರ. ಮೊದಲು ಗಾಡಿಯಿಂದ ಹೋಗಿ ಆಮೇಲೆ ಬಸ್ಸು ಹಿಡಿಯಬೇಕು. ಇಷ್ಟಕ್ಕೆ ಕನಿಷ್ಠ ಅರ್ಧ ತಾಸು ಹಿಡಿಯುತ್ತಿತ್ತು. ಸರಿಯಾದ ವೇಳೆಗೆ ಆಫೀಸ ಮುಟ್ಟಬೇಕಾದರೆ ಆರಕ್ಕೆ ಏಳಲೇಬೇಕು. ಪ್ರಾತರ್ವಿಧಿ, ಹಜಾಮತಿ, ಫಲಾಹಾರಕ್ಕೆ ವೇಳೆ ಬಹಳ ಹತ್ತುತ್ತಿತ್ತು. ಮನೆಯಲ್ಲಿ ಮಕ್ಕಳಂತೂ ಇದ್ದೇ ಇದ್ದುವು. ಹಿರಿಯ ಹುಡುಗನಿಗೆ ಎಂಟು ವರುಷ, ಕಿರಿಯದಕ್ಕೆ ಐದು ತಿಂಗಳು.

ಸಣ್ಣ ವೇತನದಲ್ಲಿ ವಿಲಾಸಕ್ಕೆ ಅವಕಾಶವೆಲ್ಲಿ? ಆಳು ಮನುಷ್ಯನನ್ನಿಡುವದಕ್ಕೆ ಸಾಧ್ಯವಾಗಿರಲಿಲ್ಲ. ಅವನಿಗೆ ಮನೆಯಲ್ಲಿ ಹೆಂಡತಿ ಮುಂಜಾವಿನ ಉಪಹಾರ ಅಣಿಮಾಡುತ್ತಿದ್ದಾಗ ಮೂರ್ತಿ ಸಹಾಯಕನಾಗಿ ಪರಿಣಮಿಸಬೇಕಾಗುತ್ತಿತ್ತು. ಆಕೆ ನೀರು ಕಾಸುವ ಕೆಲಸದಲ್ಲಿ ತೊಡಗಿದಾಗ ಇವನಿಗೆ ಮಕ್ಕಳ ಪರಾಮರಿಕೆಯ ಹೊಣೆ ಬೀಳುತ್ತಿತ್ತು.

ಮಕ್ಕಳ ಪರಾಮರಿಕೆ ಹೇಳ್ಪೆಯ ಕೆಲಸವಲ್ಲ ಎಂಬುದು ತಂದೆಗೇ ಗೊತ್ತು. ಒಮ್ಮೊಮ್ಮೆ ಮೂರ್ತಿಯು ಹಜಾಮತಿ ಮಾಡಿಕೊಳ್ಳುವಾಗಲೆ ಮಕ್ಕಳನ್ನಾಡಿಸಬೇಕಾಗುತ್ತಿದ್ದುದರಿಂದ ಮೋರೆ ರಕ್ತರಂಜಿತವಾಗುತ್ತಿತ್ತು. ಕೈಗಳನ್ನು ತಿಂದ ಆ ದಿನ ಮೂರ್ತಿ ಕೆಲಸಕ್ಕೆ ಹೊರಡಲಣಿಯಾದಾಗ ಸಣ್ಣ ಹುಡುಗಿಯು ಹಟ ತೆಗೆಯಿತು. ಇನ್ನೇನು ಮಾಡುವದೆಂದು ತೋಚದೆ, ಮೇಲೆ ಕೂಡ್ರಿಸಿಕೊಂಡು ರಮಿಸಹತ್ತಿದ. ಅಷ್ಟರಲ್ಲಿ ಚಹವು ಸಿದ್ಧವಾಗಿ ಕೈಗೆ ಕೆಲಿಸಿತು. ಇಷ್ಟೆಲ್ಲ ಮುಗಿದು ಆಫೀಸಿನಲ್ಲಿ ಕಾಲಿಟ್ಟಾಗ ತಡವಾಗಿತ್ತು. ಮೇಲಾಧಿಕಾರಿಯ ಬಿರುಕು ಮಾತು ಅವನ ಎದೆಯನ್ನು ಗಾಸಿಮಾಡಿಬಿಟ್ಟವು.

ಅಲಾರ್ಮ ಗಡಿಯಾರ ಹಿಡಿದುಕೊಂಡು ತನ್ನ ಗಂಡ ಮನೆಗೆ ಬಂದಾಗ ಹೆಂಡತಿಗೆ ಕೊಂಚ ಸೋಜಿಗವೆನಿಸಿತು. ಯಾಕೆಂದರೆ ನಿಷ್ಕಾರಣ ಹಣ ವೆಚ್ಚಮಾಡುವವರಲ್ಲ ತನ್ನ ಪತಿದೇವರು ಎಂದು ಆಕೆಗೆ ಗೊತ್ತಿತ್ತು.

'ಮನೆಯಲ್ಲಿ ಒಂದು ಗಡಿಯಾರ ಇದ್ದಿತಲ್ಲ! ಬೇರೊಂದು ಏಕೆ' ಎಂದು ಆಕೆ ಎಂದಳು.

ಮುಖ್ಯಾಧಿಕಾರಿಯ ಕೋಣೆಯಲ್ಲಿ ಸಿಕ್ಕ ಬಾಯಿ ಪ್ರಸಾದದ ಕತೆಯನ್ನು ಮೂರ್ತಿಯು ಸಾದ್ಯಂತವಾಗಿ ಆಕೆಯ ಮುಂದೆ ಬಿಚ್ಚಿಟ್ಟನು. ಇನ್ನು ಮುಂದೆ ತಾನು ಐದಕ್ಕೆ ಏಳುವದೆಂಬ ನಿರ್ಧಾರ ಮಂಡಿಸಿದನು.

'ಅಲಾರ್ಮಿನ ಹಳೆ ಗಡಿಯಾರ ೬-೩೦ಕ್ಕೆ ಇಡುತ್ತೇನೆ ಹೊಸದು ಐದಕ್ಕೆ ಇರಲಿ. ಅಂದರೆ ಒಂದರಿಂದ ಎಚ್ಚರಾಗದಿದ್ದರೂ ಮತ್ತೊಂದು ಇದ್ದೇ ಇದೆಯಲ್ಲ.'

ಗಂಡನ ಮಾತಿನ ಸರಣಿಯಿಂದ ಆಕೆಗೆ ಕೊಂಚ ಸಮಾಧಾನವಾಯಿತು. ತನಗೆ ತಡಮಾಡಿ ಏಳುವ ಪರಿಪಾಠ ಬಿದ್ದುದರಿಂದ ಅವನನ್ನು ತೀವ್ರ ಎಚ್ಚರಿಸುವದು ಆಕೆಗೆ ಸಾಧ್ಯವಿರಲಿಲ್ಲ. ನಿಜವಾಗಿಯೂ ಅವನೇ ಆಕೆಯನ್ನ ಪ್ರತಿದಿನ ಎಬ್ಬಿಸುತ್ತಿದ್ದ!

ಹೊಸ ಗಡಿಯಾರವು ತನ್ನ ಕೆಲಸವನ್ನು ಸಾಕಷ್ಟು ಉತ್ತಮ ರೀತಿಯಿಂದ ನಿರ್ವಹಿಸಿತು. ಮೇಲಾಧಿಕಾರಿಗೂ ಉಳಿದ ಗುಮಾಸ್ತರಿಗೂ ಆಶ್ಚರ್ಯವಾಗುವಂತೆ ಮೂರ್ತಿ ಚಾಚು ತಪ್ಪದೆ ನಿಯಮಿತ ವೇಳೆಗೆ ಆಫೀಸಿನಲ್ಲಿರುತ್ತಿದ್ದ. ಗಡಿಯಾರದ ಸದ್ದಿಗಿಂತ ಮುಖ್ಯಾಧಿಕಾರಿಯ ಬಿರುನುಡಿ ತನ್ನನ್ನು ಎಬ್ಬಿಸಿರಬೇಕೆಂದು ಅವನಿಗೆ ಗೊತ್ತು!

ಒಮ್ಮೆ ಅವನು ಸಿನೇಮಾ ನೋಡಿ ಮಧ್ಯರಾತ್ರಿಯಾದ ಮೇಲೆ ಮನೆಗೆ ಬಂದ. ಅವಸರದಿಂದ ಊಟ ಮುಗಿಸಿ ಮಲಗಿದ. ಅಯ್ಯೊ! ಎಂಥಹ ಅವಸರ! ಎರಡೂ ಗಡಿಯಾರಗಳಿಗೆ ಅಲಾರ್ಮ ಕೀಲಿ ಕೊಡುವದನ್ನೇ ಮರೆಯಬೇಕೆ?

ಸುಲಭವಾಗಿ ನಿದ್ರೆ ಹತ್ತಲಿಲ್ಲ ಅವನಿಗೆ. ನಿದ್ರೆಗಾಗಿ ಹಾದಿ ನೋಡುವ ಚಟವೇ ಅವನಿಗೆ ಬಿದ್ದಿತ್ತು. ನಿದ್ರಾದೇವಿಯು ಪ್ರಸನ್ನಳಾಗುವದಕ್ಕೆ ಅವನಲ್ಲಿ ನೂರಾರು ಹಂಚಿಕೆಗಳಿದ್ದವು. ಏನೆ ಆಗಲಿ. ಹಾಸಿನ ಮೇಲೆ ನಿದ್ರೆ ಆವರಿಸಿತು.

ದಣಿದ ಮನುಷ್ಯನಿಗೆ ಕನಸು ಬೀಳುವದು ಸಹಜ. ಮೂರ್ತಿ ದಣಿದವ. ಕನಸಿನಲ್ಲಿ ಮುಖ್ಯಾಧಿಕಾರಿ ಬಂದು "ತಡವಾದರೆ ಜೋಕೆ, ಕೆಲಸ ಉಳಿಯಲಿಕ್ಕಿಲ್ಲ" ಎಂದು ಗದ್ದರಿಸಿದಂತಾಯಿತು.

'ಆಃ! ಅದೇನು ಎಂದು ಕಣ್ತೆರೆದು ಮತ್ತೆ ಮುಚ್ಚಿದ ಅದು ಅವನ ಕನಸು ಸರಿ. ಕಣ್ಣುಜ್ಜಿಕೊಳ್ಳುತ್ತ ವೇಳೆ ನೋಡಿದ. ಅಬ್ಬಾ ೭-೪೦! ಹೆಂಡತಿ ಮಗ್ಗುಲಲ್ಲಿಯೇ ಗೊರಕೆ ಹೊಡೆಯುತ್ತಿದ್ದಾಳೆ.

ಹೆಂಡತಿಯನ್ನು ಎಬ್ಬಿಸದೆ ಮೂರ್ತಿ ಎದ್ದ. ಪ್ರಾತರ್ವಿಧಿ, ಮುಖಮಾರ್ಜನ ತೀರಿಸಿ ಪೋಷಾಕು ಹಾಕಿಕೊಂಡ.

ಸಾವಕಾಶ ಬಾಗಿಲು ತೆರೆದು ರೇಲ್ವೆ ನಿಲ್ದಾಣದ ಕಡೆಗೆ ನಾಗಾಲೋಟದಿಂದ ನುಗ್ಗಿದ. ಪುಣ್ಯಕ್ಕೆ ನಿಲ್ದಾಣ ಸಮೀಪದಲ್ಲಿತ್ತು.

ಗಡಿಯಾರ ೮-೧೫ ತೋರಿಸಿತು. ಅವನು ಉಶ್ಶಪ್ಪಾ ಎಂದ. ಇಷ್ಟೇ ವೇಳೆಯೆ? ಚಹ ಕುಡಿಯಲು, ವರ್ತಮಾನ ಪತ್ರ ಕೊಳ್ಳಲು ಸಾಧ್ಯ ಎಂದು ಕೊಂಡ.

ಮೂರ್ತಿ ಉಗಿಹಾಯುವ ಚಹ ಕುಡಿದ. ಅವನ ಕ್ರಮ ನೋಡಿ ಸರ್ಕಸ್ಸಿನಲ್ಲಿ ಉರಿಯ ಕಸರತ್ತು ಮಾಡುವವನಿಗೂ ಆಶ್ಚರ್ಯವಾಗುವಂತಿತ್ತು. ರೇಲ್ವೆ ಪುಸ್ತಕಾಲಯಕ್ಕೆ ಹೋಗಿ ಎರಡಾಣೆಯ ನಾಣ್ಯ ಚೆಲ್ಲಿ ಟಾಯಿಮ್ಸ್ ಆಫ್ ಇಂಡಿಯಾ ಕೊಡಿರಿ ಎಂದ.

"ಅದು ಇಂದು ಹೊರಡುವದಿಲ್ಲ ರಾಯರೆ," ಎಂದು ಹೇಳಿ ಮಾಲಕನು "ಸಂಡೆ ಸ್ಟ್ಯಾಂಡರ್ಡ ಕೊಡಲೆ? ಎಂದ."

*ಆಂಗ್ಲ ಪತ್ರಿಕೆಯೊಂದನ್ನು ಆಧರಿಸಿ ಬರೆದಿದ್ದು

(ಒಂದು ಸ್ವಭಾವ ಚಿತ್ರ)

ಆ ಮುದುಕಿ

—ಲೇಖಕರು: ತಾ. ರಾ. ನಾಗರಾಜ, ಹುಳಿಯಾರು

ಒಂದು ಅಧಿವೇಶನಕ್ಕೆ ಗೆ. ಶ್ರೀಪತಿ ಗೆ. ಕೃಷ್ಣ ಹಾಗು ನಾನು ಹೋಗಿದ್ದೆವು. ಅಧಿವೇಶನದ ಸಿಹಿ, ಕಹಿ, ಉತ್ಸಾಹ, ಬೇಸರ, ವೈಭವ, ಅವ್ಯವಸ್ಥೆಗಳನ್ನೆಲ್ಲ ಕಂಡು ಕನಲಿ, ಚಳಿಯಲ್ಲಿ ನಡುಗಿ ಕೊನೆಗೆ ಬಂದ ದಾರಿಗೆ ಸುಂಕವಿಲ್ಲವೆಂದು ಕೊಂಡು ಅಲ್ಲಿಂದ ಹೊರಟೆವು.

ನಮ್ಮ ನಸೀಬ್ ಎನ್ನುವಂತೆ ಎರಡೂವರೆಗೆ ಒಂದು ಸ್ಪೆಷಲ್ ರೇಲ್ವೆ ಬಂಡಿ, ಚಿತ್ರದುರ್ಗದಿಂದ ಚಿಕ್ಕ ಜಾಜೂರಿಗೆ ಹೊರಡುವದಿತ್ತು. ಅದಕ್ಕಾಗಿ ರೇಲ್ವೆ ನಿಲ್ದಾಣಕ್ಕೆ ಬಂದೆವು. ಆಗಲೆ ೨-೧೫ ಆಗಿತ್ತು. ಮೂರನೆ ತರಗತಿಯ, ಬೋಗಿಗಳೆಲ್ಲ ಜನರಿಂದ ತುಂಬಿ, ಒಂಟಿಕಾಲಲ್ಲಿ ನಿಲ್ಲುವದೂ ಸಾಧ್ಯವಿರಲಿಲ್ಲ ತುಂಬಾ ಜನ. ರೇಲ್ವೆ ಬೋಗಿಗಳ ಮೇಲೆ ಕೆಲವರು ಏರಿ ಕುಳಿತಿದ್ದರು. ನಮಗೆ ಮೂರನೆ ತರಗತಿಯಲ್ಲಿ ಜಾಗ ದೊರೆಯದಿದ್ದರಿಂದ ಎರಡನೆ ತರಗತಿ ಗಾಡಿಯನ್ನೇರಿದೆವು. ಟಿಕೇಟು ತರದೆ ಹಾಗೇನೇ ಚಿಕ್ಕಜಾಜೂರವರೆಗೆ ಹೋಗೋಣ ಎಂದು ನಮ್ಮ ಇಷ್ಟವಿತ್ತು. ಆದರೆ ಟಿಕೆಟ್ ಕಲೆಕ್ಟರ ದುರ್ಗದ ನಿಲ್ದಾಣದಲ್ಲೇ ಚೆಕ್ ಮಾಡಲು ಬಂದ. ಆಗ ನಮ್ಮವರ ಕಡೆಯವರು ಟಿಕೇಟು ತರಲು ಹೋಗಿದ್ದಾರೆಂದು ಹೇಳಿ, ಟಿಕೇಟನ್ನು ತರಿಸಿದೆವು.

ನಮ್ಮ ಎದುರುಗಡೆ ಒಬ್ಬ ಮುದುಕಿಯೂ ಇತರರು ಕೆಲವರೂ ಕುಳಿತಿದ್ದರು. ಕೆಲವರು ಆ ಎರಡನೇ ತರಗತಿ ಡಬ್ಬಿಯಲ್ಲೂ ನಿಂತಿದ್ದರು. ಮೇಲಿನ ಭಾಗದಲ್ಲಿ ನಾಲ್ಕು ಮಂದಿ ಮಲಗಿದ್ದರು. ಡಬ್ಬಿಯು ಮೌನದಿಂದಲೇ ಇತ್ತು. ನಾನು ಕಿಟಕಿಗೆ ಒರಗಿದ್ದೆ. ಕೃಷ್ಣ ನಿದ್ರೆ ಮಾಡುತ್ತಿದ್ದ. ಶ್ರೀಪತಿ ನನ್ನ ಮೇಲೆ ಒರಗಿ, ಚಿಕ್ಕಂದಿನ ದಿನಗಳ ಒಂದೊಂದೂ ಅನುಭವವನ್ನು ಹೇಳುತ್ತಿದ್ದ. ಹಾಗೇ ಹೇಳುತ್ತಿದ್ದ ಅವನ ಮುಖದಲ್ಲಿ ಯಾವ ಭಾವಗಳಿಗೂ ಅವಕಾಶವಿರದೆ, ಗಂಭೀರ ಮುದ್ರೆ ವಹಿಸಿತ್ತು. ನಾನು ಸಹ ಅಷ್ಟೇ ಗಂಭೀರತೆಯಿಂದ ಅದನ್ನೆಲ್ಲ ಕೇಳುತ್ತಿದ್ದೆ.

ಹಾಗೇನೇ ನಾನೂ ನನ್ನ ಅನುಭವಗಳನ್ನು ಸಹ ಆಗಾಗ್ಗೆ, ಜ್ಞಾಪಿಸಿಕೊಂಡು ಹೇಳುತ್ತಿದ್ದೆ. ಹೀಗೆ ನಮ್ಮಿಬ್ಬರ ಪರಿಚಯ ಆದರೀತಿ, ಅದು ಬೆಳೆದ ರೀತಿ ಎಲ್ಲ ಪುನಃ ಸ್ಮರಣೆಗೆ ತಂದುಕೊಂಡು, ಸಾಗುತ್ತಿದ್ದೆವು. ಅಷ್ಟು ಹೊತ್ತಿಗೆ ನಾವು ಹಾಗೆಯೇ ಒಬ್ಬರ ಮೇಲೊಬ್ಬರು ಒರಗಿ ಕುಳಿತು ಸುಮಾರು ಒಂದು ಘಂಟೆಯು ಹೊತ್ತಾಗಿತ್ತೇನೊ. ಇದನ್ನೆಲ್ಲಾ ನೋಡುತ್ತಾ ಎದುರಿನ ಮುದುಕಿ ಕುಳಿತಿತ್ತು. ಅದನ್ನು ನಾವು ಆಗಾಗ್ಗೆ ಕಣ್ಣನ್ನು ಸುತ್ತ ಹೊರಳಿಸುತ್ತಾ ನೋಡಿದ್ದೆವು. ಅದು ಎಲ್ಲರ ಸ್ವಭಾವ ತಾನೆ. ನಾವು ಆ ಮುದುಕಿ ನಮ್ಮನ್ನು ನೋಡುತ್ತಿದ್ದದನ್ನು ಗಮನಿಸಲಿಲ್ಲ.

ಮುದುಕಿ ಎಂದಾಕ್ಷಣ ಹಲ್ಲು ಬಿದ್ದ, ಕಣ್ಣು ಒಳಹೊಕ್ಕ, ಮುಖ ಸುಕ್ಕುಗಟ್ಟಿ, ಕೆನ್ನೆಗಳು ಬತ್ತಿದ, ಸಾರಹೀರಿಹೋದ ಬಡಕಲು ಆಕೃತಿ ಎಂದು ತಿಳಿಯಬಾರದು. ವಯಸ್ಸಾಗಿ ಕೂದಲು ನರೆತದ್ದರಿಂದ ಹಾಗೆಂದೆ. ಆಕೆ ದೃಢಕಾಯಳಾಗಿ, ಮೈ ತುಂಬಿಕೊಂಡಿದ್ದಳು. ಅಂದಮೇಲೆ ಉಂಡುಟ್ಟು ದುಂಡಗಾಗಿದ್ದ ಶ್ರೀಮಂತರ ಮನೆಯ ಮುದುಕಿ ಎನ್ನಬಹುದು. ಕೈಗಳಿಗೆ ನಾಲ್ಕು ಜತೆ ಬಂಗಾರದ ಬಳೆಯನ್ನೂ ಕತ್ತಿನಲ್ಲಿ ಹಲಕೆಲವು ಹಾರಗಳನ್ನೂ ಹಾಕಿಕೊಂಡ, ಸಾಧಾರಣವಾಗಿ ರೈತರುಡುವಂತಹ ಸೀರೆಯುಟ್ಟಿತ್ತು ಮುದುಕಿ.

ಆ ಮುದುಕಿಯ ವಿಚಾರವಾಗಿ ನಾನು ಇಷ್ಟು ವರ್ಣಿಸುತ್ತಿರುವುದು ಏಕೆಂದು ಕುತೂಹಲವೆನಿಸುತ್ತದೆಯಲ್ಲವೆ? ಅದೇ ನಾನು ಹೇಳಬೇಕೆಂದಿರುವದು. ಒಟ್ಟಿನಲ್ಲಿ ಇದನ್ನೆಲ್ಲಾ ಕೇಳುವದರಿಂದ ಯಾವುದೂ ಪ್ರಯೋಜನವಿಲ್ಲ. ಕೊನೆಗೆ ಮುದುಕಿಯ ವಿಚಾರ ಕೇಳಿದ ಮೇಲೂ ಅಷ್ಟೆ. ಆದರೆ ಇದನ್ನು ಸೂಕ್ಷ್ಮವಾಗಿ ಯೋಚಿಸಿದಲ್ಲಿ ಇದರಲ್ಲಿರುವ ಗುಟ್ಟು ತಿಳಿಯುತ್ತದೆ.

ನಾನು ಶ್ರೀಪತಿ ಹಾಗೆ ಒರಗಿ ಕುಳಿತಾಗ ಆ ಮುದುಕಿ ಒಮ್ಮೆಲೇ ನನ್ನನ್ನು ಕರೆದು, "ನಿನ್ನ ಮೇಲೆ ಅವನ ವಜ್ಜೀ ಬಿಟ್ಟರೂ ತಡಕೊಂಡಿದೀಯಲ್ಲ ಎಷ್ಟು ಹೊತ್ತಿಂತ ಹಾಗಿರತೀ" ಅಂತು. ನಾನು ಏನೂ ತೊಂದರೆಯಿಲ್ಲವೆಂದೆ. ನಾನು ಹಾಗೆಂದ ಮರುಗಳಿಗೆಯಲ್ಲೇ ಪುನಃ ಮುದುಕಿ ಶ್ರೀಪತಿಯ ಮೇಲೆ ರೇಗಿದಂತೆ "ಬಡ್ಡಿ ಮಗನೆ ಹಂಗ ಅವನ ಮೇಲೆ ವಜೀ ಬಿಟ್ಟೀಯಲ್ಲ ಏಳು. ಪಾಪ! ಅವ ಎಷ್ಟಾಕಿನಿಂದ ತಡಕೊಂಡವ" ಎಂತ ಜೋರಾಗಿ ಹೇಳಿದಳು. ಆಷ್ಟು ಮಾತಿಗೆ ಡಬ್ಬಿಯಲ್ಲಿದ್ದವರೆಲ್ಲಾ, ನಿದ್ದೆಮಾಡುತ್ತಿದ್ದವರು, ಪತ್ರಿಕೆಯೋದುತ್ತಿದ್ದವರು, ಸಿಗರೇಟು ಸೇದುತ್ತಿದ್ದವರು, ಕಿಟಕಿಯ ಹೊರಗೆ ತಲೆಹಾಕಿ ನೋಡುತ್ತಿದ್ದವರೆಲ್ಲರ ಗಮನ ಸರಕ್ಕನೆ ಇತ್ತ ಸೆಳೆಯಲ್ಪಟ್ಟು, ಮುದುಕಿಯ ಮೇಲೆ ಎಲ್ಲರ ದೃಷ್ಟಿಯೂ ಕೇಂದ್ರೀಕೃತವಾಗಿ ನಮ್ಮಿಬ್ಬರ ಕಡೆ ದೃಷ್ಟಿ ಹೊರಳಹತ್ತಿತು.

ಈ ಬಾರಿ ಮುದುಕಿ ಶ್ರೀಪತಿಯನ್ನು ನಿನಗೇನು ಕಷ್ಟ ಆದಿ ಹೇಳು. ಅವನನ್ನ ಸಹಾಯ ಗೇಳ್ತಾ ಅದಿ. ನಾನು ಬೇಕಾದ್ರೆ ಈ ಬಳೆಗಳ ಕೊಡ್ತೀನೆ. ನಿನ್ನ ಕಷ್ಟನರ ಕಡಿಮಿ ಆಗಲಿ. ಪಾಪ ಅವಾಗಿಂದ ಅವನ ಮೇಲೆ ವಜೀಬಿಟ್ಟು ಕುಳಿತಿದ್ದಿ. ಬೇಕಾದ್ರೆ ಹೇಳು ಕೊಡ್ತೀನಿ ಪಾಪ! ನಿಮ್ಮ ಓದುನಲ್ಲಿ ಎಷ್ಟು ಕಷ್ಟಪಡ್ತಿದೀರೋ ಇಬ್ಬರೂ ಒಂದೇ ತರಗತಿ ಮುವರೇನೋ; ಎಂದಿತು. ನಾವು ಇಲ್ಲ, ನಾನು ಓದುತ್ತಿಲ್ಲ, ಇವನೊಬ್ಬನೇ ಎಂದು ಶ್ರೀಪತಿಯಕಡೆ ತೋರಿಸಿದೆ. ಕೊಡಲೇನು ಬಳೆಗಳನ್ನ ಎಂದು ಮುದುಕಿ ಕೇಳಿತು.

ಇಲ್ಲ, ಬೇಡ; ನಮ್ಮ ಹಿಂದಿನ ವಿಚಾರವನ್ನು ಒಬ್ಬರಿಗೊಬ್ಬರು ಹೇಳುತ್ತಿದ್ದೆವು ಎಂದೆವು. ನಮ್ಮ ಮಾತನ್ನೂ, ಮುದುಕಿಯ ವಾಗ್ವೈಖರಿಯನ್ನೂ ಕಂಡು ಡಬ್ಬಿಯಲ್ಲಿದ್ದವರೆಲ್ಲಾ ಮೂಗಿನ ಮೇಲೆ ಬೆರಳಿಟ್ಟುಕೊಂಡೆವು. ಹಿಂದಿನ ಕಾಲದವರಾದ, ಉದಾರಬುದ್ಧಿಯವರಾದ, ಇತರರ ಕಷ್ಟಗಳನ್ನರಿಯತಕ್ಕ ಬುದ್ಧಿಯುಳ್ಳ ನಮ್ಮ ಪೂರ್ವಿಕರ ಬಗ್ಗೆ ಇದಕ್ಕಿಂತ ನಿದರ್ಶನಬೇಕೇನು?

ಅನಂತರ ಮುದುಕಿಯು ಇಂದಿನ ಸಮಾಜದ ಬಗ್ಗೆ ಚರ್ಚೆ ಮಾಡಲು ಪ್ರಾರಂಭಿಸಿದಳು. ಇಂದಿನ ಕಾಲದ ಹುಡುಗಿಯರು ಬರೀ ಬೆಡಗಿನವರು, ಮುಖಾಲಂಕಾರದಲ್ಲೇ ಮಗ್ನರಾಗಿರತಕ್ಕವರೆಂದೂ ಆ ಮುದುಕಿಯ ವಾದ. ಅಲ್ಲದೆ ಹೆಂಗಸರು ಅಥವಾ ಹುಡುಗಿಯರು ಈಗ ಗಂಡಸರಂತೆ ತಿರುಗುವದು ಅಧಿವೇಶನಗಳಿಗೆ ಬಂದು ತಿರುಗುವುದೂ ಸರಿಯಲ್ಲ ಅವರೇನಿದ್ದರೂ ಮನೆಯಲ್ಲೇ ಮುಸುರಿ ತಿಕ್ಕಿಕೊಂಡು ಅಡಿಗೆ ಮಾಡಿಕೊಂಡಿರಬೇಕು ಅದೇ ಅವರ ಕೆಲಸ. ಸರಿ ಗಂಡಸಿನಂತೆ ತಿರುಗುವುದು ಸರಿಯಲ್ಲ. ಅವರೇನಿದ್ದರು ಮನೆಯಲ್ಲಿದ್ದೆ, ಎಲ್ಲವನ್ನೂ ಮಾಡಬೇಕು. ಮಕ್ಕಳನ್ನು ಒಳ್ಳೆಯರನ್ನಾಗಿ ಮಾಡಬೇಕು. ಮನೆಯಲ್ಲೇ ಮಕ್ಕಳನ್ನು ಸಾಕಿ, ದೇಶಸೇವೆ ಮಾಡಲು, ಬುದ್ಧಿವಂತರನ್ನಾಗಿ ಮಾಡಬೇಕು. ಅದು ಬಿಟ್ಟು ಗಂಡಸರಂತೆ, ತಿರುಗ್ತಾ, ಸ್ನೋ, ಪೌಡರ ಬೂದಿ ಹಚ್ಕೊಂಡು ಗಂಡಸರ ಮುಂದೆ ತಿರುಗ್ತಾ- ನನ್ನನ್ನು ಹಾಗೂ ಶ್ರೀಪತಿ ಕೃಷ್ಣರನ್ನು ಸಂಬೋಧಿಸಿ- ನಿಮ್ಮಂಥಾ ಹುಡುಗರನ್ನ ಕಣ್ಣು ಮಿಟುಕಿಸ್ತಾ, ಓಡಾಡಿ, ಕೈ, ಮೈ, ತಿರುವಿಕೊಂಡು ಓಡಾಡೂದು ಶುದ್ಧ ತರವಲ್ಲ. ಈ ಹುಡ್ಗೀರು ಹಿಂಗಾಡ್ತಿದ್ದಂಗೆ, ನೀವೆಲ್ಲಾ ಅವ್ರ ಹಿಂದೆ ಓಡ್ಯಾಡಿ, ಕೆಟ್ಹೋಗೋದು ಇದೆಲ್ಲಾ ಹೆಣ್ಣುಮಕ್ಕಳಿಗೆ ಸರಿಯಲ್ರಪ್ಪಾ. ಎಂತು ಆ ಮುದುಕಿ. ಹೆಂಗಸ್ರು ಏನಿದ್ರು ಮನೀವಳ್ಗೆ ಇರಬೇಕು. ಅದು ಸೈ.

"ಹಾಗಾದ್ರೆ ಹಿಂದೆ ಕೈಕೆ ಅಂಥವ್ರೆಲ್ಲಾ, ಯುದ್ಧಕ್ಕೆ ಹೋಗಿದ್ರಲ್ಲ, ಅದು ಸರೀನೇ" ಅಂತ ಡಬ್ಬಿಯಲ್ಲಿನ್ನ ಪ್ರಯಾಣಿಕರೊಬ್ಬರ ಪ್ರಶ್ನೆ.

ಅದಕ್ಕೆ ಮುದುಕಿಯ ಉತ್ತರ: ಅವ್ರು ಹಿಂಗೆಲ್ಲಾ ಕೈ, ಮೈ ತಿರುವಿಕೊಂಡು, ನಿಮ್ಮಂಥವರೆಲ್ಲಾ ಹಿಂದೆ ಬರೂ ಹಂಗೆ ಮಾಡಿಲ್ಲಲ್ಲ. ಅವ್ರೆಲ್ಲಾ, ಮಾತಾಯೋರು. ಈಗಿನೋರೋ ಹಿಂಗಾದ್ಕ್ಕೆ, ಮೈನೆರೆದು ಹತ್ತುವರ್ಷ ಆದ್ರೂ ಮದ್ವೆ ಆಗ್ದೆ, ಪೋಲಿಬಿದ್ದು, ಎಲ್ಲಾರ್ನ ಹಾಳ್ಮಾಡ್ತಿರೋದು ಹಿಂಗಿದ್ರೆ ಯಾರು ಮದ್ವೀ ಆಗ್ತಾರ ಇವಿಗೆ. ದುಡಿದದ್ದೆಲ್ಲಾ ಪೌಡರ್ಗೆ ಸಾಕಾಗ್ತದೆ. ಒಂದಡಗೀ ಬರಲ್ಲ. ಮುಸರಿ ತಿಕ್ಕೋಕೆ ಆಗಲ್ಲ. ಇದೆಲ್ಲಾ ಸರಿ ಅಲ್ಲ. ಇನ್ನ ಇವರ್ನ ಕಟ್ಕೊಂಡವ ಮನೀ ಮಾಡ್ದಂಗ ಆಗ್ತದ. ಕರ್ಚೀಫ್ ನ್ಯಾಲ್ ಕೊತು, ಬೂದಿ ಬಳ್ಕೊಂಡು ಇರೂದ್ರಲ್ಲೇ ಕಳೀತಾರೆ. ಇದ್ಯಾಕ್ರಪ್ಪ ಜನ. ಸರೀಯಾಗಿ ಅಡ್ಗೀ ಮಾಡೋದ್ಕಲಿತ್ರೆ ಮನಿ ಚೊಕ್ಕವಾಗಿಟ್ರೆ ಅದು ಸಂಸಾರ ಮಾಡೋದಸರಿಯಪ್ಪ ಎಂದು ಆ ಮುದುಕಿ ತನ್ನ ವಾದವನ್ನ ಎತ್ತಿ ಹಿಡಿದಳು.

ನಾವೆಲ್ಲಾ ಮುದುಕಿಯ ವಾದಕ್ಕೆ ಬೆಂಬಲ ಬೀಯುತ್ತಾ ಚೆನ್ನಾಗಿ ನಕ್ಕೆವು. ಅಣಕಿಸುವುದ

—೧೫ನೆಯ ಪುಟಕ್ಕೆ

ದೇಶಾಂತರಗಳಿಂದ

ಸೋವಿಯಟ್--ಅಮೇರಿಕಗಳಲ್ಲಿ ವಾಗ್ಯುದ್ಧ

ರಶಿಯ— ಅಮೇರಿಕಗಳಲ್ಲಿ ಸಂಧಾನ ಪ್ರಾರಂಭಿಸಲು ಅಮೇರಿಕ ಕಳುಹಿಸಿದ ಪತ್ರವನ್ನು ರಶಿಯವು ಬಹಿರಂಗಪಡಿಸಿದ್ದು ಮತ್ತು ಆ ಕಾರಣದಿಂದ ಅಮೇರಿಕ ಮುನಿದುಕೊಂಡು ರಶಿಯದ ಮೇಲೆ ಗಾಂಭೀರ್ಯಸ್ಫೋಟವಾಗಿದ ಆರೋಪ ಹೊರಿಸಿದ್ದು ಸುವೇದ್ಯವಿದೆ.

ಹೆನ್ರಿ ವ್ಯಾಲೇಸರ ಸಲಹೆಯಂತೆ ಮಾತುಕತೆ ನಡೆಸುವ ಬಗ್ಗೆ ತನ್ನ ಸಮ್ಮತಿ ಇದೆ ಎಂದು ಸ್ಟಾಲಿನ್ನರು ಸಾರಿದ್ದುಂಟು. ಆದರಿಂದ ಅಮೇರಿಕದ ಅಧ್ಯಕ್ಷ ಪದಕ್ಕೆ ತೃತೀಯ ಪಂಥದ ಹುರಿಯಾಳೆನಿಸಿದ ಹೆನ್ರಿ ವ್ಯಾಲೇಸರು "ಸ್ಟಾಲಿನ್ನರನ್ನು ಮಾತಾಡಿಸಬಲ್ಲ ಅಮೇರಿಕನ್ನನೆಂದರೆ ನಾನೊಬ್ಬನೇ'' ಎಂದು ಬೆನ್ನು ಚಪ್ಪರಿಸಿಕೊಂಡಿದ್ದಾರೆ. ಆಶ್ಚರ್ಯಕರವಾದ ರೀತಿಯಲ್ಲಿ ಶಾಂತಿಯುದ್ಧವನ್ನು ಮಾಸ್ಕೋಗೆ ಹೋಗಿ ಪ್ರಾರಂಭಿಸುವುದಾಗಿ ವ್ಯಾಲೇಸರ ಹೇಳಿಕೆಯಿದೆ.

ವ್ಯಾಲೇಸರ ಸೂಚನೆಗೆ ಉತ್ತರವಾಗಿ ಬಂದ ಸ್ಟಾಲಿನ್ನರ ೧೧ ಮುದ್ದೆಗಳ ಹೇಳಿಕೆಯನ್ನು

ಸ್ಟಾಲಿನ್ನರು

ಅಮೇರಿಕದ ಸರಕಾರ ವಿರೋಧಿಸಿದ್ದರಿಂದ ಮಾತುಕತೆಯ ಮಾರ್ಗದಲ್ಲಿ ಎಡರುಂಟಾಯಿತು. ಆ ೧೧ ಮುದ್ದೆಗಳನ್ನು ಸೋವಿಯೆಟ್ಟಿನ ಅಧಿಕೃತ ಸುದ್ದಿ ಕೂಟವು ಹೀಗೆ ವಿವರಿಸಿದೆ:

೧ ಆಯುಧ ಸಂಗ್ರಹ ಕಡಿಮೆ ಮಾಡುವುದು—

೧೯೪೬ ರಲ್ಲಿ ಸಂ. ರಾ ಸಂಘ ಆಯುಧ ಸಂಗ್ರಹ ಕಡಿಮೆಮಾಡುವ ಗೊತ್ತುವಳಿ ಪಾಸಾದರೂ ಅಮೇರಿಕ ಅದರ ವಿರುದ್ಧ ನಿಂತುದರಿಂದ ಅದು ಜಾರಿಗೆ ಬರಲಿಲ್ಲ; ಅಲ್ಲದೆ, ಅದು ಮನಸ್ವಿಯಾಗಿ ಸೈನ್ಯ ಮತ್ತು ಶಸ್ತ್ರಗಳನ್ನು ಹೆಚ್ಚಿಸುತ್ತಲೇ ಸಾಗಿದೆ.

೨ ಅಣುಶಕ್ತಿ—

ಸೋವಿಯಟ್ ಒಕ್ಕೂಟವು ಸಂಪೂರ್ಣವಾಗಿ ಅಣುಶಕ್ತಿಯ ಮಾರಕ ಪ್ರಯೋಗವನ್ನು ನಿಷೇಧಿಸುತ್ತದೆ. ಹೀಗೆ ವಿನಾಶ ಕಾರ್ಯಕ್ಕೆ ಇದನ್ನು ಬಳಸಬಾರದೆಂದು ಬಹಿಷ್ಕಾರ ಹಾಕಲು ಮಾಡಿದ ಸೂಚನೆಗಳೆಲ್ಲವನ್ನೂ ಅಮೇರಿಕ ನಿರಾಕರಿಸಿದೆ.

೩ ಜರ್ಮನಿಯಲ್ಲಿ ಶಾಂತಿ ಸ್ಥಾಪನೆ

ಸೋವಿಯೆಟ್ ಸೂಚಿಸಿದಂತೆ ಒಂದೇ ಒಂದು ಸಾಮಾನ್ಯ ಸರಕಾರವನ್ನು ಜರ್ಮನಿಯಲ್ಲಿ ಸ್ಥಾಪಿಸಲು ಅಮೇರಿಕ ಒಪ್ಪಲಿಲ್ಲ.

೪ ಜಪಾನಿನಲ್ಲಿ ಶಾಂತಿ ಸ್ಥಾಪನೆ—

ಪಾಟ್ಸ್‌ಡ್ಯಾಂ ನಿರ್ಣಯಗಳಂತೆ ಪರರಾಷ್ಟ್ರ ಮಂತ್ರಿ ಸಮ್ಮೇಳನದಲ್ಲಿ ಜಪಾನಿನ ಶಾಂತಿಯ ಕರಾರುಗಳು ನಿರ್ಣಯಿಸಲ್ಪಡಬೇಕಾಗಿತ್ತು. ಹಾಗೆ ಮಾಡದೆ ಅಮೇರಿಕನ್ನರು ಜಪಾನಿನ ಮಿಲಿಟರಿ ಆರ್ಥಿಕ ಶಕ್ತಿಯನ್ನು ಬೆಳೆಸಲು ಉಗ್ರಗಾಮಿಗಳಿಗೆ ನೆರವೀಯುತ್ತಿದ್ದಾರೆ.

೫ ಚೀನ—

ಸೋವಿಯಟ್ ಸೈನ್ಯಗಳು ಚೀನದಿಂದ ಹೊರಗಿವೆ; ಅಮೇರಿಕದ ಸೈನ್ಯ ಒಳಗಿದೆ. ಅದು ಒಳಗಿರುವುದರಿಂದಲೇ ಚೀನದಲ್ಲಿ ಯಾದವಿ ದಿಕ್ಕುದಿಕ್ಕಿಗೆ ಹರಡುತ್ತದೆ.

೬ ಕೊರಿಯ—

ಅಮೇರಿಕದ ಅಧಿಕಾರಿಗಳು ಅಪ್ರಜಾಸತ್ತಾತ್ಮಕವಾದ ಧೋರಣೆ ತಳೆದು ಉದ್ಧತರಾದ ಜಪಾನೀ ಪಕ್ಷಪಾತಿಗಳಿಗೆ ಪ್ರೋತ್ಸಾಹ ಕೊಟ್ಟದ್ದರಿಂದ ಮಾಸ್ಕೋ ಪರಿಷತ್ತಿನಲ್ಲಿ ನಿರ್ಣೀತವಾದಂತೆ ಕೊರಿಯಕ್ಕೆ ಸ್ವಾತಂತ್ರ್ಯವನ್ನು ಕೊಡಲಾಗಲಿಲ್ಲ.

೭ ರಾಷ್ಟ್ರೀಯ ಸಾರ್ವಭೌಮತ್ವ ಮತ್ತು ಒಳ ಆಡಳಿತ

ರಾಜಕೀಯ ಮತ್ತು ಆರ್ಥಿಕ ಒತ್ತಾಯಹೇರಿ ಅನೇಕಸಲ ಅಮೇರಿಕವು ಇತರ ದೇಶಗಳ ಒಳ ಆಡಳಿತದಲ್ಲಿ ಕೈಹಾಕಿದೆ. ಉದಾ— ಇಟಲಿ ಮತ್ತು ಗ್ರೀಸ್ ದೇಶಗಳು.

೮ ಯುದ್ಧ ಠಾಣ್ಯಗಳು—

ಸಂ. ರಾ. ಸಂಘ ಸ್ಥಾಪಿತವಾದ ಮೇಲೆ ಮತ್ತು ಯುದ್ಧ ಮುಗಿದ ಮೇಲೆ ಅಂತಹ ಠಾಣ್ಯಗಳನ್ನು ಅಮೇರಿಕ ಇಟ್ಟುಕೊಂಡಿರುವುದು ನ್ಯಾಯವಲ್ಲ; ಅವರಲ್ಲೂ ಠಾಣ್ಯಗಳನ್ನು ಅನ್ಯದೇಶಗಳಲ್ಲಿ ಸೋವಿಯಟ್ ಗಡಿಯ ಹತ್ತಿರವೇ ಸ್ಥಾಪಿಸಿಕೊಳ್ಳಲಾಗಿದೆ.

೯ ಅಂತಾರಾಷ್ಟ್ರೀಯ ವ್ಯಾಪಾರ—

ಅಮೇರಿಕವು ಅನ್ಯದೇಶಗಳಿಗೆ ಹೆಚ್ಚು ಪಕ್ಷಪಾತ ತೋರಿ ಸೋವಿಯಟ್ಟನ್ನು ಕಡೆಗಣಿಸಿದೆ.

೧೦ ಯುದ್ಧ ಸಂತ್ರಸ್ತರಾಷ್ಟ್ರಗಳಿಗೆ ಸಹಾಯ—

ಸಂ. ರಾ. ಸಂಘದ ಮೂಲಕ ಈ ನೆರವನ್ನು ಸಲ್ಲಿಸದೆ ಅದನ್ನು ಅಲಕ್ಷಿಸಿ ಸ್ವತಃ ಸಂತ್ರಸ್ತರಾಷ್ಟ್ರಗಳಿಗೆ ಅಮೇರಿಕವು ಸಹಾಯ ನೀಡಿದುದು ಸ್ವಾರ್ಥಕ್ಕಾಗಿ, ಇದನ್ನು ಸಂ. ರಾ. ಸಂಘವು ಅನ್ಯಾಯವೆಂದು ಸಾರಿದೆ.

೧೧ ಪ್ರಜಾಸತ್ತೆ ಮತ್ತು ನಾಗರಿಕ ಹಕ್ಕುಗಳು—

ಪ್ರಜಾಸತ್ತೆ ಮತ್ತು ನಾಗರಿಕ ಹಕ್ಕುಗಳನ್ನು ಸಂರಕ್ಷಿಸುವುದರ ಬದಲು ಅನ್ಯದೇಶಗಳಲ್ಲಿ ಅಮೇರಿಕವು ಫ್ಯಾಸಿಸ್ಟ, ಅಪ್ರಜಾಸತ್ತಾತ್ಮಕ ಮತ್ತು ವಿಧ್ವಂಸಕ ಸಂಗಡಿಗಳಿಗೆ ಬೆಂಬಲವಿತ್ತಿರುವುದನ್ನು ಗ್ರೀಸ, ಸ್ಪೇಯಿನ್ ಮತ್ತು ಪರ್ಶಿಯಗಳಲ್ಲಿ ಕಾಣಬಹುದು.

ಪ್ರಜಾಸತ್ತೆ ಮತ್ತು ನಾಗರಿಕ ಹಕ್ಕುಗಳನ್ನು ಕಾಯುವುದನ್ನು ಸೋವಿಯಟ್ ಒಕ್ಕೂಟವು ಒತ್ತಿ ಹೇಳುತ್ತದೆ.

ಈ ಆರೋಪಗಳಿಗೆ ಪ್ರತ್ಯಾರೋಪಗಳನ್ನು ಅಮೇರಿಕವು ಕಳಿಸುವುದು ನಿಶ್ಚಿತ. ಹೀಗಾದರೆ ಅರಬ ಯಹೂದಿಗಳಂತೆಯೇ ಈ ಎರಡು ರಾಷ್ಟ್ರಗಳೂ ಉಗ್ರತರ ಘರ್ಷಣದಿಂದ ಜಗತ್ತನ್ನು ವಿನಾಶದತ್ತ ಒಯ್ಯಬಹುದು.

ಪಾಲಿಸ್ತಾನದ ರಕ್ತತರ್ಪಣ

ಮೇ ೨೧ ರಂದು ಸಂ. ರಾ. ಸಂಘದ ಶಾಂತಿ ಸಮಿತಿಯು ಭದ್ರತಾಮಂಡಲಕ್ಕೆ— ಒಂದು, ತಟಸ್ಥ ಸಶಸ್ತ್ರ ಸೈನ್ಯವನ್ನು ಜೆರೂಸಲೇಮಿಗೆ ಕಳಿಸಿ ತನ್ನ ಯುದ್ಧ ನಿಲ್ಲಿಸಬೇಕೆಂಬ ಆಜ್ಞೆಯನ್ನು ಅರಬ ಮತ್ತು ಯೆಹೂದಿಗಳ ಮೇಲೆ ಜಾರಿ ಮಾಡಬೇಕು— ಎಂದು ಬಿನ್ನವಿಸಿಕೊಂಡಿತು. ಹೀಗೆ ಮಾಡದಿದ್ದರೆ ಅರಬ ಯೆಹೂದಿಗಳ ಯುದ್ಧವು ಕಡೆತನಕ ಹಾಗೇ ಸಾಗೀತು ಎಂದು ಅದು ಎಚ್ಚರಿಕೆ ಕೊಟ್ಟಿತು.

ಶಾಂತಿ ಸಮಿತಿಯವರು ಪಾಲಿಸ್ತಾನಕ್ಕೆ ತೆರಳಿ ಅರಬ ಯೆಹೂದಿಗಳೊಡನೆ ಸಂಧಾನ ಪ್ರಯತ್ನದಲ್ಲಿದ್ದಾಗ ಅವರ ಮೇಲೆ ಗುಂಡು ಹಾರಿಸಲಾಯಿತು.

ಅರಬರಿಗೆ ಸಹಾಯ ಸಲ್ಲಿಸಿದ್ದಕ್ಕೂ ಭದ್ರತಾಮಂಡಲವು ಯುದ್ಧದಲ್ಲಿ ಕೈಹಾಕುವುದನ್ನು ವಿರೋಧಿಸಿದ್ದಕ್ಕೂ ರಶಿಯದ ಪ್ರತಿನಿಧಿಯಾದ ಗ್ರಾಮಿಕೋ ಭದ್ರತಾಮಂಡಲದಲ್ಲಿ ಬ್ರಿಟಿಶರನ್ನು ಟೀಕಿಸಿದನು. ಅಮೇರಿಕದ ಯೋಜನೆಯಂತೆ ಮಂಡಲವು ಯುದ್ಧ ನಿಲ್ಲಿಸಿ ಅರಬರ ಮೇಲೆ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಅವನು ವಾದಿಸಿದನು ಜೊತೆಗೆ ಬ್ರಿಟನ್ನಿಗೆ ಬೆಂಬಲವಿತ್ತ ಚೀನ ಮತ್ತು ಬೆಲ್ಜಿಯಮ್ಮುಗಳನ್ನು ಗ್ರಾಮಿಕೋ ನಿಂದಿಸಿದನು.

ಸಭೆಯಲ್ಲಿ ಯುದ್ಧ ನಿಲ್ಲಿಸಲು ನಿರ್ಣಾಯಕ

ಸ್ಟಾಲಿನ್ನರನ್ನು ಮಾತಾಡಿಸಬಲ್ಲ ಅಮೇರಿಕನ್ನನೆಂದರೆ ನಾನೊಬ್ಬನೇ'' ಎನ್ನುತ್ತಾರೆ ಅಮೇರಿಕದ ಹೆನ್ರಿ ವ್ಯಾಲೇಸರು!

ಕ್ರಮ ತೆಗೆದುಕೊಳ್ಳುವ ಬಗ್ಗೆ ಒಮ್ಮತಕ್ಕೆ ಬರಲಾಗಲಿಲ್ಲ.

ಪಂಚ ಮಹಾಪ್ರಭುತ್ವಗಳು ಶ್ರೀ ಕೌಂಟ್ ಫೋಕ್ ಬರ್ನಡೋತರನ್ನು ಪಾಲಿಸ್ತಾನದ ಪಂಚಾಯತಿಕೆಯ ಮಧ್ಯಸ್ಥರನ್ನಾಗಿ ಆರಿಸಿದವು. ಅವರು ಸ್ವೀಡನ್ನಿನ ರೆಡ್‌ಕ್ರಾಸ್ ಸಂಘದ ಅಧ್ಯಕ್ಷರು ಮತ್ತು ಗುಸ್ತಾಫರಾಜರ ಸೋದರ ಅಳಿಯಂದಿರು.

ಅರಬ ಮತ್ತು ಇಜಿಪ್ತ ಸೈನಿಕರು ಒಟ್ಟಾಗಿ ಜೆರೂಸಲೇಮಿನ ಮೇಲೆ ಏರಿ ಹೋಗಿದ್ದಾರೆ ಅಲ್ಲಿ ಸಾವಿರ ಯೆಹೂದಿ ಭಟರು ಇವರನ್ನು ಎದುರಿಸಲು ಭೀಷ್ಮಪ್ರತಿಜ್ಞೆ ಮಾಡಿದ್ದಾರೆ. ಯೆಹೂದಿಗಳಿಗೆ ಅಗಲೆ ಬಹಳ ಕಷ್ಟನಷ್ಟ ಸಂಭವಿಸಿದೆ ಎಂದು ತಿಳಿಯುತ್ತದೆ.

ಟ್ರಾನ್ಸ ಜೋರ್ಡನ್ನಿನ ಸಮಾಜ ಪ್ರದೇಶ ಲೆಬನಾನ್ ಮತ್ತು ಸಿರಿಯಗಳ ಗಡಿ ಈ ಎಲ್ಲೆಡೆ ಯೆಹೂದಿಗಳ ವಿಮಾನ ದಾಳಿ ಸಾಗಿದೆ ಟಾಂಟೂರ ಎಂಬ ಸಣ್ಣವಾದರೂ ಅರಬರಿಗೆ ಮುಖ್ಯ ಠಾಣ್ಯವೆನಿಸಿದ ಬಂದರನ್ನು ಅವರು ಹಿಡಿದರು.

ಮೇ ೨೪ ರ ಸಂಜೆ ೪ ಗಂಟೆಯೊಳಗೆ ಭದ್ರತಾಮಂಡಲದ ಆದೇಶದ ಮೇರೆಗೆ ಕೈದುಗಳನ್ನು ಕೆಳಗಿಡಬೇಕಿತ್ತು; ಆದರೆ ಇಡಲಿಲ್ಲ ಶಾಂತಿ ಪ್ರಯತ್ನದಲ್ಲಿ ಅಮೇರಿಕದ ರಾಯಭಾರಿಯಾದ ಶ್ರೀ ಥಾಮಸ್ ವ್ಯಾಸನ್ನರು ಗುಂಡುತಾಗಿ ಮಡಿದರು. ಅರಬ ಯೆಹೂದಿಗಳಲ್ಲಿ ಪ್ರತಿಯೊಬ್ಬರೂ ಪರಸ್ಪರರ ಮೇಲೆ ತಪ್ಪು ಹೊರಿಸುತ್ತಿರುವರಲ್ಲದೆ ತಂತಮ್ಮ ದೋಷದತ್ತ ಲಕ್ಷ್ಯ ಕೊಡುತ್ತಿಲ್ಲ.

ಅರಬರು ಯುದ್ಧ ನಿಲ್ಲಿಸದಿದ್ದಲ್ಲಿ ಉಗ್ರರೂಪವಾಗಿ ಪಾಲಿಸ್ತಾನದ ಪ್ರಶ್ನೆಯ ಬಗ್ಗೆ ಮತ್ತೊಂದು ಬಿನ್ನಹವನ್ನು ತರಬಹುದೆಂದು ತಜ್ಞರ ಮತ; ಅಲ್ಲದೆ ಪಾಲಿಸ್ತಾನಕ್ಕೆ ಆಯುಧ ನಿರ್ಯಾತ ಮಾಡಲು ಅಮೇರಿಕಕ್ಕೆ ಕೇಳಿಕೊಳ್ಳಬಹುದು ಎಂದೂ ಹೇಳಲಾಗುತ್ತಿದೆ.

ಅಮೇರಿಕವು ಆಯುಧ ನಿರ್ಯಾತ ನಿರ್ಬಂಧವನ್ನು ತೆಗೆದುಹಾಕಿದರೆ ಅದು ಮತ್ತು ಕದನ ಸಂಬಂಧ ಕೆಡಬಹುದು ಎಂದು ಲಂಡನ್ನಿನಲ್ಲಿ ಹೇಳಲಾಗುತ್ತಿದೆ. ತಾವೂ ಅಮೇರಿಕನ್ನರೂ ಸೇರಿ ಒಪ್ಪಂದಕ್ಕೆ ಹೊಸ ಹಾದಿ ಹಾಕಿಕೊಡಬೇಕೆಂದು ಬ್ರಿಟಿಶರ ವಿಚಾರ.

ಬ್ರಿಟಿಶ ಯೆಹೂದಿಗಳ ಸಂಘವು ಬ್ರಿಟನ್ನು ಅರಬರಿಗೆ ಆಯುಧ ಮತ್ತು ಹಣ ಕೊಡುವುದನ್ನು ನಿಲ್ಲಿಸಿ ಹೊಸದಾಗಿ ಸ್ಥಾಪಿತವಾದ ಇಸ್ರೇಲ್ ರಾಜ್ಯಕ್ಕೆ ಮನ್ನಣೆ ಕೊಡಬೇಕೆಂದು ಬಿನ್ನವಿಸಿಕೊಂಡಿದೆ

ಅರಬರು ಮುತ್ತಿಗೆ ಹಾಕಲು ಬಂದದ್ದೆಂದರೆ ಬ್ರಿಟಿಶರು ಹಿಂಬಾಗಿಲಿಂದ ಆಕ್ರಮಿಸಲು ದಂಡೆತ್ತಿ ಬಂದದ್ದೇ ಎಂದು ಯೆಹೂದಿ ವಕ್ತಾರನೊಬ್ಬನೆಂದ.

ಪವಿತ್ರ ನಗರವೆನಿಸಿದ ಜೆರೂಸಲೇಮಿನಲ್ಲಿ ಅಪವಿತ್ರ ಬುದ್ಧಿಯ ಪರಿಣಾಮವಾಗಿ ರಕ್ತತರ್ಪಣ ನಡೆಯುವುದು ನಿಲ್ಲುವಂತಿಲ್ಲ ಎನಿಸಿದೆ. ಈ ರಣಚಂಡಿಯ ಆರಾಧನೆಯಿಂದ ಜಗತ್ತಿನ ಶಾಂತಿ ಕೆಲವೇ ಕಾಲದಲ್ಲಿ ಭಂಗಹೊಂದುವ ಸಂದರ್ಭ ದಿನೇದಿನೇ ಉಗ್ರತರವಾಗುತ್ತಿದೆ

ವಿಚಿತ್ರವಿಶ್ವ

ಅಮೇರಿಕದ ಬ್ರೂಕ್ಲಿನ್ ಎಂಬಲ್ಲಿ ಪರಿಣತ ಕತ್ತರಿ ಕಳ್ಳನಾದ ಸ್ಯಾಮ್ಯುಯಲ್ ಹೆಂಫಿನ್ನನು ಪೋಲೀಸರು ಹಿಡಿದಾಗ 'ಛೀ; ಏಳಿಡು ಚಳಿಗಾಲದ ಪ್ರಾರಂಭದಲ್ಲೇ ನನ್ನನ್ನು ಹಿಡಿಯುವದೇ? ಇಡಿ ಚಳಿಗಾಲದಲ್ಲಿ ನೀವು ಒಂದು ಬಿಡಿಗಾಸನ್ನೂ ಸಂಪಾದಿಸಲಾರಿರಿ. ಜನರು ಕೋಟಿನ ಮೇಲೆ ಕೋಟು ಹೇರಿಕೊಂಡಿರುತ್ತಾರೆ, ಆದರಿಂದ ಅವರ ಕಡೆಯಿಂದ ಏನನ್ನೂ ಕಿತ್ತುಕೊಳ್ಳಲಾಗುವದಿಲ್ಲ ಎಂದನು.

\+ + +

ಇಂಗ್ಲೆಂಡಿನ ಬ್ರಿಸ್ಟಲ್ಲಿನಲ್ಲಿ ಆರ್ಥರ್ ಐಲ್ಸ ಎಂಬವನ ಹೆಂಡತಿ ಗಂಡನೊಡನೆ ಊಟಮಾಡುವದಿಲ್ಲವೆಂದೊಡನೆ, ಆತನು ಅವಳು ಹಾಸಿಗೆಯ ಮೇಲೆ ಅಪರಿಚಯಸ್ಥನೊಬ್ಬನಿಗೆ ತಿಂಡಿ ತೀರ್ಥ ತಿನಿಸುತ್ತಿದ್ದುದನ್ನು ಪ್ರಮಾಣೀಕರಿಸಿ ಕೋರ್ಟಿನಲ್ಲಿ ಸೋಡಚೀಟಿ ಪಡೆದನು.


○ ○ ○

ಆಲ್ಬೇನಿಯದಲ್ಲಿ ಕೆಲ ಕಳ್ಳರು ಬಂದು ಚರ್ಚಿನಿಂದ ೪೫೧ ಡಾಲರನ್ನು ಕದ್ದರು. ಅವುಗಳಲ್ಲಿ ೨೫೧ ಚರ್ಚಿನ ಆಸ್ತಿ ಎಂದು ತಿಳಿದ ಮೇಲೆ ಅದನ್ನು ತಿರುಗಿ ಒಪ್ಪಿಸಿ, ಅಲ್ಲಿಯ ಕೋಶಾಧಿಕಾರಿಯ ಸ್ವಂತ ಹಣವಾದ ಮಿಕ್ಕ ೨೦೦ ಡಾಲರುಗಳನ್ನು ತಾವಿಟ್ಟುಕೊಂಡರು.

× × ×

ತನಗೂ ತನ್ನ ಗೆಳತಿಯೊಬ್ಬಳಿಗೂ ಜಗಳವಾದಾಗ ಅದನ್ನು ತೀರ್ಮಾನಿಸಲು ತನ್ನ ಗಂಡನು ಇಸ್ಪೀಟು ಎಲೆಗಳನ್ನು ಕಲಿಸಿದರೂ ಅದನ್ನು 'ಕಟ್' ಮಾಡಲು ಧೈರ್ಯ ತಾಳಲಿಲ್ಲವೆಂಬ ಆರೋಪದ ಮೇಲೆ ಶ್ರೀಮತಿ ಹೆರಲ್ ಎಸ್. ಹೋನ್ ಎಂಬ ಅಮೇರಿಕನ್ ಹೆಂಗಸು ವಿವಾಹ ವಿಚ್ಛೇದ ಮಾಡಿಕೊಂಡಳು!

ಕಾಲು ಚೆಂಡಾಟವೆಂದರೆ ಎಲ್ಲರಿಗೂ ಗೊತ್ತು. ರಬ್ಬರಿನ ಚೆಂಡು ತೆಗೆದುಕೊಂಡು ಕಾಲಿನಿಂದ ಒದ್ದಾಡುತ್ತಾರೆ ಆಫ್ರಿಕದಲ್ಲೂ ನೀಗ್ರೋಗಳು ಕಾಲು ಚೆಂಡಾಟ ಆಡುತ್ತಾರೆ. ಆದರೆ ರಬ್ಬರಿನ ಚೆಂಡನ್ನು ಅವರು ಬಳಸುವದಿಲ್ಲ, ಮನುಷ್ಯನ ತಲೆಬುರುಡೆಯನ್ನು!



ಬಾಲಪ್ರಪಂಚ

ಮಗು,

ಹಿಂದಿನ ಸಲ ನಾನು ಕರ್ಮವೀರದಲ್ಲಿ ನಿನಗಾಗಿ ಬರೆದಾಗ್ಗೆ ಲೇಕ್‌ಸಕ್ಸೆಸ್ಸಿನಲ್ಲಿ ನಡೆದ ಮಕ್ಕಳ ದೊಡ್ಡ ಸಭೆಯ ಸುದ್ದಿ ನಿನಗೆ ಮುಟ್ಟಿಸಿದ್ದೆ. ಈ ವಾರ ನಿನಗೆ ಅದಕ್ಕಿಂತಲೂ ಸ್ವಾರಸ್ಯವಾದ ಸಮಾಚಾರವನ್ನು ಕೊಡುವವನಿದ್ದೇನೆ. ಅದೀಗ ಮಕ್ಕಳ ರಾಜ್ಯದ ಕಥೆ.

* * *

ಕಥೆಯೆಂದು ಹೇಳಿದರೆ ಇದೇನು "ಪಾತಾಳದಲ್ಲಿ ಪಾಪಚ್ಚಿ" ಯಂತೆ ಕಟ್ಟುಕತೆಯೆಂದು ನೆನೆಯಬೇಡ. ನಿಜವಾಗಿಯೂ ಈ ಮಕ್ಕಳ ರಾಜ್ಯ ಇಂದಿಗೂ ಈ ಕ್ಷಣ ಕೂಡ ನಡೆಯುತಿದೆ.

ಕಳೆದ ಸಲ ಮಾಡಿದಂತೆ ಈ ವಾರವೂ ನಿನ್ನನ್ನು ಮತ್ತೆ ಅಮೇರಿಕಕ್ಕೇ ಕರೆದುಕೊಂಡು ಹೋಗಬೇಕಾಗುತ್ತದೆ. ಅಮೇರಿಕ ಎಂದರೆ ಪಾಪಚ್ಚಿಯ ಪಾತಾಳದಂತೆ ವಿಚಿತ್ರ ರಾಜ್ಯ. ಅಲ್ಲಿಯ ಜನರು ಬಳ್ಳೆ ಬುದ್ಧಿವಂತರು. ಮಕ್ಕಳನ್ನು ಸುಖವಾಗಿ ಇಡಲು

ಮಕ್ಕಳ ಪಟ್ಟಣದ ಒಂದು ಅಂಗಡಿ

ಅವರು ಅನೇಕ ಉಪಾಯಗಳನ್ನು ಮಾಡಿದ್ದಾರೆ.

ಅಮೇರಿಕದ ಸಾಂತಾ ಮರಿಯಾ ಎಂಬ ಪಟ್ಟಣದ ಬಳಿ ಮಕ್ಕಳದೇ ಒಂದು ಸಣ್ಣ ಪಟ್ಟಣವಿದೆಯೆಂದರೆ ನೀನು ನಂಬಲಿಕ್ಕಿಲ್ಲ ಆದರೆ ಅದು ನಿಜ. ಅದರಲ್ಲಿಬವವರೆಲ್ಲ ಮಕ್ಕಳೆ. ಆ ಪಟ್ಟಣದ ವಿಸ್ತಾರ ಒಟ್ಟು ೪೫,೦೦೦ ಚೌರಸ ಫೂಟು. ಅಂದರೆ ಒಂದು ದೊಡ್ಡ ಹೊಲದಷ್ಟು ಎಂದು ತಿಳಿದುಕೊಳ್ಳಿರಿ. ಆದರೆ ಇಷ್ಟೇ ಸಣ್ಣ ಪಟ್ಟಣದಲ್ಲಿಯೂ ದೊಡ್ಡವರ ಪಟ್ಟಣದಲ್ಲಿರುವ ಎಲ್ಲ ಸಂಗತಿಗಳೂ ಇವೆ. ಅಲ್ಲಿ ಟಪಾಲ ಕಚೇರಿಯಿದೆ, ಬ್ಯಾಂಕಿದೆ, ಪುಸ್ತಕಾಲಯವಿದೆ. ಪತ್ರಿಕೆಯಿದೆ, ಮುನಸಿಪಾಲಿಟಿಯಿದೆ ಅಂಗಡಿಗಳು, ಮನೆಗಳು, ಪೇಟೆಗಳು, ರಸ್ತೆಗಳು ಎಲ್ಲ ಇವೆ. ಹೂಹಣ್ಣುಗಳ ತೋಟ, ಕೆರೆಕುಂಟೆಗಳು ಕೂಡ ಅಲ್ಲಿವೆ. ಇವೆಲ್ಲವನ್ನು ನಡೆಸುವವರು ಬೇರಾರೂ ಅಲ್ಲ—ನಿನ್ನಂಥ ಮಕ್ಕಳು. ಅವರೇ ತಮ್ಮ ಪುಟ್ಟ ಮುನಸಿಪಾಲಿಟಿಯ ಅಧ್ಯಕ್ಷರನ್ನು ಆರಿಸುತ್ತಾರೆ, ಪುಟ್ಟ ಆಸ್ಪತ್ರೆಗಳಲ್ಲಿ ಪುಟ್ಟ ಹುಡುಗರಿಗೆ ಸಣ್ಣಪುಟ್ಟ ರೋಗಗಳಿಗೆ ಸಣ್ಣಪುಟ್ಟ ಔಷಧಗಳನ್ನು ಕೊಡುತ್ತಾರೆ ಪುಟ್ಟ ಗಿರಾಕಿಗಳಿಗೆ ಪುಟ್ಟ ಅಂಗಡಿಗಳಲ್ಲಿ ಬೇಕಾದ ವಸ್ತುಗಳನ್ನು ಮಾರುತ್ತಾರೆ. ಇದಕ್ಕೆ ಬೇಕಾದ ಹಣವನ್ನು ತಮ್ಮದೇ ಪುಟ್ಟ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುತ್ತಾರೆ. ಇದೆಲ್ಲದರ ಲೆಕ್ಕವನ್ನು ಅವರೇ ತಮ್ಮ ಪುಟ್ಟ ಪುಸ್ತಕಗಳಲ್ಲಿ ಬರೆದಿಡುತ್ತಾರೆ. ಅವರ ಪುಟ್ಟ ಟಪಾಲ ಕಚೇರಿಯಲ್ಲಿ ದೂರ ದೂರ ದೇಶಗಳ ಸಣ್ಣ ದೊಡ್ಡವರಿಗೆ ಪತ್ರಗಳು ಹೋಗುತ್ತವೆ, ಬರುತ್ತವೆ. ಪುಟ್ಟ ಟಪಾಲ ಪೇದೆಗಳು ಅವುಗಳನ್ನು ಆಯಾ ವಿಳಾಸದವರಿಗೆ ತಂದುಕೊಡುತ್ತಾರೆ. ಅದು ಮಕ್ಕಳ ರಾಜ್ಯವೆಂದು ಅದಕ್ಕೇ ಹೇಳಿದೆ.

* * *

ನಿನಗೆ ಆಶ್ಚರ್ಯವಾಗಬಹುದು— ಈ ಮಕ್ಕಳ ರಾಜ್ಯವೆಂದರೆ ನಿಜವಾಗಿ ಒಂದು ಶಾಲೆ. ಆ ಶಾಲೆಯ "ಅಕ್ಕಾ ಅವರು" (ಮಾಸ್ತರಿಣಿ)ಬೀನಾ ಫುಲರ್ ಎಂಬವರು. ಮಕ್ಕಳಿಗೆ ಶಾಲೆಯೆಂದರೆ ಬೇಸರವಲ್ಲವೆ? ಎಷ್ಟೋ ಮಕ್ಕಳು ಶಾಲೆಗೆ ಹೋಗದೆ ತಪ್ಪಿಸಿಕೊಳ್ಳುವದು ನನಗೆಗೊತ್ತಿದೆ. ನೀವು ಮಕ್ಕಳು ಹೀಗೆಲ್ಲ ಏಕೆ ಮಾಡುತ್ತೀರಿ? ನಿಮಗೆ ಆಟವೆಂದರೆ ಪ್ರೀತಿ; ಪಾಠವೆಂದರೆ ಭೀತಿ. ಮಾಸ್ತರರು ಪಾಠ ಹೇಳುವಾಗ ನಿಮ್ಮ ಮನಸ್ಸು ಆಟದ ಕಡೆ ಓಡುತ್ತದೆ. ಶಾಲೆ ಯಾವಾಗ ಬಿಟ್ಟೇವಪ್ಪಾ ಎಂದು ಗಡಿಯಾರ ನೋಡುತ್ತೀರಿ. ಬೇಸರದಿಂದ ಆಕಳಿಸುತ್ತೀರಿ ಇದನ್ನೆಲ್ಲ ನೋಡಿ ಬೀನಾಫುಲರರು ಆಲೋಚನೆ ಮಾಡಿಯೆ ಮಾಡಿದರು. ಈ ಮಕ್ಕಳು ಬೇಸರವಿಲ್ಲದೆ ಪಾಠ ಕಲಿಯುವಂತೆ ಮಾಡುವದು ಹೇಗೆ? ಮಕ್ಕಳಿಗೆ ಆಟವೆಂದರೆ ಪ್ರಾಣವಲ್ಲವೆ? ಹಾಗಾದರೆ ಎಲ್ಲ ಪಾಠವನ್ನು ಆಟವಾಗಿ ಮಾಡಿಬಿಡೋಣ ಎನ್ನಿಸಿತು ಅವರಿಗೆ. ಮಕ್ಕಳು ಆಡುವದು ಯಾವಾಗಲೂ ದೊಡ್ಡವ ಆಟವನ್ನೆ. ಮನೆಕಟ್ಟುವ ಆಟ, ಅಂಗಡಿಯ ಆಟ, ಟಪಾಲು ಪೇದೆಯ ಆಟ, ಆ ಆಟ ಈ ಆಟ ದೊಡ್ಡವರಂತೆ ಆಗಬೇಕೆಂಬುದೇ ನಿಮ್ಮ ಹಂಬಲ. ಅದಕ್ಕಾಗಿ ನಿಜವಾಗಿ ಮನೆಕಟ್ಟುವ ಆಟ, ಅಂಗಡಿ ಇಡುವ ಆಟ, ಲೆಕ್ಕ ಬರೆಯುವ ಆಟ' ಬ್ಯಾಂಕಿನ ಆಟ, ಸಂತೆಯ ಆಟ, ಆಸ್ಪತ್ರಿಯ ಆಟ, ವೋಟು ಹಾಕುವ ಆಟಗಳನ್ನು ಆಡೋಣ ಎಂದು ತಮ್ಮ ಮಕ್ಕಳಿಗೆ ಹೇಳಿದರು ಅವರು. ಮಕ್ಕಳು ಸಂತೋಷದಿಂದ ಒಪ್ಪಿದರು. ಯಾರೋ ಪುಣ್ಯಾತ್ಮರು ಇದಕ್ಕೆ ಬೇಕಾದ ಭೂಮಿಯನ್ನು ದಾನ ಕೊಟ್ಟರು. ಯಾರು ಸಿಮೆಂಟು ಕೊಟ್ಟರು, ಅದು ಕೊಟ್ಟರು ಇದು ಕೊಟ್ಟರು. ಮಕ್ಕಳು ಆಡುತ್ತಾಡುತ್ತ ಅಕ್ಕಾವರ ಹೇಳಿಕೆಯಂತೆ ಎಲ್ಲ ಕಟ್ಟಿದರು. ಅಂಗಡಿ, ಬ್ಯಾಂಕು, ಮಾಡಿದರು, ಲೆಕ್ಕ ಬರೆದರು. ಇದರ ಸಂಗಡ ಅವರಿಗೆ ಲೆಕ್ಕ ಬರೆಯಲಿಕ್ಕೆ ಗೊತ್ತಾಯಿತು. ಟಪಾಲಿನ ಆಟ ಆಡುವಾಗ ಸುಲಭವಾಗಿ ಭೂಗೋಲ ಪಾಠ ಬಂತು. ಎಲ್ಲ ಪಾಠಗಳೂ ಆಟದಿಂದಲೇ ಬಂದವು.

* * *

ಈ "ಪಟ್ಟಣದ"ಲ್ಲಿ ಕಲಿತ ಎಷ್ಟೋ ಹುಡುಗರು ಈಗ ದೊಡ್ಡವರಾಗಿದ್ದಾರೆ ಅವರಲ್ಲಿ ಕೆಲವರು ದೊಡ್ಡ ದೊಡ್ಡ ವ್ಯಾಪಾರಿಗಳಾಗಿದ್ದಾರೆ. ಅಲ್ಲಿಯ ಆಸ್ಪತ್ರೆಯಲ್ಲಿ ಕೆಲಸ ಮಾಡಿದ ಚಿನ್ನಮ್ಮಣ್ಣಿಗಳು ಡಾಕ್ಟರಿಣಿಯರೂ ನರಸಮ್ಮಗಳೂ ಆಗಿದ್ದಾರೆ. ಎಲ್ಲರೂ ಬೀನಾ ಫುಲರ್ "ಅಕ್ಕಾವರ" ಉಪಾಯಕ್ಕೆ ಆಶ್ಚರ್ಯಪಡುತಿದ್ದಾರೆ. ಅಲ್ಲ ಕಲಿಯುವ ಮಕ್ಕಳಿಗೆ ಬೇಸರವೆಂದರೇನೋ ಗೊತ್ತೇ ಇಲ್ಲ. ಅವರು ಶಾಲೆಯಿಂದ ಓಡುವದೇ ಇಲ್ಲ.

ನಿನಗೂ ಇಂಥ ರಾಜ್ಯದಲ್ಲಿರಬೇಕೆನಿಸುವದಿಲ್ಲವೆ? —ನಿನ್ನ ಮಾಮಾ

ಭಾಷಾನುಗುಣ ಪ್ರಾಂತ ವಿಚಾರಣಾ ಸಮಿತಿ

ಮದ್ರಾಸ ಸರಕಾರದ ಸೂಚನೆ

ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದರು ಪ್ರಾಂತಗಳನ್ನು ಭಾಷಾನುಗುಣವಾಗಿ ಪುನರ್ಘಟಿಸುವ ಬಗ್ಗೆ ಬೇಗ ಒಂದು ಸಮಿತಿಯನ್ನು ನಿಯಮಿಸಲಿದ್ದಾರೆ ಆ ಸಮಿತಿಗೆ ಸಹಾಯಕ ಸಭಾಸದರೆಂದು ಮದ್ರಾಸ ಸರಕಾರದವರು ಮದ್ರಾಸ ಪ್ರಾಂತದ ಪ್ರತಿಯೊಂದು ಭಾಷಾನುಗುಣ ವಿಭಾಗದಿಂದ ಒಬ್ಬರಂತೆ ಕೆಳಗಿನ ನಾಲ್ವರನ್ನು ಸೂಚಿಸಿರುವರೆಂದು ತಿಳಿಯುತ್ತದೆ.

(೧) ತಮಿಳನಾಡಿಗಾಗಿ, ಶ್ರೀ ಟಿ. ರಾಮಲಿಂಗಂ ಚೆಟ್ಟಿಯಾರು, ಎಂ ಎಲ್ ಎ(ಕೇಂದ್ರ) (೨) ಅಂಧ್ರಕ್ಕಾಗಿ ಶ್ರೀ ಆರ್. ರಾಮಕೃಷ್ಣರಾಜು (ಮದ್ರಾಸ ವಿಧಿಮಂಡಲದ ಅಧ್ಯಕ್ಷರು) (೩) ಕೇರಳಕ್ಕಾಗಿ ಶ್ರೀ ಎಂ. ನಾರಾಯಣ ಮೆನನ್ (ಮದ್ರಾಸ ವಿಧಿಮಂಡಳದ ಸದಸ್ಯರು) (೪) ಕರ್ನಾಟಕಕ್ಕಾಗಿ ಶ್ರೀ ಟಿ. ಸುಬ್ರಹ್ಮಣ್ಯಂ ಬಳ್ಳಾರಿ.

ಮಜದೂರ ಮಹಾಮಂಡಳಗಳ ರಚನೆ

ಹಿಂದೀ ರಾಷ್ಟ್ರೀಯ ಮಜದೂರ ಸಂಘದಲ್ಲಿ ಕೂಡಿಕೊಂಡ ಕೂಲಿಕಾರ ಸಂಘಗಳನ್ನು ಒಟ್ಟುಗೂಡಿಸುವ ಎತ್ತುಗಡೆ ನಡೆದಿದೆ. ಈಗ ಮೊದಲ ಹೆಜ್ಜೆಯೆಂದು ಜವಳಿ ಉದ್ಯೋಗ, ತೋಟಗಾರಿಕೆ ರೇಲ್ವೆ ಕೆಲಸಗಾರರ ಮಹಾಮಂಡಳಗಳನ್ನು ಅಸ್ತಿತ್ವದಲ್ಲಿ ತರಲಾಗಿದೆ. ಇದರಂತೆಯೇ ರಾಷ್ಟ್ರೀಯ ಮಜದೂರ ಸಂಘದ ಕಾರ್ಯಸಮಿತಿಯವರು ಕಲ್ಲಿದ್ದಲಿಗಣಿ, ಕಬ್ಬಿಣ ಉಕ್ಕು, ಸಕ್ಕರೆ, ನಾರು, ವ್ಯಾಪಾರಿ ಹಡಗ, ಈ ಉದ್ಯೋಗಗಳಲ್ಲಿ ದುಡಿವ ಕೂಲಿಕಾರರ ಮಹಾಮಂಡಳಗಳನ್ನು ಬೇಗ ರಚಿಸಲಿರುವರು.

ಅ ಭಾ. ಜವಳಿ ಉದ್ಯೋಗ ಕೆಲಸಗಾರರ ಮಹಾಮಂಡಳದಲ್ಲಿ ಒಟ್ಟು ೨ ಲಕ್ಷ ೩೦ ಸಾವಿರ ಸಭಾಸದರು ೭೦ ಕೂಲಿಕಾರ ಸಂಘಗಳಲ್ಲಿ ಅವರು ಹಂಚಿಹೋಗಿದ್ದಾರೆ. ರೇಲ್ವೆ ಕೂಲಿಕಾರರ ಮಹಾಮಂಡಳದಲ್ಲಿ ೨೫ ಸಾವಿರ ಜನರೂ ತೋಟಗಾರಿಕೆ ಕೂಲಿಕಾರರ ಮಹಾಮಂಡಳದಲ್ಲಿ ೧ ಲಕ್ಷ ೨೦ ಸಾವಿರ ಸಭಾಸದರೂ ಇದ್ದಾರೆ.

ಚೀನೀ ರಣರಂಗ

ಜೆಹೋಲಿನ ರಾಜಧಾನಿಯಾದ ಚೆಂಗ್‌ಟೆಗೆ ೧೦ ಮೈಲು ದೂರದಲ್ಲಿ ಕಮ್ಯುನಿಸ್ಟರು ನುಗ್ಗಿದರು. ಸರಕಾರಿ ದಳಗಳು ಎದುರಿಸಲು ಕಮ್ಯುನಿಸ್ಟ ಕಮಾಂಡರರ ಅಪ್ಪಣೆ ಪಡೆದವು. ನಗರದ ನಾಗರಿಕರು ತಂಡ ತಂಡವಾಗಿ ಊರು ಬಿಟ್ಟು ಹೊರಟರು.

ಇನ್ನು ಪೂರ್ವದಲ್ಲಿ ಜೋರಿಂದ ಯುದ್ಧ ಸಾಗಿದೆ ಪೀಪಿಂಗ್–ಹ್ಯಾಂಕೋ ರೇಲ್ವೇ ಮಾರ್ಗದಲ್ಲಿ ೪೦ ಮೈಲಿನ ಪ್ರದೇಶದಲ್ಲಿ ಶಸ್ತ್ರಾಸ್ತ್ರಗಳ ಕುಚೇಷ್ಟೆ ನಡೆದಿದೆ.

ಹೋನಾನಿನಲ್ಲಿಯ ಈ ಮೇಲಿನ ರೈಲು ಮಾರ್ಗದಲ್ಲೇ ಕಾಳಗ ಸಾಗಿದೆ. ಚೆಂಗ್‌ಚೌ ಮತ್ತು ಸಿನ್ಯಾಂಗಗಳ ನಡುವೆ ಕೈಗೆಕ್ಕೈ ಹತ್ತಿದೆ. ಕಮ್ಯುನಿಸ್ಟರು ಹುಪೆಯನ್ನು ಹೊಕ್ಕು ಲಾವ್‌ಹೊಕೊ ಮತ್ತು ಕ್ವಾಂಗ್‌ಹ್ವ ನಗರಗಳನ್ನು ಮುತ್ತುವರಿದಿದ್ದಾರೆ.

ಅಧಿಕೃತ ಕೇಂದ್ರ ಸುದ್ದಿಯ ಪ್ರಕಾರ ಹಳದಿ ನದಿಯ ಉತ್ತರದ ದಂಡೆಯಲ್ಲಿ ಕಮ್ಯುನಿಸ್ಟರ ಚಟುವಟಿಕೆ ಪುನಃ ಜೋರಾಗಿ ಸಾಗಿದೆ ಎಂದೂ ಪಶ್ಚಿಮ ಕಾಂಟಂಗ್ ಪ್ರದೇಶದಲ್ಲಿ ೬ ಸಾವಿರ ಕಮ್ಯುನಿಸ್ಟ ಸೈನಿಕರು ಹೊಸ ಆಯುಧಗಳನ್ನು ಧರಿಸಿ ನದಿಯನ್ನು ದಾಟಲು ಪ್ರಯತ್ನಿಸಿ ಸರಕಾರೀ ದಳಗಳಿಂದ ಎದುರಿಸಲ್ಪಟ್ಟು ವಿಫಲಪ್ರಯತ್ನರಾದರೆಂದೂ ತಿಳಿಯುತ್ತದೆ.

ಅಧಿಕಾರಿಗಳಿಗೆ ಸರಬರಾಯಿ ಮಾಡಕೂಡದು

ಮುಂಬಯಿ ಸರಕಾರದವರು ಒಂದು ಆಜ್ಞೆ ಹೊರಡಿಸಿ ಅದನ್ನು ಎಲ್ಲ ಖಾತೆಗಳ ವರಿಷ್ಠ ಅಧಿಕಾರಿಗಳಿಗೂ ಕಳುಹಿಸಿದ್ದಾರೆ. ಎಲ್ಲ ಸರಕಾರೀ ಅಧಿಕಾರಿಗಳು ಪ್ರವಾಸದಲ್ಲಿದ್ದಾಗ ತಮಗೆ ಬೇಕು ಬೇಕಾದ್ದನ್ನೆಲ್ಲ ಪೂರೈಸಲು ತಮ್ಮ ಕೈಕೆಳಗಿನವರಿಗೆ ಕೇಳತಕ್ಕದ್ದಲ್ಲವೆಂದು ಆ ಆಜ್ಞೆಯು ವಿಧಿಸುತ್ತದೆ ಅನಿವಾರ್ಯವೆನ್ನಿಸಿದಲ್ಲಿ ಪುಕ್ಕಟೆ ಸರಬರಾಯಿಯನ್ನು ಅಪೇಕ್ಷಿಸದೆ ಅಧಿಕಾರಿಗಳು ತಗಲುವ ಎಲ್ಲವೆಚ್ಚವನ್ನೂ ಕೊಟ್ಟು ತಮಗೆ ಬೇಕಾದವಸ್ತುಗಳನ್ನು ಪಡೆಯತಕ್ಕದ್ದೆಂದೂ ಹೇಳಲಾಗಿದೆಯಲ್ಲದೆ ಒಂದು ವೇಳೆ ಅಧಿಕಾರಿಗಳಿಗೆ ಪುಕ್ಕಟೆ ಪದಾರ್ಥಗಳನ್ನು ಕೊಟ್ಟರೆ ಅದು ಅಪರಾಧವಾಗುವದೆಂದೂ ಇದರ ಹೊಣೆಯು ಪೂರೈಸಿದವರ ಮೇಲಿದ್ದು ಅವರ ಮೇಲೆ ಯೋಗ್ಯಕ್ರಮಕೈಕೊಳ್ಳಲಾಗುವದೆಂದೂ ಎಚ್ಚರಿಕೆ ಕೊಡಲಾಗಿದೆ.

ಹೈದರಾಬಾದದ ನಿರಾಶ್ರಿತರಿಗೆ

ತುಂಗಭದ್ರಾದಲ್ಲಿ ಶಿಬಿರ

ಹೈದರಾಬಾದ ಸಂಸ್ಥಾನದ ಅತ್ಯಾಚಾರಕ್ಕೆ ಒಳಪಟ್ಟ ದಿಕ್ಕುಗಾಣದೆಬಂದ ನಿರಾಶ್ರಿತರ ಸಹಾಯ ಸೌಕರ್ಯಕ್ಕಾಗಿ ತುಂಗಭದ್ರಾದಲ್ಲಿ ಒಂದು ಶಿಬಿರವನ್ನು ತೆರೆಯಲು ಅಲ್ಲಿಯ ಕಾರ್ಯಕರ್ತರು ನಿರ್ಧರಿಸಿದ್ದಾರೆ.

ಈ ಶಿಬಿರದ ಸುವ್ಯವಸ್ಥೆಗಾಗಿ ಶ್ರೀ ಪಾಂಡುರಂಗರಾವ ಕಸ್ಬೆ ಇವರನ್ನು ಮುಖ್ಯಾಧಿಕಾರಿಯಾಗಿ ಸರ್ವಾನುಮತದಿಂದ ಸ್ವೀಕರಿಸಲಾಗಿದೆ ಶ್ರೀ ದಾಸಪ್ಪನವರು ಶಿಬಿರದ ವ್ಯವಸ್ಥಾಪಕರು. ಇತರ ಕಾರ್ಯಕ್ಕಾಗಿ ೫ ಜನರನ್ನು ನಿಯಮಿಸಲಾಗಿದೆ.

ವಿನಿದ್ರೆಗೆ ಮದ್ದು

ಕೆಲಸ ಹೆಚ್ಚಾದರೆ ಇಲ್ಲವೆ ಕಡಿಮೆಯಾದರೆ, ದುಡ್ಡು ಹೆಚ್ಚಾದರೆ ಇಲ್ಲವೆ ಕಡಿಮೆಯಾದರೆ, ಪ್ರೀತಿ ಹೆಚ್ಚಾದರೆ ಇಲ್ಲವೆ ಕಡಿಮೆಯಾದರೆ ವಿನಿದ್ರೆಯ ತಾಪ ಸಂಭವಿಸುವುದು.

ಸಾಮಾನ್ಯವಾಗಿ ಬೇಸರ ಬರಿಸುವಂಥ ಪುಸ್ತಕ ಹಿಡಿದು ಓದತೊಡಗಿದರೆ ನಿದ್ರೆ ಬರುವುದುಂಟು. ಚೆನ್ನಾಗಿರುವ ಪುಸ್ತಕ ಓದಿದರೆ ಗಾಂಭೀರ್ಯ, ಆಸಕ್ತಿ ಬೆಳೆದು ಎಚ್ಚರ ಹೆಚ್ಚಾಗುತ್ತದೆ; ಆದರೆ ಅದರಿಂದ (ಅದರಲ್ಲಿ ವಿಶೇಷ ಸಮಸ್ಯೆಗಳಿಲ್ಲದಿದ್ದರೆ) ಕ್ರಮೇಣ ಮನಃಶಾಂತಿ ಲಭಿಸಿ ನಿದ್ರೆಗೆ ಪೂರ್ವಭಾವಿಯಾದ ತಂದ್ರಾವಸ್ಥೆ ತಲೆದೋರಬಹುದು, ಕೊನೆಯಲ್ಲಿ ಹಾಯೆನಿಸಿ ನಿದ್ರೆಯೂ ಬರಬಹುದು. ಹಾಗಲ್ಲದಿದ್ದರೆ ಮನಸ್ಸಿಗೆ ಆಟವೆನಿಸುವ ಇನ್ನಾವುದಾದರೂ ಕೆಲಸ ಮಾಡಬಹುದು; ಕರ್ತವ್ಯಕರ್ಮವಿದ್ದರೆ ಅದನ್ನು ಮಾಡಿದರೂ ಸರಿಯಿಲ್ಲ ಅಂತೂ ಸುಮ್ಮನೆ ಕುಳಿತು ನಿದ್ರೆಯ ಬಗ್ಗೆ ಯೋಚನೆ ಮಾಡುವುದು ಎಲ್ಲಕ್ಕಿಂತಲೂ ಅಪಾಯಕರ ಎಂದು ಮಾರ್ಗರೆಟ್ ಫಿಷ್‌ಬ್ಯಾಕ್ ಎಂಬವಳು ಬರೆಯುತ್ತಾಳೆ. ಜೀವನದ ಬಗ್ಗೆ ಒಂದು ಸಿದ್ಧಾಂತಕ್ಕೆ ಬಂದು ಮುಟ್ಟುವುದು ವಿನಿದ್ರೆಗೆ ಎಲ್ಲಕ್ಕಿಂತ ಉತ್ತಮವಾದ ಔಷಧ ಅದು ಸರ್ವರಿಗೂ ಸಾಧ್ಯವಾಗದಿರಬಹುದು. ಆಗದಿದ್ದರೆ ಏನು ಮಾಡಲೂ ಬರದು

ವಿನಿದ್ರಾವಸ್ಥೆಯಲ್ಲಿ ಮನುಷ್ಯನು (ಳು) ತನಗೆ ಇಷ್ಟವಾದ ಯಾವುದಾದರೊಂದು ಕಾರ್ಯದಲ್ಲಿ ಮಗ್ನನಾಗಿ ತನ್ನ ಎಚ್ಚರವನ್ನು ಮರೆತರೆ ಅವನಿಗೆ ಶಾಂತಿ ಲಭಿಸಿ ನಿದ್ರೆಯನ್ನು ಪಡೆಯಬಹುದು.

ಬಿಲ್ಲವರ ಎಸೋಸಿಯೇಶನ್ ಮುಂಬಯಿ

ಈ ಮೇಲಿನ ಎಸೋಸಿಯೇಶನಿನಿಂದ ವಿದ್ಯಾರ್ಥಿವೇತನವನ್ನು ಪಡೆಯಲಿಚ್ಛಿಸುವ ಬಡ ವಿದ್ಯಾರ್ಥಿಗಳು ಅರ್ಜಿಯನ್ನು ಜುಲೈ ತಿಂಗಳ ತಾರೀಕು ೧೫ ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಪಡೆಕೊಳ್ಳಬೇಕಾಗಿ ಈ ಮೂಲಕ ತಿಳಿಸಲಾಗುತ್ತದೆ, ವಿದ್ಯಾರ್ಥಿ ವೇತನ ಪಡೆಯುತ್ತಿರುವ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಪರೀಕ್ಷೆಯ ಫಲಿತಾಂಶದೊಡನೆ ಅಭ್ಯಾಸ ಮುಂದುವರಿಸುವ ಬಗ್ಗೆ ಅರ್ಜಿಯನ್ನು ಕೊಡಬೇಕು. ಪ್ರಕೃತ ಹೈಸ್ಕೂಲು ವಿದ್ಯಾಭ್ಯಾಸದ ವರೆಗೆ ಮಾತ್ರ ವಿದ್ಯಾರ್ಥಿ ವೇತನವನ್ನು ಕೊಡಲಾಗುವುದು.

ವಿಳಾಸ:— ಮಾನಾರ್ಥ ಜನರಲ್ ಕಾರ್ಯದರ್ಶಿ
ಬಿಲ್ಲವರ ಎಸೋಸಿಯೇಶನ್
೨೩, ದಿ. ನಾಥ ದಾದಾಜಿ ರಸ್ತೆ
ಫೋರ್ಟ ಮುಂಬಯಿ

ಹೈದರಾಬಾದ — ಕೊನೆಯ ಅಂಕ

[ಶ್ರೀ. ರಂ. ರಾ. ದಿವಾಕರರಿಂದ]

ಹೈದರಾಬಾದಿನಲ್ಲಿ ಶಕ್ತಿಪರೀಕ್ಷೆ ಇಷ್ಟರಲ್ಲೇ ಆಗುವಂತೆ ತೋರುತ್ತದೆ. ಯುದ್ಧ ಅನಿವಾರ್ಯವೆಂದೇ ಎಲ್ಲ ವಿದ್ಯಮಾನಗಳು ಸೂಚಿಸುತ್ತಿವೆ. ಇದಕ್ಕಿಂತ ಸೌಮ್ಯ ಮಾರ್ಗದಿಂದ ಕೆಲಸ ಸಾಧಿಸೀತೆಂದು ನಾನೆಂದೂ ಆಶೆ ಹಚ್ಚಿಕೊಂಡಿದ್ದಿಲ್ಲ. ೧೯೪೭ ಅಗಸ್ಟದಿಂದಲೇ ನನಗೆ ಹೀಗೆ ಅನಿಸತೊಡಗಿತ್ತು.

ಕೆಲವರು ತಿಳಿದೂ ತಿಳಿದೂ ಅಸಾಹಾಯರಂತೆ ಅವೇ ತಪ್ಪುಗಳನ್ನು ಮಾಡುವದುಂಟು. ಹೈದರಾಬಾದ ನಿಜಾಮರು ಇದಕ್ಕೊಂದು ದೃಷ್ಟಾಂತ. "ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ" (ಅಧರ್ಮವೆಂದು ಗೊತ್ತಿದೆ. ಆದರೆ ಅದರಿಂದ ಪರಾವೃತ್ತನಾಗಲಾರೆ) ಎಂದು ಮಹಾಭಾರತದಲ್ಲಿ ದುರ್ಯೋಧನ ಹೇಳುತ್ತಾನೆ. ನಿಜಾಮರೂ ಈ ವಿಪನ್ನ ಸ್ಥಿತಿಯಲ್ಲಿರುವಂತೆ ಕಾಣುತ್ತದೆ. ಇಲ್ಲದಿದ್ದರೆ ನಿಶ್ಚಯವಾಗಿಯೂ ಅನಾಹುತಕ್ಕೆಳಸುವ ದಾರಿಯನ್ನು ಯಾರು ಹಿಡಿದಾನು? ನಿಜಾಮರ ಚೇತನದಲ್ಲೇ ಏನೋ ದೋಷವಿರುವಂತಿದೆ.

ಬ್ರಿಟಿಶರು ತಾವು ಹೊರಟುಹೋಗುವಾಗ ಎತ್ತಿಹಿಡಿದ ಸಂಸ್ಥಾನಗಳ ಮೇಲಿನ "ವರಿಷ್ಠಾಧಿಕಾರ ಪರಿಸಮಾಪ್ತಿ"ಯ ಪ್ರಮೇಯ ಕಿಡಿಗೇಡಿತನದ್ದೆಂದು ಈಗ ಎಲ್ಲರಿಗೂ ಗೊತ್ತಾಗಿದೆ. ಸಂಸ್ಥಾನಗಳ ಮೇಲಿನ ಪ್ರೀತಿಯಿಂದಾಗಲಿ ಅವು ಸ್ವತಂತ್ರವಾಗಬೇಕೆಂದಾಗಲಿ ಉದ್ದೇಶದಿಂದ ಅದು ಪ್ರೇರಿತವಾಗಿದ್ದಿಲ್ಲ. ಸುದೈವದಿಂದ ಸರ



ಕಾಸಿಮ ರಜವಿ
ಶಕುನಿ ಮಾಮಾ !

ದಾರ ಪಟೇಲರ ನೀತಿಜ್ಞತೆಯೂ ಸಂಸ್ಥಾನಿಕರ ಸದ್ಬುದ್ಧಿಯೂ ಸೇರಿ ಬ್ರಿಟಿಶರು ಬಿಟ್ಟುಹೋದ ತೊಡಕಿನ ಕಂತೆಯನ್ನು ಬಿಚ್ಚಿ ಪರಿಸ್ಥಿತಿಯನ್ನು ಹಿಡಿತಕ್ಕೆ ತಂದವು. ಇಲ್ಲದಿದ್ದರೆ ಹಿಂದುಸ್ತಾನದ ೫೬೨ ಸಂಸ್ಥಾನಗಳು ಸ್ವಾತಂತ್ರ್ಯವನ್ನು ಸಾರುವ ಅವಸ್ಥೆಯನ್ನು ನೆನೆಯಿರಿ. ದೇವರ ದಯೆಯಿಂದ ಅದೊಂದು ಆಗಲಿಲ್ಲ.

ರಜಾಕಾರರ ಪಿಡುಗು

ಆದರೆ ಒಂದು ಸಂಸ್ಥಾನ ಈ ಆಟ ಹೂಡಲು ಹವಣಿಸುತಿದೆ. ಅದೀಗ ಹೈದರಾಬಾದ. ನಿಜಾಮರ ಕೆಣ್ಣೆದುರಲ್ಲಿಯೇ ಧರ್ಮಾಂಧತೆಯಿಂದ ಸಂಘಟಿಸಲ್ಪಡುತಿರುವ ಅರೆ ಸೈನಿಕ ಮುಸ್ಲಿಮ ರಜಾಕಾರರು, ಸಂದರ್ಭ ಬಂದರೆ ನಿಜಾಮರನ್ನು ಲೆಕ್ಕಿಸದೆ ಹೈದರಾಬಾದದ ಸ್ವಾತಂತ್ರ್ಯವನ್ನು ಸಾರಿ ತಮ್ಮ ನೇತ್ರರು ತೆತ್ತು ಅದನ್ನು ಸಂರಕ್ಷಿಸುವದಾಗಿ ಕೂಗುತ್ತಿದ್ದಾರೆ. ನಿಜಾಮರು ಇದೆಲ್ಲವನ್ನು ನೋಡುತ್ತ ತಣ್ಣಗೆ ಕುಳಿತಿದ್ದಾರೆ. ಒಂದು ಕಾಲದಲ್ಲಿ ಯಥಾಸ್ಥಿತಿ ಒಪ್ಪಂದಕ್ಕೆ ಸಹಿ ಮಾಡಿದಾಗ, ರಜಾಕಾರರ ಮತ್ತು ಇತ್ತೆಹಾದದ ಪ್ರತಿಷ್ಠೆಯನ್ನು ತಗ್ಗಿಸಿ ಅವುಗಳನ್ನು ಕೊನೆಗೆ ನಿರ್ನಾಮ ಮಾಡಲು ಸರಕಾರಕ್ಕೆ ಸಮಯ ಬೇಕೆಂದು ಹೇಳಲಾಗಿತ್ತು. ಈಗ ಆದುದು ತದ್ವಿಪರೀತ. ಹರಟೇತಾದ ರಜಾಕಾರರನ್ನು ೨೦,೦೦೦ ದಿಂದ ೨ ಲಕ್ಷಕ್ಕೇರಿಸಲು ಆ ಸಮಯ ಉಪಯೋಗಿಸಲ್ಪಟ್ಟಿತು. ಮುಸ್ಲಿಂ ನಿರಾಶ್ರಿತರನ್ನು ಕರೆಸಿಕೊಂಡು ಅವರಿಗೆ ಸೈನ್ಯಶಿಕ್ಷಣ ಕೊಡಲಾಗುತ್ತಿದೆ. ಅವರ ಬಹಿರಂಗ ಕೂಟಗಳು ನಡೆಯುತ್ತಿವೆ. ಅದಕ್ಕೆ ಮಂತ್ರಿಗಳು ಕೂಡ ಹೋಗುತ್ತಿದ್ದಾರೆ. ಇತ್ತೆಹಾದ್-ಉಲ್ ಮುಸ್ಲಿಮೀನದ ಅಧ್ಯಕ್ಷರಾದ ಕಾಸೀಮ ರಜವಿಯವರು "ಮುಸ್ಲಿಂ ರಾಜ್ಯ"ವಾದ ಹೈದರಾಬಾದದ ಸ್ವಾತಂತ್ರ್ಯದ ಹೆಸರಲ್ಲಿ ಕತ್ತಿ ತಿರುಗಿಸತೊಡಗಿದ್ದಾರೆ.

ವಿವಿಧ ಹಿತಸಂಬಂಧಗಳು ವಿಚಿತ್ರವಾಗಿ ಒಂದುಗೂಡಿ ಒಂದನ್ನೊಂದು ಎತ್ತಿಹಿಡಿಯುತ್ತಿರುವ ಉದಾಹರಣೆಯಿದು. ಇವೆಲ್ಲವಕ್ಕೆ ಅನ್ಯಾಯದ ಅಸಂಬದ್ಧ ಬೇಡಿಕೆಗಳೇ ಆಧಾರ. ಈ ಬೇಡಿಕೆಗಳಿಗೆ ಅಂತರ್‌ರಾಷ್ಟ್ರೀಯ ಕಾಯಿದೆ ಇಲ್ಲವೆ ನ್ಯಾಯ ನೀತಿಯ ಬೆಂಬಲವಿಲ್ಲ.

ಹೈದರಾಬಾದ ದೊಡ್ಡ ಸಂಸ್ಥಾನ. ಅದರ ೧೬೦ ಲಕ್ಷ ಜನಸಂಖ್ಯೆಯಲ್ಲಿ ನೂರಕ್ಕೆಂಭತ್ತೆಂಟರಷ್ಟು ಹಿಂದುಗಳು, ಬರಿ ೧೨ ರಷ್ಟು ಮುಸ್ಲಿಮರು. ಅದು ದಕ್ಷಿಣಭಾರತದ ಹೃದಯಸ್ಥಾನದಲ್ಲಿ ಇದೆ. ಸುತ್ತಲೂ ಹಿಂದೀ ಒಕ್ಕೂಟ ಪ್ರದೇಶ. ಹಿಂದುಸ್ತಾನದಲ್ಲಿ ಸೇರ್ಪಡೆ ಹೊಂದುವದೇ ಜಾಣತನ, ವಿವೇಕ, ಎಂಬದಾಗಿ ಬ್ರಿಟಿಶರು ಉಪದೇಶಿಸಿದರೂ ಕೇಳದೆ ನಿಜಾಮರು ಸ್ವತಂತ್ರರಾಗ ಬಯಸುವ ಹಂಬಲವನ್ನು ಕಟ್ಟಿಕೊಂಡಿದ್ದಾರೆ. ಅವರದು ಮಧ್ಯಯುಗದ ನವಾಬಶಾಹಿಗೆ ಅಲ್ಲಲ್ಲಿ ಆಧುನಿಕ ಆಡಳಿತ ಪದ್ಧತಿಯ ತೇಪೆಹಾಕಿದಂಥ ರಾಜ್ಯ. ಮುಖ್ಯ ಮುಖ್ಯ ಅಧಿಕಾರಸ್ಥಾನಗಳಲ್ಲಿಯೂ ನೌಕರಿಗಳಲ್ಲಿಯೂ ಮುಸ್ಲಿಮರನ್ನೇ ತುಂಬಲಾಗಿದೆ. ಅವರಲ್ಲಿ ಕಾಸೀಮ ರಜವಿಯ ಜನರೇ ಹೆಚ್ಚು. ಪ್ರಜಾತಂತ್ರದ ಕುರುಹು ಕೂಡ ಎಲ್ಲಿಯೂ ಇಲ್ಲ.

ಪಾಕಿಸ್ತಾನ ಪಕ್ಷಪಾತಿ

ನಿಜಾಮರು ಪಾಕಿಸ್ತಾನ ಪಕ್ಷಪಾತಿಗಳು. ಸಾಧ್ಯವಿದ್ದರೆ ಅವರು ಪಾಕಿಸ್ತಾನದಲ್ಲೇ ಸೇರ್ಪಡೆ ಹೊಂದುತ್ತಿದ್ದರು. ಅವರ ನವಾಬಿ ದರ್ಬಾರಾಗಲಿ ಪಾಕಿಸ್ತಾನಕ್ಕೆ ಅವಶ್ಯ ಬಿದ್ದಾಗ ಸಹಾಯ ಮಾಡುವ ಅವಕಾಶವಾಗಲಿ, ಹೈದರಾಬಾದ ಸ್ವತಂತ್ರವಾಗಿದ್ದರೆ ಮಾತ್ರ ಉಳಿಯಬಲ್ಲದು. ಯಥಾಸ್ಥಿತಿ ಒಪ್ಪಂದವಿದ್ದರೂ ಸಾಲವೆಂಬ ಸೋಗಿನಿಂದ ಅವರು ಪಾಕಿಸ್ತಾನಕ್ಕೆ ೨೦ ಕೋಟಿ ರೂ. ಕಳಿಸಿದರು. ಅವರ ನವಾಬಗಿರಿ ಉಳಿಯುವದರ ಮೇಲೆಯೆ ಹೈದರಾಬಾದ ಮುಸ್ಲಿಮರ ನೌಕರಿಚಾಕರಿಗಳ ಅವಲಂಬನೆ. ಪ್ರಜಾತಂತ್ರ ಬಂದರೆ ಅವರ ಬಲ ಕುಗ್ಗಿಹೋಗಿ ತಮ್ಮ ಪಾಲಿಗೆ ಬರಬಹುದಾದ ಎಂಟರಲ್ಲೊಂದಂಶದಿಂದಲೇ ತೃಪ್ತರಾಗಬೇಕಾಗುವದು. ಇಂದು ಎಲ್ಲದರಲ್ಲಿಯೂ ಅವರೇ ಅಮರು. ಪಾಕಿಸ್ತಾನಕ್ಕೂ ಹೈದರಾಬಾದ ಸ್ವತಂತ್ರ ಉಳಿದರೆ ಒಳ್ಳೆ ಸಂತೋಷವಾದೀತು. ಹೈದರಾಬಾದಿನಿಂದ ಸಹಾಯ ಪಡೆಯಲಿಕ್ಕೂ ದಕ್ಷಿಣ ಭಾರತದಲ್ಲಿ ತನ್ನದೊಂದು "ಪಂಚಮ ದಲ" ಸ್ಥಾಪಿಸಲಿಕ್ಕೂ ಅದೊಂದೇ ಹಾದಿ ಪಾಕಿಸ್ತಾನಕ್ಕೆ. ಆದುದರಿಂದ ಪಾಕಿಸ್ತಾನ, ನಿಜಾಮ, ಹೈದರಾಬಾದ ಮುಸ್ಲಿಮರು ಹಾಗು ಅಪ್ರತ್ಯಕ್ಷವಾಗಿ ಎಲ್ಲ ಲೀಗ್ ಮನೋವೃತ್ತಿಯ ಮುಸ್ಲಿಮರು ಇವರೆಲ್ಲರ ಹಿತಗಳೂ ಒಂದಕ್ಕೊಂದು ಗೊಣಸುಕೂಡಿ ಪರಸ್ಪರ ಸಂಬದ್ಧವಾಗಿವೆ. ಇದಕ್ಕೆಲ್ಲ ಜಿನ್ನಾ ಸಾಹೇಬರ ದ್ವಿರಾಷ್ಟ್ರವಾದವೇ ಮೂಲ. (ಈಚೆಗೆ ಒಕ್ಕೂಟ ಪ್ರದೇಶದ ಕೆಲ ಲೀಗ್ ಮುಸ್ಲಿಮರು ರಜಾಕಾರರ ಕೃತಿಗಳನ್ನು ಖಂಡಿಸಿದ್ದಾರೆ. —ಸಂ.)

ಇತ್ತ, ಪಾಕಿಸ್ತಾನವೆಂಬದು ಧಾರ್ಮಿಕ ಕಾರಣಗಳಿಂದ ಸಿಡಿದು ಹೋಗಿರುವದರಿಂದ ಹಿಂದುಸ್ತಾನವಾದರೂ ತನ್ನ ಹೊಟ್ಟೆಯೊಳಗೇ ಪಾಕಿಸ್ತಾನ ಪಕ್ಷಪಾತಿಯಾದ ಇನ್ನೊಂದು ರಾಜ್ಯವಿರುವದನ್ನು ಕ್ಷಣಮಾತ್ರ ಸಹಿಸಲಾರದು. ಹಾಗೆ ಮಾಡಿದರೆ ಸುಂದರ ಉದ್ಯಾನದಲ್ಲಿ ವಿಷವೃಕ್ಷವನ್ನು ಬೆಳೆಯಗೊಟ್ಟಂತಾದೀತು. ಅಲ್ಲದೆ ಯಾವದೇ ಸಂಸ್ಥಾನದಲ್ಲಿ ಪ್ರಜಾತಂತ್ರಾತ್ಮಕವಲ್ಲದ ರಾಜ್ಯಪದ್ಧತಿಯಿರುವದನ್ನೂ ಹಿಂದುಸ್ತಾನ ಸಹಿಸಲಾರದು. ಸಹಿಸಿದರೆ ಎಲ್ಲ ಅನ್ಯಾಯಗಳ ಮೂಲವಾದ ನಿರಂಕುಶಾಧಿಕಾರಕ್ಕೆ ದೀರ್ಘಾಯುಷ್ಯವನ್ನು ದಯಪಾಲಿಸಿದಂತಾಗುವದು.



ಮತ್ತು ಅವನ ರಜಾಕಾರರು
ಕೊಲೆ, ಸುಲಿಗೆ, ಮಾನಭಂಗ, ಜೆಹಾದ್ !



ನಿಜಾಮ ಸಾಹೇಬರು
ಹೈದರಾಬಾದದ ಬಹಾದ್ದೂರ ಷಾ ?

ಆದುದರಿಂದಲೇ ತಾತ್ತ್ವಿಕ ದೃಷ್ಟಿಯಿಂದ ಹೈದರಾಬಾದ ಹಿಂದೀ ಒಕ್ಕೂಟದಲ್ಲಿ ಸೇರ್ಪಡೆ ಹೊಂದಬೇಕೆಂದೂ ಪೂರ್ಣ ಹೊಣೆಗಾರ ಸರಕಾರ ಸ್ಥಾಪಿಸಬೇಕೆಂದೂ ಹಿಂದುಸ್ತಾನ ಹಟ ಹಿಡಿಯುತ್ತಿರುವದು.

ಕೊಡ ತುಂಬಿತು

ಈಗ ಕೊಡ ತುಂಬಿದೆ. ಸೇರ್ಪಡೆಯಂತೂ ಆಗಲಿಲ್ಲ. ಕಾಲದ್ದಕ್ಕೆ ಯಥಾಸ್ಥಿತಿ ಒಪ್ಪಂದವನ್ನು ಕೂಡ ಹಲಬಗೆಯಾಗಿ ಮುರಿಯಲಾಗುತಿದೆ. ಹೊಣೆಗಾರ ಸರಕಾರದ ಸುದ್ದಿಯೇ ಇಲ್ಲ, ಬದಲಿಗೆ ಫ್ಯಾಸಿಸ್ಟ ಸೈನ್ಯದಂಥ ರಜಾಕಾರರಿಗೆ ನಿಜಾಮರು ಪೂರ್ಣ ಶರಣಾಗತರಾಗಿದ್ದಾರೆ. ಕೊಳ್ಳೆ, ಸುಲಿಗೆ, ಸ್ತ್ರೀಮಾನಹರಣ ಮೊದಲಾದ ನಾನಾ ಅತ್ಯಾಚಾರಗಳಿಂದ ಹಬ್ಬಿದ ಕ್ಷೋಭೆ ಗಂಭೀರ ಸ್ವರೂಪವನ್ನು ತಾಳಿದೆ. ಅದನ್ನು ತಡೆಯದೆ ಹೋದರೆ ಹಿಂದುಸ್ತಾನದ ಶಾಂತಿಯೆ ಗಂಡಾಂತರಕ್ಕೀಡಾದೀತು. ಇದಲ್ಲದೆ, ಒಕ್ಕೂಟ ಪ್ರದೇಶಗಳ ಮೇಲೆಯೂ ರಜಾಕಾರರು ಪದೇ ಪದೇ ದಾಳಿ ಮಾಡಿದ್ದಾರೆ.

ಆದ ಮಾತುಕತೆಗಳಿಗೆ ಕೊನೆಯಿಲ್ಲ, ಕೊಟ್ಟ ಎಚ್ಚರಿಕೆಗಳಿಗೆ ಲೆಕ್ಕವಿಲ್ಲ. ಇವೆಲ್ಲವಕ್ಕೆ ಅವರ ಉತ್ತರವೆಂದರೆ ರಜಾಕಾರರನ್ನು ವಿಸರ್ಜಿಸುವದಲ್ಲ, ನಿಜಾಮರನ್ನೂ ಲೆಕ್ಕಿಸದೆ ಹೈದರಾಬಾದದ ಸ್ವಾತಂತ್ರ್ಯ ಸಾರುವೆವೆಂಬ ರಜಾಕಾರರ ಬೆದರಿಕೆ! ಹೈದರಾಬಾದದಿಂದ ದಿನದಿನವೂ ಹಿಂದುಗಳು ಪಲಾಯನ ಮಾಡುತಿದ್ದಾರೆ. ಸುತ್ತಲಿನ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಭಾಗಗಳಲ್ಲಿ ನಿರಾಶ್ರಿತರ ಸಮಸ್ಯೆ ಗಹನವಾಗುತಿದೆ. ರಜಾಕಾರರು ನಿಜಾಮ ಪೋಲೀಸರ ಮತ್ತು ಸೈನಿಕರ ಗುಪ್ತ ಸಹಾಯದಿಂದ ನಡೆಸಿರುವ ಕೊಲೆ ಸುಲಿಗೆ ಪೀಡೆಗಳ ಅನನ್ವಿತ ಕೃತ್ಯಗಳ ಕರುಣ ಕಥೆ ಎಲ್ಲೆಡೆಗೂ ಹಬ್ಬುತಿದೆ. ಇದೆಲ್ಲದರಿಂದ ದೇಶದಲ್ಲೆಲ್ಲ ಜಾತೀಯ ದ್ವೇಷ ಉರಿದೇಳಬಹುದೆಂಬ ಭಯವೂ ಇದೆ.

ಪರಿಣಾಮ

ಈಗ ಕೊನೆಯ ಎಚ್ಚರಿಕೆಯನ್ನು ಕೊಡಲಾಗಿದೆಯಂತೆ. ಪರಿಸ್ಥಿತಿ ಸುಧಾರಿಸದಿದ್ದರೆ ಹೈದರಾಬಾದ ಗಡಿಯಲ್ಲಿಯೂ ಅವಶ್ಯಬಿದ್ದರೆ ಹೈದರಾಬಾದಿನೊಳಗೂ ಶಾಂತಿ ಸುವ್ಯವಸ್ಥೆ

—೬ನೆಯ ಪುಟಕ್ಕೆ



ನಾಲಗೊಂಡದ (ಹೈದರಾಬಾದ) ನಿರಾಶ್ರಿತರು. ಗಿಡದ ನೆರಳೇ ಗತಿ ಅವರಿಗೆ !

ಜನಮತ

ರೋಮನ್ ಲಿಪಿ

ಕಳೆದ ವಾರದ "ಕರ್ಮವೀರ"ದಲ್ಲಿನ ರಾಷ್ಟ್ರ ಭಾಷೆಯ ಬಗೆಗೆ ಕೆ. [illegible] ಬರೆದ ಲೇಖನವನ್ನು ಎಲ್ಲರೂ ಒಪ್ಪಿಕೊಳ್ಳುವುದು [illegible] ಹಿಂದುಸ್ತಾನಿಗೆ ರೋಮನ್ ಲಿಪಿಯನ್ನು [illegible] ಸೂಚನೆಯನ್ನು [illegible] ಮಾಡಿದ್ದಾರೆ. ಸಾಮಾನ್ಯವಾಗಿ ಎಲ್ಲ ಭಾರತೀಯ ಭಾಷೆಗಳನ್ನು [illegible] ಈ ಸೂಚನೆಗೆ [illegible] ನಮ್ಮ ಎಷ್ಟೋ ಶಬ್ದಗಳು [illegible] ಟೈಪ್‌ರೈಟರ್, ಅಕ್ಷರ ಜೋಡಣೆ, ಅಕ್ಷರ [illegible] ಸಂಕೇತ [illegible] ಅವೆಲ್ಲ ಅನುಕೂಲ [illegible] ಭಾರತೀಯ ಭಾಷೆಗಳ [illegible] ಅನುಕೂಲವಿಲ್ಲ ಆ ವರೆಗೆ ಸಾವಿರ ರೀತಿ [illegible] ರೋಮನ್ ಲಿಪಿ [illegible] ಭಾರತೀಯ ಭಾಷೆಗಳನ್ನು [illegible] ನಮ್ಮ ಭಾಷೆಗಳಲ್ಲಿ ಯಾವುದನ್ನು [illegible] ಸುಲಭವಾಗಿ ಬರೆಯಬಹುದು [illegible] ಭಾರತೀಯರ [illegible] ಅಕ್ಷರವನ್ನು [illegible] ಪರಿಚಯ [illegible] ಕಲಿಸು [illegible] ಆ ಸುಧಾರಣೆ ಏಕೆ ಬೇಡ? ಅಕ್ಷರ ಲಿಪಿ ಸುಧಾರಣೆಯ ಬಗ್ಗೆ ನಮ್ಮ [illegible] ಬುದ್ಧಿಯ ವಿದ್ವಾಂಸರ [illegible] ಎಷ್ಟು [illegible] ರೋಮನ್ ಲಿಪಿಗೂ ಅದರ [illegible] ತೋರುತ್ತದೆ!

[illegible] — ಪಾ.

× × ×

ರೋಮನ್ ಲಿಪಿಯ ಪ್ರಚಾರಕರು ಹಿಂದುಸ್ತಾನ [illegible] ಪಾಕಿಸ್ತಾನದ [illegible] ಹಿಂದುಸ್ತಾನದಲ್ಲಿ [illegible] ಹಾಗೆ. ಹಿಂದೀ [illegible] ವಿದ್ಯಾಭ್ಯಾಸ ಪದ್ಧತಿ, [illegible] ಜೀವನ [illegible] ಆಗಲೇ [illegible] ಭಾರತೀಯೇತರವಾದ ರೋಮನ್ ಲಿಪಿಯನ್ನು ಭಾರತೀಯ ಭಾಷೆಗಳ [illegible] ಭಾರತೀಯತೆ ಇದೆ ಎಂದು [illegible] ಹೇಳಲು ಸಾಧ್ಯವೇ? [illegible] ಭಾಷೆಗಳಲ್ಲದೆ [illegible] ಅವೆಲ್ಲ [illegible] ಅನ್ಯ ಲಿಪಿಯ [illegible] ಅಲ್ಲದೆ ಹಿಂದೀ [illegible] ಮತ್ತು [illegible] ಸಂಪೂರ್ಣ [illegible] ಭಾರತೀಯತೆಯನ್ನು [illegible] ಇಂಗ್ಲೀಷು [illegible] ರೋಮನ್ ಲಿಪಿಯ [illegible] ಶ್ರೀ [illegible] ಮುಸ್ಲಿಮರು [illegible] ಕಾರಣ, ಮತಭೇದ [illegible] ನಮ್ಮ [illegible] ಮುಂದೆ [illegible] ಭಾವಿಸುತ್ತೇನೆ.

[illegible] — ಭಾರತ ಪುತ್ರ

ಕರ್ಮವೀರದ ಮುಖಪತ್ರ

[illegible] ಜನಪ್ರಿಯವಾದ ಕರ್ಮವೀರ ಸಾಪ್ತಾಹಿಕವು [illegible] ಒಂದು [illegible] ಸಂಚಿಕೆಯಾಗಿ [illegible] ಪತ್ರಿಕೆಗಳಲ್ಲಿ [illegible] ಒಂದೊಂದಾಗಿ [illegible] ಕರ್ಮವೀರ [illegible] ಅದರ [illegible] ನಾನಾ [illegible] ಸಂಗ್ರಹ [illegible] ಅಲ್ಲದೆ [illegible] ಮುಖಪತ್ರಿಕೆಯನ್ನು [illegible] ಜನಪ್ರಿಯ [illegible] ಕಾಲದ [illegible] ಬಂದಿರುವ [illegible] ನೋಡಲು [illegible] ಮುಖಪತ್ರದ [illegible] ಕೊಡಬೇಕೆಂದು [illegible]

[illegible] — ವಿಶ್ವೇಶ್ವರ ಅಯ್ಯಂಗಾರ್

ವಿವಿಧ ಪ್ರಪಂಚ

೨೩ ಸಾವಿರ ಮೈಲು ಓಡುವ ವಿಮಾನ

ಬ್ರಿಟನ್ನಿನಿಂದ ಆಸ್ಟ್ರೇಲಿಯ ನ್ಯೂಜಿಲೆಂಡು ಗಳ ವರೆಗೆ ಓಡಾಡುವ "ಹ್ಯಾಂಡ್ಲೆ ಪೇಜ್ ಹೇಸ್ಟಿಂಗ್ಸ್" ವಿಮಾನ ಸರ್ವಿಸು ಪ್ರಾರಂಭವಾಗಲಿದೆ. ಅದರ ಪ್ರಯಾಣ ಕಾಲ ಸುಮಾರು ೩ ವಾರ, ದೂರ ೨೩ ಸಾವಿರ ಮೈಲು. ಅದು ಅಲ್ಲಿಯ ವರೆಗೆ ಬ್ರಿಟನ್ನಿನಲ್ಲಿ ತಯಾರಾದ ವಿಮಾನಗಳಲ್ಲೆಲ್ಲ ಹೆಚ್ಚು ಶೀಘ್ರಗಾಮಿ, ಅದು ಮಾಲ್ಟ, [illegible], ಪಾಕಿಸ್ತಾನ, ಭಾರತ [illegible] ಇಂಡೀಸುಗಳ ಮೇಲೆ ಹಾರಿ ಹೋಗುತ್ತದೆ. ಉಷ್ಣವಲಯದಲ್ಲಿ ಆ ವಿಮಾನ ಹೇಗೆ ನಡೆಯುತ್ತದೆ ಮತ್ತು ಮೇಲಿಂದ ಮೇಲೆ ಅದನ್ನು ಬಳಸಿದರೆ ಏನಾಗುತ್ತದೆ ಎಂಬುದನ್ನು ನೋಡುವುದೇ ಅದನ್ನು ಹೊರಡಿಸುವ ಉದ್ದೇಶ.

× × ×

ಮಕ್ಕಳ ಉದ್ಧಾರ

ಚೀನದಿಂದ [illegible] ವರೆಗಿನ ಪ್ರದೇಶದ ೪೦ ಕೋಟಿ ಮಕ್ಕಳನ್ನು ರೋಗ [illegible] ದಿಂದ ರಕ್ಷಿಸಲು ಬ್ರಿಟನ್ನು ಪ್ರಯತ್ನ ಮಾಡುತ್ತದೆ. ಲಂಡನ್ನಿನ ಲಾರ್ಡ ಮೇಯರರಾದ ಸರ್ ಫ್ರೆಡರಿಕ್ ವೇಲ್ಸ್ ಮತ್ತು ಬ್ರಿಟನ್ನಿನ

ಸ್ಟಾಲಿನ್ನರ ಮೊದಲನೆಯ ಹೆಂಡತಿಯ ಮಗ [illegible] ೪೦ ವರ್ಷ ವಯಸ್ಸು. ಅವನ ಹೆಸರು ಜೇಕಬ್. ಅವನನ್ನು ಜರ್ಮನರು ಹಿಡಿದಿದ್ದರು; ಆದರೆ ಅವನು ತಪ್ಪಿಸಿಕೊಂಡು ಬಂದನು. ಅವನಿಗೊಬ್ಬಳು ಮಗಳು ಮತ್ತು ಒಬ್ಬ ಮಗ ಇದ್ದಾರೆ.

× × ×

ತಾಜಾ ರಾಜಕುಮಾರಿ !

ಮೊದಲ ಸಲ ಪ್ಯಾರಿಸ್ಸಿಗೆ ಹೋದಾಗ ರಾಜಕುಮಾರಿ ಎಲಿಜಬೆತಳು ಬೇಕು ಬೇಕಾದ ಬಟ್ಟೆಗಳನ್ನು ಕೊಂಡಳಂತೆ.

ಸಿಕ್ಕ ಸಿಕ್ಕಲ್ಲಿ ಅವಳು ತಿರುಗಿದಳು. ಆ ಪಾರೀಸಿಗೆ ಹೋದಳು, ನಗರದ ಅತಿ ಪ್ರಸಿದ್ಧ ಹೊಟೇಲುಗಳಿಗೆ ಭೆಟ್ಟಿ ಕೊಟ್ಟಳು, ರಾತ್ರಿಯ [illegible] ಗಳೊಂದನ್ನೂ ಬಿಡದೆ ಹೋದಳು; ಎಲ್ಲಿ ನೋಡಿದರೂ ಅವಳು ಹೊಸ ಉಡುಪಿನಲ್ಲಿ, ಬದಲಾದ ಬೇರೆಯ ಪೋಷಾಕಿನಲ್ಲಿ ಕಾಣಿಸಿಕೊಳ್ಳುತ್ತಿದ್ದಳು! ತೀರ ಬೇರಾದ ರೂಪದಲ್ಲಿ ಅವಳು ಅಲ್ಲಿ ಕಾಣಿಸಿಕೊಂಡಳು!

ಇಂಥವಳು ನಾಳೆ ಇಂಗ್ಲೆಂಡಿನ ರಾಜಮಾತೆಯಾಗುವಳು. ಇವಳಿಗಿನ್ನ ಬೇಕಲ್ಲವೆ ತಾಜಾ ರಾಣಿ ಎಂದು? ಇಂಥದೇ [illegible] ನಮ್ಮ ಹಿಂದೀ

"ಡೇವಿಸ್ ಕಪ್ಪಿ"ಗಾಗಿ ಗ್ರೇಟಬ್ರಿಟನ್ನಿನಲ್ಲಿ ನಡೆದ ಅಂತರ್ ರಾಷ್ಟ್ರೀಯ "ಲಾನ್ ಟೆನಿಸ್" ಪಂದ್ಯದಲ್ಲಿ ಭಾರತೀಯರು ಭಾಗವಹಿಸಿದಾಗ, ಭಾರತೀಯನಾದ ಶ್ರೀ ಸಾಹನಿಯ ಹಸ್ತಾಕ್ಷರಕ್ಕಾಗಿ ಆಂಗ್ಲ ತರುಣ—ತರುಣಿಯರು ಮುತ್ತಿ ಹಾಕಿರುವುದು

ವಿದೇಶ ಮಂತ್ರಿಯಾದ ಶ್ರೀ ಅರ್ನೆಸ್ಟ್ ಬೆವಿನ್ನರು ಇದಕ್ಕಾಗಿ ಸಂಗ್ರಹಿಸಲಾಗುವ [illegible] ನಿಧಿಗೆ ಪ್ರಿನ್ಸ್ ತನ್ನ ದಾನವನ್ನು ಕೊಟ್ಟಿದ ಎಂದು ಪಂದಿಗೆಯಿಂದ ಎನು [illegible]. ಬ್ರಿಟನ ಸಾರ್ವಜನಿಕರು [illegible] ರೂಪಾಯಿಗಳನ್ನು ಕೊಟ್ಟರೆ ಸರಕಾರವು ೧೩,೩೭,೦೦೦ ಪಷ್ಟು ಕೊಡುವುದೆಂದು ತಿಳಿಯುತ್ತದೆ.

× × ×

ಸ್ಟ್ಯಾಲಿನ್ನರ ಕುಲದೀಪಕ !

ರಶಿಯದ ಅಧ್ಯಕ್ಷರಾದ ಸ್ಟಾಲಿನ್ನರ ಮಗನಾದ ಮೇಜರ್ ಜನರಲ್ ವಾಸಿಲಿ ಸ್ಟಾಲಿನ್ನನಿಗೆ ಈಗ ೨೭ ವರ್ಷ ವಯಸ್ಸು. ಯುದ್ಧ ಕಾಲದಲ್ಲಿ ಅವನನ್ನು ಹೊರಗಿಡಬೇಕೆಂದು ಅವರೆಷ್ಟು ಎಷ್ಟು ಪ್ರಯತ್ನಿಸಿದರೂ ಆಗದೆ, ಅವನು ರಾಷ್ಟ್ರವೀರನೆಂದು ಹೆಸರು ಪಡೆದನು. ಅವನಿಗೆ ೧೯ ವರ್ಷವಿದ್ದಾಗ ಅವನು ರಶಿಯದ ಸ್ಕ್ವಾಡ್ರನ್ ದಳದ ಮುಂದಾಳಾಗಿದ್ದನು. ಅವನಿಗೆ ಚಿಕ್ಕಂದಿನಿಂದಲೂ ನಾಟಕ್ಕಿಂತ ಆಟದಲ್ಲೇ ಹೆಚ್ಚು ಅಭಿರುಚಿ.

ವಾಸಿಲಿ ಸ್ಟಾಲಿನ ಹಿಗೆ [illegible] (ಎಂದರೆ ಜಗಜ್ಜ್ಯೋತಿ ಎಂಬರ್ಥ) ಎಂಬೊಬ್ಬ ತಂಗಿ ಇದ್ದಾಳೆ. ಅವಳಿಬ್ಬರೂ ಸ್ಟಾಲಿನ್ನರ ದಿವಂಗತರಾದ [illegible] ಹೆಂಡತಿಯ ಮಕ್ಕಳು. ಆ ತಂಗಿ ಮಾಸ್ಕೋ ವಿಶ್ವವಿದ್ಯಾಲಯದ ಪದವೀಧರಳೊಬ್ಬನನ್ನು ಮದುವೆಯಾಗಿ ಒಂದು ಮಗುವನ್ನು ಪಡೆದಿದ್ದಾಳೆ.

ರಾಜರಿಗೂ ಇದೆ. ಜನರ ಸುಖ ದುಃಖ ತಿಳಿದುಕೊಳ್ಳುವುದರಲ್ಲಿ ಅವರು ಇಂಥದೇ ಶಿಕ್ಷಣ ಪಡೆದಿದ್ದರು.

ಈ ನೂರಕ್ಕೆ ನೂರು ವಿಲಾಸಿನಿಯಾದ ರಾಜಕುಮಾರಿಯು ಉದಾಹರಣೆಯನ್ನು ನಮ್ಮ ಕವಿಗಳ ಕಲ್ಪನೆಯ ಪ್ರಾಚೀನ ವಿಲಾಸ ಭೋಗ ಲಂಪಟರಾದ ರಾಜಕುಮಾರಿಯರಿಗೆ ಹೋಲಿಸಬಹುದು. ಸ್ವಚ್ಛಂದ್ಯವೆಂದರೇನೆಂಬುದನ್ನು ಜೂದ್ರಕ ಕವಿಯು "ಮೃಚ್ಛಕಟಿಕ"ದಲ್ಲಿ ಶಕಾರನ ಬಾಯಿಂದ ಚೆನ್ನಾಗಿ ಹೇಳಿಸಿದ್ದಾನೆ:

ನಾ ಎಷ್ಟ ಗಂಟೆಂದೊಮ್ಮೆ ತಲೆಯನು
ಬಿಚ್ಚಿ ಸುಡೆನಾಮೊಮ್ಮೆ, ಜುಟ್ಟವ
ಕಟ್ಟಿಗೆದುರಪ್ಪಂತೆ ಕಟ್ಟುವೆ
ನೊಮ್ಮೆ ಬೇಕಾಗಿ।
ಸಣ್ಣ ಮುಂಗುರುಳುಗಳ ಬಿಡುವೆನು
ಮತ್ತೆ ಗೆಲ್ಲದೆ ಹರಡಿಕೊಳುವೆನು,
ನನ್ನ ಮನಬಂದಂತೆ ಚಿತ್ರ
ವಿಚಿತ್ರವಾಗಿಹೆನು॥

× × ×

ಬಟ್ಟೆಯ ಬೆಲೆಯು ವಿಪರೀತ ಏರಿದುದನ್ನು ಮತ್ತು ಪಾಕಿಸ್ತಾನಕ್ಕೆ ಕಳ್ಳತನದಿಂದ ಸಾಗಿಸುತ್ತಿರುವದನ್ನು ಭಾರತ ಸರಕಾರದವರು ಗಂಭೀರವಾಗಿ ಆಲೋಚಿಸುತ್ತಿದ್ದಾರೆ. ವರ್ತಕರು ತಮ್ಮ ವರ್ತನೆಯನ್ನು ಸಕಾಲದಲ್ಲಿ ತಿದ್ದಿಕೊಳ್ಳದಿದ್ದರೆ ಸರಕಾರದವರು ಜವಳಿಯ ಉದ್ಯೋಗವನ್ನೇ ತಮ್ಮ ಸ್ವಾಧೀನಪಡಿಸಿಕೊಳ್ಳುವವರಿದ್ದಾರೆಂದು ತಿಳಿಯಬರುತ್ತದೆ.

ಅಧಿಕ ಆಹಾರದ ಬಗ್ಗೆ ವಿಫಲ ಪ್ರಚಾರ

ಕೇಂದ್ರ ಆಹಾರ ಸಮಿತಿಯ ಸೂಚನೆಗಳು

ಹಿಂದುಸ್ತಾನದ ಆಹಾರ ಧೋರಣ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿದ್ದು ೧೯೪೩ ರಿಂದ ೪೭ ರ ವರೆಗೆ ನಡೆದ ಅಧಿಕ ಆಹಾರ ಪ್ರಚಾರವು ವಿಫಲವಾಗಿದೆಯೆಂದು ಅದರಲ್ಲಿ ಎತ್ತಿ ತೋರಿಸಲಾಗಿದೆ.

ಹಿಂದುಸ್ತಾನದ ಆಹಾರದ ಅಭಾವವನ್ನು ನೀಗಬೇಕಾದರೆ ಪ್ರತಿವರ್ಷ ೧ ಕೋಟಿ ಟನ್ ಆಹಾರ ಧಾನ್ಯವನ್ನು ಹೆಚ್ಚಿಗೆ ಬೆಳೆವುದು ಅಗತ್ಯವೆಂದು ಎಣಿಕೆ ಹಾಕಿದ್ದಾಗಿದೆ. ಈ ಅಧಿಕ ಉತ್ಪತ್ತಿಗೆ ನೀರಾವರಿಯ ದೊಡ್ಡ ಪ್ರಮಾಣದ ಯೋಜನೆಗಳು, ಈಗಾಗಲೇ ಸಾಗುವಳಿಯಲ್ಲಿದ್ದ ಭೂಮಿಗೆ ಹೆಚ್ಚು ನೀರು, ಉತ್ತಮ, ಗೊಬ್ಬರ ಮತ್ತು ಉತ್ತಮ ಬೀಜ ಒದಗಿಸುವದು, ಪಡಭೂಮಿಗಳನ್ನು ಸಾಗುಗೊಳಿಸುವದು ಇವೇ ಮೊದಲಾದ ಉಪಾಯಗಳನ್ನು ಸಮಿತಿಯು ಸೂಚಿಸಿದೆ. ಆಹಾರದ ಕೊರತೆಗೆ ಕೊಟ್ಟ ಕಾರಣಗಳಲ್ಲಿ, ಹಿಂದುಸ್ತಾನದ ಜನಸಂಖ್ಯೆಯು ಹೆಚ್ಚಿದ್ದು ಆ ಪ್ರಮಾಣದಲ್ಲಿ ಆಹಾರದ ಉತ್ಪಾದನೆ ಹೆಚ್ಚದಿರುವದು ಒಂದಾಗಿದೆ.

ಆಹಾರದ ಅಭಾವವು ಇಷ್ಟೊಂದು ಇರುತ್ತಿದ್ದರೂ ಈ ವರೆಗೆ ಪಡಭೂಮಿಗಳನ್ನು ಯೋಗ್ಯ ರೀತಿಯಲ್ಲಿ ಸಾಗುಮಾಡದಿದ್ದುದು ಆಶ್ಚರ್ಯವೆಂದು ಸರಕಾರವನ್ನು ಸಮಿತಿಯು ಗಂಭೀರವಾಗಿ ಆರೋಪಿಸಿದೆ. ಭೂಸುಧಾರಣೆಯ ವಿಷಯದಲ್ಲಿ ಪ್ರಾಂತ ಪ್ರಾಂತಗಳಲ್ಲಿ ಏಕರೂಪತೆ ಇರಬೇಕೆಂದು ಸೂಚಿಸಿ ಭೂಸುಧಾರಣೆಯ ಬಗ್ಗೆ ಕೇಂದ್ರ ಸರಕಾರವು ಪ್ರಾಂತಿಕ ಸರಕಾರಗಳಿಗೆ ಕೊಡಬೇಕೆಂಬ ಧನಸಹಾಯವನ್ನು ಒಮ್ಮಿಗೇ ಕೊಟ್ಟುಬಿಡತಕ್ಕದ್ದೆಂದು ಸಲಹೆಕೊಟ್ಟಿದೆ.

ಕೇಂದ್ರ ಸರಕಾರವು ೩೦ ಕೋಟಿ ಬಂಡವಲ ಹಾಕಿ "ಕೃಷಿಸುಧಾರಣಾ ಕೇಂದ್ರ" ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿ ಅದರ ಮುಖಾಂತರ ಭೂಮಿಯನ್ನು ಹದಗೊಳಿಸಬೇಕೆಂದೂ ಈ ೩೦ ಸಂಸ್ಥೆಯಲ್ಲಿ ಕೇಂದ್ರ ಸರಕಾರದವರೇ ೭ ಜನ ಡೈರೆಕ್ಟರರನ್ನ ನೇಮಿಸತಕ್ಕದ್ದೆಂದೂ ಅವರಲ್ಲಿ, ವಾಣಿಜ್ಯ, ಒಕ್ಕಲತನ, ನೀರಾವರಿ, ಭೂಸುಧಾರಣೆ, ಹಣಕಾಸ, ಈ ವಿಷಯಗಳ ತಜ್ಞರೂ ಭೂಮಿಯನ್ನು [illegible] ಸಾಗುವಳಿ ಮಾಡುವವರ ಪ್ರತಿನಿಧಿಗಳೂ ಇರತಕ್ಕದ್ದೆಂದು ಸೂಚಿಸಿದೆ.

ಈ ಸಂಸ್ಥೆಯು ೧೦ ಸಾವಿರ ಎಕರೆಗೆ ಕಡಿಮೆಯಿಲ್ಲದಷ್ಟು ಬೀಳು ಭೂಮಿ ಸಾಗುವಳಿಯಾಗುವಂತೆ ನೋಡಿಕೊಳ್ಳತಕ್ಕದ್ದೆಂದೂ ೨೦೦ ಎಕರೆಗಿಂತ ಕಡಿಮೆಯಾಗದಂತೆ ತುಂಡುಗಳನ್ನು ಮಾಡಿ ಯಾಂತ್ರಿಕ ಸಹಾಯದಿಂದ ಉತ್ತುವದು ಬಿತ್ತುವದು ನಡೆಯಬೇಕೆಂದೂ ಸಮಿತಿಯು ಸ್ಪಷ್ಟಪಡಿಸಿದೆ.

ಆಹಾರದಂಥ ಅತ್ಯಾವಶ್ಯಕ ವಸ್ತುವನ್ನು ಹೊರದೇಶದಿಂದ ತರಿಸಿಕೊಳ್ಳುವದು ಗಂಡಾಂತರದ್ದೆಂದೂ ಈ ಆಯಾತ ಇನ್ನು ೫ ವರ್ಷಗಳ ಅವಧಿಯಲ್ಲಿ ನಿಲ್ಲಬೇಕೆಂದೂ ಕೇಂದ್ರ ಸರಕಾರದವರು ಬಂಗಾಲ, ಕ್ಷಾಮಗ್ರಸ್ತ ಮೊದಲಾದ ಅತಿರೇಕ ಪ್ರಸಂಗಗಳನ್ನು ಎದುರಿಸಲು ೧೧ ಲಕ್ಷ ಟನ್ನ ಗೋದಿ ಅಥವಾ ಅಕ್ಕಿಯನ್ನು ಯಾವಾಗಲೂ ಸಂಗ್ರಹದಲ್ಲಿಟ್ಟಿರಬೇಕೆಂದೂ ಸಮಿತಿಯು ನಿರ್ದಿಷ್ಟಪಡಿಸಿ ಆಹಾರ ಧಾನ್ಯದ ಆಯಾತವು ಸಂಪೂರ್ಣ ಕೇಂದ್ರ ಸರಕಾರದ ನಿಯಂತ್ರಣದಲ್ಲಿರಬೇಕೆಂದು ಸೂಚಿಸಿದೆ.

ಇಂಗ್ಲೆಂಡಿನಲ್ಲಿ ಒಲಿಂಪಿಕ್ ಪಂದ್ಯ

೨೫ ಲಕ್ಷ ಟಿಕೇಟುಗಳನ್ನು ಈ ಬೇಸಿಗೆಯ ಒಲಿಂಪಿಕ್ ಪಂದ್ಯಗಳಿಗಾಗಿ ಲಂಡನ್ನಿನಲ್ಲಿ ಅಚ್ಚು ಹಾಕಿಸಿದ್ದಾರೆ. ಅವುಗಳಲ್ಲಿ ಅರ್ಧಾಂಶ ಹೊರನಾಡಿಗರಿಗೆ ಮಾರಲ್ಪಡುವುದು. ಉಳಿದವುಗಳಲ್ಲಿ ನೂರಕ್ಕೆ ೧೬.೬ ನ್ನು ಬ್ರಿಟನ್ನಿನಲ್ಲಿಯ ಆಟದ ಅಡಕ ಸಂಸ್ಥೆಗಳಿಗೆಂದು ಆಗಲೇ ಹಂಚಲಾಗಿದೆ. ಉಳಿದ ೩೩.೪ ಅಂಶ ಸಾಮಾನ್ಯ ಪ್ರಜೆಗಳಿಗೆಂದು ನಿರ್ಣಯಿಸಲಾಗಿದೆ. ಟಿಕೇಟು ಹಂಚುವಿಕೆಯಲ್ಲಿ ಗೊಂದಲವಾಗದಂತೆ ಬೇಕಾದ ಮುಂಜಾಗ್ರತೆಯನ್ನು ಕೈಗೊಳ್ಳಲಾಗಿದೆ.

ಕಾಲು ಚೆಂಡ ಟೀಮಿನಲ್ಲಿ ಉಳಿದ ದೇಶಗಳಷ್ಟು ಅಮೇರಿಕಕ್ಕೆ ಆಸಕ್ತಿ ಇಲ್ಲದಿದ್ದರೂ ಅದು ತನಗೆಂದು ಕಾದಿಟ್ಟ ಟಿಕೇಟುಗಳೆಲ್ಲವನ್ನೂ ಕೊಂಡಿದೆ. ರುಮೇನಿಯ, ಬಲ್ಗೇರಿಯ, ಜೆಕೊಸ್ಲೋವೇಕಿಯ ಮತ್ತು ಯುಗೋಸ್ಲೇವಿಯಗಳು ಟಿಕೇಟಿಗಾಗಿ ಅರ್ಜಿ ಹಾಕಿವೆ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟಿ

ತಾ. ೨೬

ಶೇರ ಪೇಟೆಯಲ್ಲಿ ಹೈದರಾಬಾದ ಮತ್ತು ಪಾಕಿಸ್ತಾನ ಸಮಸ್ಯೆಗಳ ಪರಿಣಾಮ ದುರೂಹ್ಯವೆಂದು ಕಂಡುಬಂದದ್ದರಿಂದ ಬೆಲೆಗಳು ಕೆಳಗಿಳಿದು ಅಸ್ಥಿರವಾಗಿಯೇ ಇವೆ. ಇಂದಿನ ದರಗಳು ಈ ವಾರದಲ್ಲಿಲ್ಲ ಹೆಚ್ಚು ಕಡಿಮೆ ಕನಿಷ್ಠ ದರ್ಜೆಯಲ್ಲೇ ಇದ್ದವೆಂದು ಹೇಳಬಹುದು. ಮುಖ್ಯವಾಗಿನ ದರಗಳು ಇಂತಿದ್ದವು:

ಜವಳಿ

ಅಹಮ್ಮದಾಬಾದ ಅಡ್ವಾನ್ಸ	೨೭೬-೪-೦
ಬಾಂಬೇ ಡಾಯಿಂಗ	೧೧೦೬-೪-೦
ಸೆಂಟ್ರಲ ಇಂಡಿಯಾ	೩೧೫-೦-೦
ಸೇಚುರಿ	೫೧೫-೦-೦
ಫೀನಿಕ್ಸ	೪೫೭-೮-೦
ಕೋಹಿನೂರು	೬೪೨-೦-೦
ಸ್ವದೇಶಿ	೬೪೧-೦-೦

ಇತರ

ಬೇಲಾಪುರ ಸಕ್ಕರೆ	೩೩೯-೦-೦
ಬಾಂಬೇ ಬರ್ಮಾ	೪೩೭-೭-೦
ಟಾಟಾ ಸ್ಟೀಲ ಡೆಫರ್ಡ್ಸ	೧೬೩೨-೮-೦
,, ಸಾದಾ	೩೨೬-೦-೦
ಸಿಂಧ್ಯಾ ಸ್ಟೀಮ	೨೭-೧೩-೦
ಇಂಡಿಯನ್ ಅಯರ್ನ	೨೯-೧೧-೦
ಸೆಂಟ್ರಲ ಬ್ಯಾಂಕ(೨೫-೫-೪೮)	೮೩-೮-೦
ಇಂಪೀರಿಯಲ ಪೂರ್ಣ ,,	೧೯೯೦-೦-೦
ಇಂಡಿಯನ್ ಬ್ಯಾಂಕ ,,	೨೨೪-೦-೦
ರಿಝರ್ವ ,,	೧೧೨-೦-೦

ಸರಕಾರಿ ಸಾಲ ಪತ್ರ

೩ ೦/೦ ೪೮-೫೩	೧೦೦-೪-೦
೩½ ೦/೦ ೪೭-೫೩	೧೦೧-೬-೦
೩ ೦/೦ ೬೩ ೬೫	೧೧೧-೫-೦

ಚಿನ್ನ - ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿಯೂ ಶೈಥಿಲ್ಯ ಕಾಲಿಟ್ಟಿದೆ. ಹೈದರಾಬಾದ ಪಾಲಿಸ್ತಾನಗಳ ಸುದ್ದಿಗಳೂ ಪೇಟಿಯ ಮೇಲೆ ಪರಿಣಾಮ ಮಾಡಿದವು ಬೆಲೆಗಳನ್ನು ಏರಿಕೆಯಲ್ಲಿಡಲು ಶೇಟ ವ್ಯಾಪಾರಿಗಳು ಸಮರ್ಥರಾಗಲಿಲ್ಲ. ತಾ ೨೨ ಕ್ಕೆ ಪೇಟಿಯಲ್ಲಿ ತಯಾರಿ ಚಿನ್ನ ೧೧೨-೪-೦ ತಯಾರಿ ಬೆಳ್ಳಿ ೧೬೬-೬-೦ ಕ್ಕಿಳಿದು ಹೋದರೂ ಮುಂದೆ ಅಲ್ಪ ಸ್ವಲ್ಪ ಸುಧಾರಿಸಿದವು. ತಾ ೨೭ ಕ್ಕೆ ಈ ಪ್ರಕಾರ ಅವು ಕೊನೆಗೊಂಡವು:

ತಯಾರಿ	ಚಿನ್ನ	೧೧೪-೧೫-೦
ವಾಯದಾ	,,	೧೧೪-೧೦-೦
ತಯಾರಿ	ಬೆಳ್ಳಿ	೧೬೮-೧೦-೦
ವಾಯದಾ	,,	೧೬೮-೧೪-೦

ಅರಳೆ ಪೇಟಿ

ತಾ. ೨೭

ಜಪಾನು ನಮ್ಮ ಹತ್ತಿಯ ಅರಳೆಯನ್ನು ಧಾರಾಳವಾಗಿ ಕೊಂಡುಕೊಳ್ಳುವದೆಂಬ ಆಶಯಿಂದ ಅತಿಯಾಗಿ ಏರಿಕೊಂಡಿದ್ದ ಅರಳೆ ಬೆಲೆಗಳು ಕಳೆದ ವಾರಾಂತ್ಯದಲ್ಲಿ ನಿರ್ಯಾತ ಮಾಡುವ ಅರಳೆಯ ಪ್ರಮಾಣ ಕಡಿಮೆಯೆಂಬ ಸುದ್ದಿಯಿಂದ ತೀರ ಕೆಳಗಿಳಿದವು. ಆದರೆ ಮುಂದೆ ಸುಧಾರಿಸಿಕೊಂಡವು. ತಾ. ೨೧ ದಿನ ಜುಲೈ ಅರಳೆ ೭೧೭-೮-೦ ಕ್ಕೆ ಬಂದುಬಿಟ್ಟಿತ್ತು. ಇಂದಿನ ಕೊನೆಯ ದರಗಳು ಇಂತಿದ್ದವು.

ಜುಲೈ	೭೫೩-೮-೦
ಸೆಪ್ಟಂಬರ	೭೫೭-೮-೦

ಎಣ್ಣೆ ಕಾಳುಗಳು

ಶೇಂಗಾ	೧೭೦-೦-೦
,, ಹೊಸ	೧೬೮-೨-೦
ಅಗಸಿ	೨೬-೮-೦
ಅಗಸಿ ಎಣ್ಣೆ	೧೬-೧೨-೦

ಸಾಂಗಲಿ ಪೇಟಿ

ತಾ. ೨೫

ಅರಿಷಿಣ ಹೇಡು (ಹೊಸ)	೧೧೫-೧೧೯
ಶೇಂಗಾ ಖಂಡಿ	೧೩೦
ಹೊಸ ಮೆಣಸಿನಕಾಯಿ	೧೩೦-೧೭೨
ಬೆಲ್ಲ	೩೦-೫೨

ಶಿವಮೊಗ್ಗ

ತಾ. ೨೫

ದೇಶಾವರ ನಂ. ೧ ಮಣ ೧ ಕ್ಕೆ	೩೬-೩೮
,, ,, ೨	೩೩-೩೬
ರಾಶಾ ಅಲವು	೩೩-೩೬
ಕೊಡಿಸಾಲು ,,	೩೦-೩೩
ಪಂತಿ ಬೆಟ್ಟೆ	೨೪-೨೮
ಬೆಟ್ಟೆ	೨೧-೨೨
ಮೆಣಸು	೩೬-೩೭

ನಾಲ್ಕು ಮಾತು — ರಂಗನಾಥ ದಿವಾಕರ

೧ ಸಂಯುಕ್ತ ಕರ್ನಾಟಕ

ಹಿಂದುಸ್ತಾನದ ಸ್ವಾತಂತ್ರ್ಯದ ವಿಷಯವು ಹಲವೊಂದು ಕಾಲದ ವರೆಗೆ ಹಿಂದೀಯರ ಹೃದಯವನ್ನೆಲ್ಲ ವ್ಯಾಪಿಸಿಬಿಟ್ಟಿತ್ತು. ಈಗ ಸಂಯುಕ್ತ ಕರ್ನಾಟಕದ ವಿಷಯವು ಅದೇ ರೀತಿ ಕರ್ನಾಟಕಸ್ಥರ ಹೃದಯವನ್ನು ವ್ಯಾಪಿಸಿಬಿಟ್ಟಿರುವದು. ಅದಕ್ಕೆ ಏಕತಂತ್ರ ಕರ್ನಾಟಕದ ವಿಷಯ ಎಂದರೂ ಸಲ್ಲುವದು. ಪ್ರತಿಯೊಬ್ಬ ಕರ್ನಾಟಕಸ್ಥನ ಅಂತಃಕರಣದಲ್ಲಿರುವ ಈ ಆಶೆ ಆಕಾಂಕ್ಷೆಯು ಕೈಗೂಡುವ ವರೆಗೆ ಅವನಿಗೆ ಸಮಾಧಾನವಾಗಲಾರದು. ಆ ಬಗ್ಗೆ ತನ್ನ ಕೈಲಾದ ಮಟ್ಟಿಗೆ ಹೆಣಗುವನು. ಕನಿಷ್ಠ ಪಕ್ಷ ಅವನು ಈ ಬಗ್ಗೆ ಒಂದೇ ಸವನೆ ಹಾರೈಸುತ್ತ ಇರುವನು.

× × ×

ಇದು ಕೇವಲ ಕನ್ನಡಿಗನ ಅಂದರೆ ಕನ್ನಡ ಮಾತಾಡುತ್ತಿಹನ ಅಥವಾ ಕನ್ನಡ ಮಾತೃಭಾಷೆ ಇದ್ದವನ ವಿಷಯ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅಥವಾ ಕನ್ನಡಿಗರು ಇದು ತಮ್ಮ ವಿಷಯ ಮಾತ್ರ ಎಂದು ತಿಳಿದಿದ್ದರೆ ಅದು ತಪ್ಪು. ಇದು ಕರ್ನಾಟಕದಲ್ಲಿ ಹುಟ್ಟಿ ಬೆಳೆದು ಬಂದವನ ಇಲ್ಲವೆ ಕರ್ನಾಟಕದ ಹಿತಸಂಬಂಧದೊಡನೆ ಏಕರಸನಾದ ಪ್ರತಿಯೊಬ್ಬ ಕರ್ನಾಟಕವಾಸಿಯ ವಿಷಯವೆಂಬುದನ್ನು ನಾವು ಲಕ್ಷಿಸಲಿಕ್ಕೆ ಬೇಕು. ಕರ್ನಾಟಕವು ಏಕತಂತ್ರವಾದ ಪಕ್ಷದಲ್ಲಿ- ಅದು ಆಗಿಯೇ ತೀರುವದೆಂಬಲ್ಲಿ ಯಾವ ಸಂಶಯವೂ ಇಲ್ಲ- ಕರ್ನಾಟಕವಾಸಿಗಳಾದ ಎಲ್ಲರ ಹಿತವೂ ಆಗುವದು. ಹಾಗೆ ಅದನ್ನು ಸಾಧಿಸಲಿಕ್ಕೆಂದೇ ಏಕತಂತ್ರ ಕರ್ನಾಟಕದ ಆಂದೋಲನವು ಪ್ರಾರಂಭವಾದುದು. ಕರ್ನಾಟಕದ ನಿವಾಸಿಯು ಅವನ ಭಾಷೆ, ಧರ್ಮ, ಜಾತಿ, ಲಿಂಗ, ಉದ್ಯೋಗ, ಮುಂತಾದವುಗಳು ಯಾವೇ ಇರಲಿ; ಅವನ ಆರ್ಥಿಕ, ಸಾಮಾಜಿಕ, ಭಾಷಾವಿಷಯಕ, ಸಾಂಸ್ಕೃತಿಕ, ಧಾರ್ಮಿಕ ಹಿತಸಂಬಂಧಗಳನ್ನು ಸಂರಕ್ಷಿಸಿ ಅವನ ಅಭಿವೃದ್ಧಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಡುವದು ಏಕತಂತ್ರ ಕರ್ನಾಟಕದ ಅತ್ಯಂತ ಪವಿತ್ರ ಕರ್ತವ್ಯವಾಗಿರುವದೆಂದು ನಾನು ನಂಬಿರುವೆ.

× × ×

ಕರ್ನಾಟಕದಲ್ಲಿ ಕನ್ನಡಿಗರಲ್ಲದೆ ತುಳು, ಕೊಂಕಣಿ, ಬಡಗ, ಕೊಡಗು ಎಂಬ ಗ್ರಂಥಕ್ಕೆ ವಲ್ಲದ ಭಾಷೆಗಳನ್ನಾಡುವವರು ಲಕ್ಷಾಂತರ ಜನರಿರುವರು. ಅವರ ಭಾಷೆ, ಸಂಸ್ಕೃತಿ, ವೈಶಿಷ್ಟ್ಯಗಳಿಗೆ ಯಾವದೇ ಬಾಧೆ ಬರದಂತೆ ನೋಡಿಕೊಳ್ಳುವದು ಏಕತಂತ್ರ ಕರ್ನಾಟಕ ಸರಕಾರದ ಕರ್ತವ್ಯವಾಗುವದು. ಅದೇ ರೀತಿ ಏಕತಂತ್ರ ಕರ್ನಾಟಕದಲ್ಲಿ ಲಕ್ಷಾಂತರ ತೆಲುಗರು, ತಮಿಳರು, ಮರಾಠಿಗರು, ಕೇರಳೀಯರು, ಹಿಂದುಸ್ತಾನಿಯವರು (ಮುಸಲ್ಮಾನ ಮುಂತಾದ ಹಿಂದುಸ್ತಾನಿ ಮಾತನಾಡುವವರು)ಇರುವದು ಸ್ವಾಭಾವಿಕ. ಅವರೆಲ್ಲರ ನಡೆನುಡಿಗಳಿಗೆ ಯಾವ ಬಾಧೆಯೂ ಆಗದಂತೆ ಎಚ್ಚರಪಡಬೇಕಾಗುವದು. ಕರ್ನಾಟಕವೆಂದರೆ ಪ್ರಧಾನವಾಗಿ ಕನ್ನಡಿಗರು ಇರತಕ್ಕ ಸ್ಥಾನ ಇಷ್ಟೇ ಅರ್ಥ. ಹೊರತಾಗಿ ಇತರ ಭಾಷಾಭಾಷಿಗಳ ಸಂರಕ್ಷಣೆ ಪೋಷಣೆಗಳು ಇಲ್ಲಿ ಆಗಲಾರವು ಎಂದರ್ಥವಲ್ಲ ಇಷ್ಟೇ ಅಲ್ಲ. ಅವರ ರಕ್ಷಣೆ ಪೋಷಣೆಯ ಹೊಣೆ ಕರ್ನಾಟಕದ ಮೇಲೆ ವಿಶೇಷತಃ ಕನ್ನಡಿಗರ ಮೇಲೆಯೆ ಇದೆ ಎಂದು ಹೇಳಿದರೆ ತಪ್ಪಾಗಲಾರದು.

× × ×

ಭಾಷೆ ಎಂಬುದು ಧರ್ಮವಲ್ಲ. ಅದು ಧರ್ಮವಿದ್ದ ಪಕ್ಷದಲ್ಲಿ ಒಬ್ಬನು ಒಂದೇ ಭಾಷೆಯನ್ನು ಇಟ್ಟುಕೊಳ್ಳಬೇಕಾದೀತು. ಭಾಷಾಂತರವು (ಒಂದು ಭಾಷೆ ಬಿಟ್ಟು ಇನ್ನೊಂದನ್ನು ಮಾತಾಡುವದು ಅಥವಾ ಕಲಿಯುವದ.) ಧರ್ಮಾಂತರದಷ್ಟೆ ಭಯಾನಕ ಎಂದು ಹೇಳುವ ಅನವಸ್ಥ ಪ್ರಸಂಗವು ಬಂದೀತು. ಆದರೆ ವಸ್ತುಸ್ಥಿತಿ ಹಾಗಿಲ್ಲ. ಹಾಗಾಗಕೂಡದು. ಭಾಷೆಯೆಂಬದೊಂದು ವ್ಯವಹಾರ, ವಿಚಾರವಿನಿಮಯ ಸಾಧನ. ವಿಶೇಷವು ಪ್ರಸಂಗ ಬಂದಂತೆ ನಾವು ಹಲವಾರು ಭಾಷೆಗಳನ್ನು ಕಲಿಬೇಕಾಗಬಹುದು. ಆಗ ನಾವು ಧರ್ಮಾಂತರ ಮಾಡುತ್ತಿರುವೆವೆಂಬ ಭಾವನೆ ನಮಗೆ ಬರಲಾರದು, ಬರಕೂಡದು ಭಾಷಾನುಗುಣ ಪ್ರಾಂತ ರಚನೆಯೆಂದರೆ ಪಾಕಿಸ್ತಾನದ ರಚನೆಯಲ್ಲ! ಈ ತಾರತಮ್ಯವನ್ನು ಲಕ್ಷದಲ್ಲಿಟ್ಟುಕೊಳ್ಳದಿದ್ದರೆ ಭಾಷಾವಾರ ಪ್ರಾಂತರಚನೆಯ ಪುರಸ್ಕರ್ತರು ಅಪರಾಧವನ್ನು ಮಾಡುತ್ತಿರುವರೆನ್ನಬೇಕಾದೀತು.

× × ×

ಕರ್ನಾಟಕವೆಂಬುದು ಸಾಮ್ರಾಜ್ಯ ಕುಲ ಕೆಟ್ಟು ಕಾಲದಲ್ಲಿ ಮಾತ್ರ ಒಂದೇ ಒಂದು ಆಡಳಿತಕ್ಕೆ ಸೇರಿ ಏಕತಂತ್ರವಾಗಿತ್ತು ಏನೋ. ವಿಜಯ ನಗರದ ರಾಯರ ಕಾಲದಲ್ಲಿ ಕೂಡ ವಿಜಾಪೂರ ಮುಂತಾದ ಭಾಗಗಳು ಮುಸಲ್ಮಾನರ ಕೈಸೇರಿದ್ದವು. ಅಂದರೆ ಈಗ ಸುಮಾರು ೧೦೦೦ ವರುಷಗಳಲ್ಲಿ ಕರ್ನಾಟಕವು ಏಕತಂತ್ರದಲ್ಲಿಲ್ಲ, ಅನೇಕತಂತ್ರಕ್ಕೆ ಒಳಗಾಗಿದೆ ಎಂದು ಹೇಳಬಹುದು. ಈಗ ಸುಮಾರು ಎರಡು ಕೋಟಿಯಷ್ಟು ಕರ್ನಾಟಕಸ್ಥರೆಲ್ಲರೂ ತಮ್ಮ ಇಚ್ಛಾನುಸಾರವಾಗಿ ಒಂದೇ ಆಡಳಿತಕ್ಕೆ ಸೇರಲು ಸ್ವತಂತ್ರರಿರುವರು. ಕರ್ನಾಟಕಸ್ಥರಿಗೆ ಇದೊಂದು ನಡೆದು ಬಂದ ಪರ್ವಕಾಲ. ಇದನ್ನು ಅವರು ಕಳೆಕೊಂಡರೆ ಮತ್ತೆ ಇಂಥ ಸುಸಂಧಿ ಬರುವದು ಯಾವಾಗಲೋ ಏನೋ!

× × ×

ಈ ಸಂದರ್ಭದಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕನ್ನಡ, ಕೊಡಗು ನೀಲಗಿರಿಗಳು, ಮೈಸೂರು ಸಂಸ್ಥಾನ ಇವುಗಳಲ್ಲಿರುವ ಕರ್ನಾಟಕಸ್ಥರೆಲ್ಲರೂ ಏಕಸ್ವರದಿಂದ ಏಕೀಕರಣಕ್ಕಾಗಿ ಅಥವಾ ಏಕತಂತ್ರ ಕರ್ನಾಟಕಕ್ಕಾಗಿ ಕಂಕಣಬದ್ಧರಾಗಿ ಕೆಲಸಮಾಡುವದು ಅತ್ಯವಶ್ಯ ಕೇವಲ ಮುಖಂಡರ ಮೇಲೆ ಈ ಕಾರ್ಯವನ್ನು ಬಿಟ್ಟುಬಿಡುವದು ಯೋಗ್ಯವಲ್ಲ. ಮುಖಂಡರಿಗಾದರೂ ಬಂದ ಬಲ ಎಲ್ಲಿಯದು ? ಜನಸಾಮಾನ್ಯರದು. ಪ್ರಜಾಪ್ರಭುತ್ವದ ಈ ಕಾಲದಲ್ಲಿ ಜನಸಾಮಾನ್ಯರೆ ನಿಜವಾದ ಬಲವಂತರು. ಅವರು ಮುಖಂಡರಿಗೆ ಬೆಂಬಲ, ಬಲ, ಕೊಡದೆ ಹೋದರೆ ಮುಖಂಡರಾದರೂ ಏನು ಮಾಡಬಲ್ಲರು ? ಆದುದರಿಂದ ಪ್ರತಿಯೊಬ್ಬನು ಈ ವಿಷಯದಲ್ಲಿದ್ದ ತನ್ನ ಅಭಿಮತವನ್ನು ವ್ಯಕ್ತಪಡಿಸುವದು, ಸಭೆ ಸಮ್ಮೇಲನ ದಿಗಳ ಮೂಲಕ ತಿಳಿಸುವದು, ವೃತ್ತಪತ್ರಾದಿಗಳಲ್ಲಿ ಬರೆಯುವದು ಅತ್ಯವಶ್ಯವು

೨ ಮೈಸೂರು ಮಹಾರಾಜರು

ಮೈಸೂರನ್ನೊಳಗೊಂಡ ಏಕತಂತ್ರ ಅಖಂಡ ಕರ್ನಾಟಕ ಪ್ರಾಂತವಾದ ಪಕ್ಷದಲ್ಲಿ ಮೈಸೂರು ಮಹಾರಾಜರನ್ನೆ ಶಾಸನಬದ್ಧ ಅರಸರನ್ನಾಗಿಟ್ಟುಕೊಳ್ಳಲು ಅಡ್ಡಿ ಇಲ್ಲ ಎಂಬ ಅಭಿಪ್ರಾಯವು ಈಗ ಬಲಗೊಳ್ಳುತಿದೆ. ಮೈಸೂರು ಕರ್ನಾಟಕ, ಯೂನಿಯನ್ ಕರ್ನಾಟಕ ಎಂಬ ಎರಡು ಪ್ರತ್ಯೇಕ ತುಂಡುಗಳನ್ನಿಟ್ಟುಕೊಳ್ಳಬೇಕೊ ಅಥವಾ ಮಹಾರಾಜರನ್ನು ಒಪ್ಪಿಯಾದರೂ ಒಂದೇ ಕರ್ನಾಟಕವನ್ನು ಮಾಡಬೇಕೋ ಎಂಬ ಪ್ರಶ್ನೆ ಎದುರಾದಾಗ ಪ್ರತಿಯೊಬ್ಬ ಕರ್ನಾಟಕಸ್ಥನು ಎರಡನೆ ಮಾತಿಗೆ ಒಪ್ಪುವ ಪ್ರಸಂಗ ಬರುತದು. ಸಾಧಾರಣವಾಗಿ ಸಮಬಲವಾದ ಎರಡು ಕರ್ನಾಟಕ ಪ್ರಾಂತಗಳನ್ನಿಟ್ಟುಕೊಂಡು (ಮೈಸೂರು ಮತ್ತು ಯೂನಿಯನ್ ಕರ್ನಾಟಕ) ಪರಸ್ಪರ ಮೇಲಾಟಗಳನ್ನು ಮಾಡುತ್ತ, ಮಧ್ಯವರ್ತಿ ಸರಕಾರದಲ್ಲಿ ಸಾಕಷ್ಟು ವರ್ಚಸ್ಸನ್ನು ಬೀರಲಾರದೆ, ಅಖಂಡ ಕರ್ನಾಟಕಕ್ಕಾಗಿ ಮಹಾಯೋಜನೆಗಳನ್ನು ಕೈಕೊಂಡ ಎರಡು ಕೋಟಿ ಕರ್ನಾಟಕಸ್ಥರ ಹಿತವನ್ನು ಏಕಕಾಲಕ್ಕೆ ಸಾಧಿಸಲಸುವಾಗದೆ, ಇರಬೇಕೊ ಅಥವಾ ಮಹಾರಾಜರನ್ನಿಟ್ಟುಕೊಂಡು ಏಕತಂತ್ರ ಕರ್ನಾಟಕವನ್ನು ಸಾಧಿಸಬೇಕೋ ಎಂಬ ಸಮಸ್ಯೆ ಉಂಟಾದಾಗ ಶಾಸನಬದ್ಧ ಮಹಾರಾಜರನ್ನು ಇಟ್ಟುಕೊಂಡಾದರೂ ಏಕತಂತ್ರ ಕರ್ನಾಟಕವನ್ನು ಸಾಧಿಸುವದು ಹೆಚ್ಚು ಮಹತ್ವದ್ದೆಂಬುದು ಸ್ಪಷ್ಟವು

× × ×

ಮೇಲಾಗಿ ಕೇವಲ ಹಟ್ಟಿಗೇರಿಸಿ ಯಾರೂ ಬೆದರಿ ಹೋಗುವ ಕಾರಣವಿಲ್ಲ. ಶಾಸನಬದ್ಧ ಅರಸರನ್ನಿಟ್ಟುಕೊಂಡ ಇಂಗ್ಲಂಡದಲ್ಲಿ ಪ್ರಜಾಪ್ರಭುತ್ವವು ಕಡಿಮೆ ಇದೆ ಪ್ರಾನ್ಸದೇಶದಲ್ಲಿ ಹೆಚ್ಚು ಇದೆ ಎಂದು ಯಾರೂ [illegible] ಮುಸಲಮಾನರಿಗೆ ಆಗಲಿ, ಬ್ರಾಹ್ಮಣರಿಗೆ ಆಗಲಿ, [illegible] ಒಂದು ರಾಷ್ಟ್ರ [illegible] ಅಲ್ಲಿ ಅಧಿಕಾರವಿಲ್ಲ [illegible] [illegible] [illegible] [illegible] ಈಗ [illegible] ಧಿಕಾರ [illegible] ಅಧಿಕಾರವನ್ನು ನಡೆಸುವರು. [illegible] ಅಂಥ ಅಧಿಕಾರವನ್ನು ನಡೆಸುವ [illegible] ಸಂಬಂಧ [illegible] ಕಾರಣವಾದ!

× × ×

ಇದಲ್ಲದೆ ಮೈಸೂರ ಮಹಾರಾಜರಾಗಲಿ ಇತರ ಯಾರಾಗಲಿ ಅಹಿಷ್ಟವೆಂದು ಏಕೆ ತಿಳಿದುಕೊಳ್ಳಬೇಕು? ಅತ ಎರಡು [illegible] ನಡೆದ [illegible] [illegible] ರಾಜರನ್ನೊಪ್ಪಿಕೊಂಡಿರುವರೆ [illegible] ಪ್ರಜಾಪ್ರಭುತ್ವ (ಹಿಸ್ಟರಿ ಆಫ್ ದಿ ಪೀಪಲ್) ಕಲಿಸುವ ವೇಳೆ [illegible] ಕೆಲಸ ಮಾಡಹೊರಟ [illegible] ಕೊಂಡಿರುವರೆ ಹೊರತು ನಿರಂಕುಶ ರಾಜರನ್ನು ಅವರು ಒಪ್ಪಿಲ್ಲ! ಈ ಮಾತನ್ನು [illegible] ಕೇವಲ ಅರಸರು, ಮಹಾರಾಜರು, ಎಂಬ ಶಬ್ದಗಳಿಂದ ಭಯಭೀತರಾಗ ಬೇಕಾದ ಕಾರಣ [illegible] ಹುಲಿ, ಕರಡಿ, ಸಿಂಹ, ಮುಂತಾದ ಪ್ರಾಣಿಗಳು ಭಯಾನಕವಾದವುಗಳೆಂಬಲ್ಲಿ ಸಂಶಯವಿಲ್ಲ ಆದರೆ [illegible] ಯಾರಾದರೂ [illegible] ಆ ಮಕ್ಕಳಿಗೆ ಏನನ್ನಬೇಕು!

೩ ರನ್ನಮಹೋತ್ಸವ ಗ್ರಂಥ

ಹುಬ್ಬಳ್ಳಿಯ ಲೋಕಶಿಕ್ಷಣ ಧರ್ಮನಿಧಿಯವರು (ರಾಷ್ಟ್ರೀಯ ವಾಙ್ಮಯ ಟ್ರಸ್ಟ) ಈ ಗ್ರಂಥವನ್ನು ಹೊರಡಿಸಿರುವರು. ಅವರ ಯೋಜನೆಗಳಂತಾ ದಳವಾಗಿ ನಾನ ಕೆಲಸ ಮಾಡಿದ್ದರೂ ಒಂದು ವಾಸ್ತವ ದೃಷ್ಟಿಯಿಂದ (ಅಬ್ಜೆಕ್ಟಿವ್) ಅದರತ್ತ ನಾನು ನೋಡಬಲ್ಲೆನು. ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಮಂಡಲಿಯಂತೆ ಇದೊಂದು ಕಾಂಗ್ರೆಸ್ ಮಹಾಸಂಸ್ಥೆಗೆ ಅವರ ರನ್ನ ಮಹೋತ್ಸವ ಕಾಲದಲ್ಲಿ ತಮ್ಮ ಉಪಾಗರ ಎಂದು ಅರ್ಪಿಸಿದ್ದಾರೆ. ಪುಸ್ತಕದ ಆಕಾರ [illegible] ಇದ್ದು ಪುಟ ಸಂಖ್ಯೆ ೨೫೦ ಕ್ಕೆ ಮಿಕ್ಕಿದೆ. ನಾಲ್ಕಾರು ಬಣ್ಣಗಳು ಸುಂದರವಾಗಿವೆ ಅನೇಕ ಚಿತ್ರಗಳಿಂದ ಕೂಡಿದೆ. ಬೆಲೆ ತೀರ ಕಡಿಮೆ, ಅಂದರೆ ಹತ್ತೇ ರೂಪಾಯಿ

× ×

ಈ ಗ್ರಂಥದ ಅಭ್ಯಂತರಗಳನ್ನು ನಾನು ಬಲ್ಲವನಾದುದರಿಂದ ಅದರಲ್ಲಿಯ ಗುಣಗಳಿಗಿಂತ ದೋಷಗಳನ್ನು ಹೆಚ್ಚಾಗಿ ಬಲ್ಲೆನು! ಅದು ಕಾಲಕ್ಕೆ ಸರಿಯಾಗಿ ಹೊರಡಲಿಲ್ಲ ಅದರಲ್ಲಿ ಇನ್ನೂ ಅನೇಕ ಚಿತ್ರಗಳು ಬರಬೇಕಿತ್ತು. ವಿಷಯ ವಿವೇಚನವೂ ಹೆಚ್ಚಾಗಿ ಬೇಕಿತ್ತು. ವೀರಶೈವರ ಪ್ರಕರಣದಷ್ಟು ಇನ್ನೂ ಬೇಕಾದಷ್ಟು ಹಿಗ್ಗಿಸಬಹುದಾಗಿತ್ತು ಇತ್ಯಾದಿ. ಆದರೆ ನಾನು ಇದೇ ವಿಷಯಗಳಲ್ಲಿ, ಇಂಗ್ಲೀಷ, ಮರಾಠಿ, ಹಾಗೂ ಹಿಂದೀ ಪುಸ್ತಕಗಳನ್ನು ನೋಡಿರುವೆ. ಅವೆಲ್ಲವುಗಳಿಗಿಂತ ಇದರಲ್ಲಿ ಹೆಚ್ಚು ವಿಷಯಗಳು, ಚೆನ್ನಾಗಿ ವ್ಯವಸ್ಥೆಯಿಂದ ಅರಿಯಲಾದ ಪ್ರಕರಣಗಳು ಇವೆ ಎಂದು ಹೇಳಬಲ್ಲೆ. ಇಷ್ಟೇ ಅಲ್ಲ ಬೆಲೆ ಕೂಡ ಬಹಳ ಕಡಿಮೆ ಇದೆ ಎಂದು ನಾನು ಬಲ್ಲೆ. ಇದು ಚಿಕ್ಕಮಕ್ಕಳಿಗೆ, ವಿದ್ಯಾರ್ಥಿಗಳಿಗೆ, ಹೆಣ್ಣು ಮಕ್ಕಳಿಗೆ, ಜನಸಾಮಾನ್ಯರಿಗೆ ಎಲ್ಲರಿಗೂ ಉಪಯುಕ್ತವಾದ, ಅವಶ್ಯ ಸಂಗ್ರಹಣೀಯವಾದ ಒಂದು ಗ್ರಂಥ ಎಂದು ಹೇಳಬಲ್ಲೆ.

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	೧	೪೯೦-೪೯೩
,,	೨	೪೭೫-೪೮೫
,,	೩	೪೬೫-೪೭೦
ಅಪಲಂಡ ಹತ್ತಿ	೧	೪೫೦-೪೫೫
,,	೨	೪೨೦-೩೩೫
ಜಿನ		೩೪೫-೩೫೩
ಅ. ಡಬಲರೋಜ		೩೧೦-೩೨೦
ಸಾ. ಜಿನ		೩೦೦-೩೦೫
ಜ. ಹತ್ತಿಕಾಳು		೯
ಡ. ಹತ್ತೀಕಾಳು		೮

ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ

ಕಾಣಿಕೆಗಳನ್ನು ತೀವ್ರ ಸಲ್ಲಿಸಿರಿ

ಧಾರವಾಡ ನಗರದ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಆರ್. ಎಸ್. ಹುಕ್ಕೇರಿಕರರು ಕೆಳಗಿನ ಪ್ರಕಟನೆ ಕಳಿಸಿದ್ದಾರೆ.

ನಿಧಿಗಾಗಿ ಎಲ್ಲರೂ ತಮ್ಮ [illegible] ಗಳನ್ನು ಸಲ್ಲಿಸಬೇಕೆಂದು [illegible] ಅಪೇಕ್ಷೆ ಇದೆ. [illegible] [illegible] ದಿನಗಳ [illegible] ಸಲ್ಲಿಸಬಹುದು. ಆದುದರಿಂದ [illegible] ಹಣ ಕೊಡಲು ಪ್ರಾರಂಭಿಸಿ

ನಿಧಿಗಾಗಿ ಹಣ ಕೊಡುವವರು ೧) ಎಸ್. ಕೆ. ದೀಕ್ಷಿತ [illegible] (ನಗರ [illegible] ಯ ಕೋಶಾಧ್ಯಕ್ಷರು) ೨) ಕರ್ನಾಟಕ ಸೆಂಟ್ರಲ್ ಬ್ಯಾಂಕ ಧಾರವಾಡ ೩) [illegible] ಅಫೀಸರ ಧಾರವಾಡ [illegible] ಬರೆದು, ೪) [illegible] ರ ಕೊಳ್ಳಬಹುದಾದ ಬ್ಯಾಂಕ ರ [illegible] [illegible] ಅಧಿಕೃತ [illegible]

ಕರ್ಮವೀರ

ಶ್ರೀಮಚ್ಚಾಲುಕ್ಯ ವಿಕ್ರಮ ವರ್ಷ ೮೭೩
ವೈಶಾಖ ಬ. ೮ ಸೋಮವಾರ

ಏಶಿಯ ಮತ್ತು ಪೂರ್ವ ರಾಷ್ಟ್ರಗಳು

ಏಶಿಯ ಮತ್ತು ಪೂರ್ವ ರಾಷ್ಟ್ರಗಳಲ್ಲಿ ಪ್ರಾಚೀನ ಕಾಲದಿಂದ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಬಂಧವಿದ್ದರೂ ಆರ್ಥಿಕ ಅಭಿವೃದ್ಧಿಗಾಗಿ ಆ ರಾಷ್ಟ್ರಗಳು ಹಿಂದೆಂದೂ ಒಂದೆಡೆ ಕೂಡಿಕೊಳ್ಳದ್ದು ಹೇಳಬೇಕಾಗುವದು. ಕಳೆದ ಮಹಾ ವಿಶ್ವಯುದ್ಧ ಏಶಿಯ ರಾಷ್ಟ್ರಗಳ ಪರಿಸ್ಥಿತಿ ಕೂಡಿ ಈ ಬಗೆಯ ಸಂಬಂಧವನ್ನು ಬೆಳೆಸಲು ಅವಕಾಶ ಕೊಟ್ಟಿತು. ತದನಂತರ ಯುಕ್ತರಾಷ್ಟ್ರ ಸಂಘವು ಎಲ್ಲ ರಾಷ್ಟ್ರಗಳಿಗೆ ಸಾಮಾನ್ಯವಾದ ಸಮಸ್ಯೆಗಳನ್ನು ಚರ್ಚಿಸಿ ಅವುಗಳ ಪರಿಹಾರೋಪಾಯಗಳನ್ನು ಕೈಕೊಳ್ಳಲು ಪ್ರಯತ್ನಿಸಿತು. ಏಶಿಯ ಮತ್ತು ಪೂರ್ವ ರಾಷ್ಟ್ರಗಳಲ್ಲಿ ಈ ಬಗೆಯ ನಿಕಟ ಸಂಬಂಧವಿಲ್ಲದಿದ್ದುದರಿಂದ ಮುಕ್ತ ಪರಸ್ಪರ ಸಹಾಯ ಸಹಕಾರಗಳಿಂದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಅವು ಸಮರ್ಥವಾಗದೆ ಈವರೆಗೆ ಯುರೋಪ ರಾಷ್ಟ್ರಗಳ ಸುಲಿಗೆಗೆ ಈಡಾದವು.

ಯುಕ್ತರಾಷ್ಟ್ರ ಸಂಘವು ಏಶಿಯ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯ ಪ್ರಶ್ನೆಯನ್ನು ಕೈಕೊಂಡು ಆ ಬಗ್ಗೆ ಆರ್ಥಿಕ ಸಮಿತಿಯೊಂದನ್ನು ನೇಮಿಸಿತು. ಆ ಸಮಿತಿಯು ಈಗಾಗಲೆ ಎರಡು ಸಲ ಸಭೆ ಸೇರಿದ್ದು ಬರುವ ಜೂನ ೧-೨ ಕ್ಕೆ ಉದಕಮಂಡಲದಲ್ಲಿ ಮೂರನೇ ಸಭೆಯನ್ನು ಸೇರಿಸಲಿದೆ. ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಇವರು ಈ ಸಭೆಯನ್ನು ಉದ್ಘಾಟಿಸಲಿರುವರು. ಏಶಿಯದಲ್ಲಿಯ ಪ್ರಮುಖ ರಾಷ್ಟ್ರಗಳ ಪ್ರತಿನಿಧಿಗಳೆಲ್ಲ ಇದರಲ್ಲಿ ಭಾಗ ವಹಿಸಿ ಮಹತ್ವದ ಆರ್ಥಿಕ ಸಮಸ್ಯೆಗಳ ಬಗೆಗೆ ವಿಚಾರ ಮಾಡಲಿರುವದರಿಂದ ಈ ಅಧಿವೇಶನಕ್ಕೆ ಬಹಳ ಮಹತ್ವ ಪ್ರಾಪ್ತವಾಗಿದೆ. ಪಾಕಿಸ್ತಾನವಾದರೂ ತನ್ನ ಪ್ರತಿನಿಧಿಯನ್ನು ಕಳಿಸಲಿದೆ. ಪಶ್ಚಿಮದಲ್ಲಿ ಪಾಕಿಸ್ತಾನದಿಂದ ಪೂರ್ವಕ್ಕೆ ಚೀನದ ವರೆಗೆ ಇರುವ ಎಲ್ಲ ರಾಷ್ಟ್ರಗಳು ಈ ಸಮಿತಿಯ ಅಧಿಕಾರಕಕ್ಷೆಯಲ್ಲಿ ಬರುವವು.

ಏಶಿಯ ಮತ್ತು ಪೂರ್ವ ರಾಷ್ಟ್ರಗಳ ಆರ್ಥಿಕ ಪುನಾರಚನೆಯ ಉಪಾಯಗಳನ್ನು ಸೂಚಿಸುವದು ಈ ಸಮಿತಿಯ ಮುಖ್ಯ ಮತ್ತು ಮಹತ್ವದ ಕಾರ್ಯವಾಗಿದೆ. ಈ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯ ಮಟ್ಟವನ್ನೂ ಹೆಚ್ಚಿಸಬೇಕಾಗಿದೆ.

ಈ ಸಮಿತಿಯು ಈ ಮೊದಲು ಶಾಂಘಾಯ ಮತ್ತು ಫಿಲಿಪಾಯಿನ್ಸ್‌ಗಳಲ್ಲಿ ಸಭೆ ಸೇರಿ ಪ್ರಾಸ್ತಾವಿಕ ಚರ್ಚೆ ಮಾಡಿದಾಗಿದೆ. ಆಹಾರ, ಬೀಜ, ರಾಸಾಯನಿಕ ಗೊಬ್ಬರ, ಆವಳಿ, ಕಚ್ಚಾ ಸರಕು, ಔದ್ಯೋಗಿಕ ಮತ್ತು ವಾಹನ ಸೌಕರ್ಯ, ಕಲ್ಲಿದ್ದಲು ಮತ್ತು ಉಳಿದ ಉರುವಲು ಮೊದಲಾದವುಗಳ ಬಗೆ ವಿಚಾರ ಮಾಡಿ ಆಯಾ ರಾಷ್ಟ್ರಗಳು ಅವುಗಳಲ್ಲಿ ಎಷ್ಟರ ಮಟ್ಟಿಗೆ ಸ್ವಾವಲಂಬಿಯಾಗಬಹುದು, ಪರದೇಶಗಳನ್ನು ಎಷ್ಟರಮಟ್ಟಿಗೆ ಅವಲಂಬಿಸಬೇಕಾಗುವದು ಎಂಬುದನ್ನು ಅಂಕಿಸಂಖ್ಯೆಗಳಿಂದ ಕಂಡುಹಿಡಿಯಲು ಕೇಳಿಕೊಳ್ಳಲಾಗಿತ್ತು. ಫಿಲಿಪಾಯಿನ್ಸದಲ್ಲಿಯ ಸಭೆಯಲ್ಲಿ ಕಾರ್ಯಕ್ರಮದ ಸ್ಥೂಲ ರೂಪರೇಷೆಗಳನ್ನು ಗೊತ್ತು ಮಾಡಲಾಗಿದ್ದಿತು. ಆಹಾರ ಮತ್ತು ಒಕ್ಕಲತನ ಖಾತೆಯವರಿಗೆ ಈ ಭಾಗದಲ್ಲಿಯ ಆವಶ್ಯಕತೆಗಳನ್ನು ಕಂಡುಕೊಂಡು ಆಯಾ ರಾಷ್ಟ್ರಗಳ ಸಹಕಾರದಿಂದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವತ್ತ ಹೆಚ್ಚು ಗಮನವನ್ನು ಈಯಲು ಕೇಳಿಕೊಳ್ಳಲಾಗಿತ್ತು. ಈ ಪ್ರದೇಶದಲ್ಲಿ ಔದ್ಯೋಗಿಕ ಯೋಜನೆಗಳನ್ನು ವಿಚಾರಿಸಿ ಪಕ್ಕದಲ್ಲೆಲ್ಲ ಪರಸ್ಪರ ಸಹಕಾರದಿಂದ ಅದನ್ನು ಕಾರ್ಯಕಾರಿ ಮಾಡಲು ಉಪಾಯಗಳನ್ನು ಸೂಚಿಸಲು ಹಿಂದುಸ್ತಾನ, ಚೀನ, ಫಿಲಿಪಾಯಿನ್ಸ ಮತ್ತು ಇಂಡೋಚೀನ ರಾಷ್ಟ್ರಗಳ ಪ್ರತಿನಿಧಿಗಳ ಸಮಿತಿಯೊಂದನ್ನು ನೇಮಿಸಿದೆ. ಈ ಪ್ರದೇಶದಲ್ಲಿ ತಜ್ಞರ ಕೊರತೆಯಿದ್ದುದರಿಂದ ಆ ಬಗ್ಗೆ ಶಿಕ್ಷಣ ಕೊಡುವ ಸೌಕರ್ಯವನ್ನುಂಟುಮಾಡಬೇಕೆಂದು ಸಮಿತಿಯು ಸೂಚಿಸಿದೆ. ನೆರೆಹಾವಳಿ ಮೊದಲಾದ್ದರಿಂದ ಉಂಟಾಗುವ ಅನರ್ಥಗಳನ್ನು ತಪ್ಪಿಸುವದಕ್ಕಾಗಿಯೂ ಯೋಜನೆ ಮಾಡಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಉದಕಮಂಡಲದ ಅಧಿವೇಶನದ ಕಾರ್ಯಕಲಾಪಗಳು ನಡೆಯಬೇಕಾವೆ. ಏಶಿಯ ರಾಷ್ಟ್ರಗಳ ರಚನಾ ಕಾರ್ಯಕ್ಕೆ ಬಹಳಷ್ಟು ಹಣ ಬೇಕಾಗಿರುವಲ್ಲದೆ ಸಾಧನಸಂಪತ್ತಿಯ ಉಪಯೋಗವನ್ನೂ ಸಂಪೂರ್ಣ ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಪ್ರತಿಯೊಂದು ರಾಷ್ಟ್ರವು ಜೋರಿನಿಂದ ಪ್ರಯತ್ನಿಸಬೇಕಾಗಿದೆ. ವಿಶೇಷವಾಗಿ ಜಪಾನದಲ್ಲಿ ಔದ್ಯೋಗಿಕ ಉನ್ನತಿಗಾಗಿ ಇರುವ ಎಲ್ಲ ಸಾಧನ ಸಂಪತ್ತಿನ ಸಂಪೂರ್ಣ ಉಪಯೋಗ ಮಾಡಿಕೊಳ್ಳುವದವಶ್ಯವಾಗಿದೆ. ಏಶಿಯದ ಎಲ್ಲ ರಾಷ್ಟ್ರಗಳು ಇನ್ನೂ ಸ್ವತಂತ್ರವಾಗದಿದ್ದುದರಿಂದ ಯುಕ್ತರಾಷ್ಟ್ರ ಸಂಘದ ಸದಸ್ಯರಾಗಲು ಅವುಗಳಿಗೆ ಅವಕಾಶ ದೊರೆತಿಲ್ಲ. ಆದರೂ ಇವೆಲ್ಲ ರಾಷ್ಟ್ರಗಳು ಸಮಿತಿಯ ಕಾರ್ಯಕಲಾಪಗಳಲ್ಲಿ ಒಮ್ಮನಸ್ಸಿನಿಂದ ಭಾಗವಹಿಸದಿದ್ದರೆ, ಧ್ಯೇಯ ಸಾಧನೆಗೆ ತಡೆಯುಂಟಾಗುವದು.

ಯುರೋಪಿನ ರಾಷ್ಟ್ರಗಳಿಗೆ ಮಾರ್ಶಲ ಯೋಜನೆಯ ಮೂಲಕ ಸಹಾಯ ಸಲ್ಲಿಸಬೇಕೆಂದು ಅಮೇರಿಕೆ ಮುಂದೆ ಬಂದಿದೆ. ಏಶಿಯ ರಾಷ್ಟ್ರಗಳಲ್ಲಿ ನೆಹರೂ ಯೋಜನೆಯನ್ನು ಕಾರ್ಯಕ್ರಮ ಕೈಕೊಂಡು ಮಹತ್ವದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕೆಂದೆಣಿಸಲಾಗಿದೆ. ಹಿಂದುಸ್ತಾನದಲ್ಲಿ ಅಮೇರಿಕೆಯ ರಾಯಭಾರಿಗಳಾಗಿದ್ದ ಹೆನ್ರಿ ಗ್ರೇಡಿಯವರು ಈ ಬಗ್ಗೆ ಬಹಳ ಆಸ್ಥೆ ವಹಿಸಿದ್ದರು. ಸಧ್ಯದಲ್ಲಿ ನಡೆದ ಈ ರಾಷ್ಟ್ರಗಳ ಆರ್ಥಿಕ ಪುನಾರಚನೆಯ ಪ್ರಯತ್ನವು ತುಂಬ ಅಭಿನಂದನೀಯವಾಗಿದೆ. ಇದರಿಂದ ಈ ರಾಷ್ಟ್ರಗಳು ಸ್ವಾವಲಂಬಿಯಾಗುವಲ್ಲಿ ಸಂದೇಹವಿಲ್ಲ. ಪರಸ್ಪರ ಸಹಾಯ ಸಹಕಾರಗಳಿಲ್ಲದೆ ಎಂಥ ಪ್ರಬಲ ರಾಷ್ಟ್ರಗಳೂ ಸಾರ್ವಾಂಗಿಕ ಉನ್ನತಿಯನ್ನು ಪಡೆಯಲಾರವು. ಇದನ್ನು ನೆನೆದೇ ಯುಕ್ತರಾಷ್ಟ್ರ ಸಂಘವು ಈ ದಿಸೆಯಲ್ಲಿ ಹೆಜ್ಜೆ ಇಟ್ಟಿದೆ.

ಹಿಂದುಸ್ತಾನ
ಮೇ ೧೯೪೮

ಕಾಶ್ಮೀರ
ಪಾಕಿಸ್ತಾನ
ರಾಮಪುರ
ಜೈಸಲ್ಮೇರ
ಜೋಧಪುರ
ಬನಾರಸ
ಸಿಕ್ಕಿಂ
ಭೂತಾನ
ಮಣಿಪುರ
ಮಯೂರಭಂಜ
ಬ್ರಹ್ಮದೇಶ
ಹೈದ್ರಾಬಾದ
ಕೊಲ್ಹಾಪುರ
ಸಂಡೂರ
ಮೈಸೂರು
ತಿರುವಾಂಕೂರ

ಪಾಕಿಸ್ತಾನ
ಹಿಂದೀ ಒಕ್ಕೂಟ ಭಾಗಗಳು
ಕೊಂದರೆಯ ಪ್ರದೇಶಗಳು
ವೈಶಿಷ್ಟ್ಯ ಕಾದುಕೊಂಡ ಸಂಸ್ಥಾನಗಳು
ಒಕ್ಕೂಟ ರಚಿಸಿಕೊಂಡ ಸಂಸ್ಥಾನಗಳು

ಸರದಾರ ಪಟೇಲರ ಅಭಿನಂದನೀಯ ಪ್ರಯತ್ನ

ಆಗಸ್ಟ್ ೧೯೪೭ ರಲ್ಲಿ ಹಿಂದುಸ್ತಾನದಲ್ಲಿ ೬೦೦ ಮಿಕ್ಕಿ "ರಾಜಸ್ಥಾನ" ಗಳಿದ್ದವು. ೯ ತಿಂಗಳೊಳಗೆ ಅವುಗಳನ್ನು ೩೦ ರ ಸಂಖ್ಯೆಗೆ ಇಳಿಸಲಾಗಿದೆ.

ವಾರದ ಸಿಂಹಾವಲೋಕನ

'ಕರ್ನಾಟಕವನ್ನು ಅಲಕ್ಷಿಸಿಲ್ಲ'

ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವಿಲ್ಲದ್ದರಿಂದ ಅದು ಎಲ್ಲದರಲ್ಲಿಯೂ ಹಿಂದೆ ಬಿದ್ದಿದೆ. ಸರಕಾರವೂ ಕರ್ನಾಟಕದ ಅಭಿವೃದ್ಧಿಗಾಗಿ ಈ ವರೆಗೆ ಅಷ್ಟೊಂದು ಪ್ರಯತ್ನಿಸಿಲ್ಲ. ಇದರ ಅರಿವು ಇದ್ದುದರಿಂದಲೆ ಪ್ರಾಂತದ ಮುಖ್ಯ ಮಂತ್ರಿಗಳಾದ ಮಾನ್ಯ ಖೇರರು 'ಕರ್ನಾಟಕದ ಋಣವನ್ನು ಇನ್ನೂ ತೀರಿಸಬೇಕಾಗಿದೆ' ಎಂದು ಘಂಟಾಘೋಷವಾಗಿ ಹೇಳಿದ್ದಾರೆ. ಆದರೆ ಈ ಋಣವನ್ನು ತೀರಿಸುವ ಯೋಜನೆಗಳು ಮಾತ್ರ ಒತ್ತರದಿಂದ ಮುಂದೆ ಬರಲೊಲ್ಲವೆಂದು ವಿಷಾದಿಸಬೇಕಾಗಿದೆ. ಕರ್ನಾಟಕವನ್ನು ಅಲಕ್ಷಿಸಿಲ್ಲ. ಉಳಿದ ಭಾಗಗಳಿಗೆ ಕೊಡುತ್ತಿರುವಷ್ಟು ಲಕ್ಷ್ಯವನ್ನೆ ಕರ್ನಾಟಕಕ್ಕೂ ಕೊಡಲಾಗುತ್ತಿದೆ ಎಂದು ಇದೀಗ ಮಂತ್ರಿಗಳು ಹೇಳಹತ್ತಿರುವರು. ಆದರೆ ಬಾಯಿಂದ ಹೀಗೆ ಹೇಳುವುದಕ್ಕಿಂತ ಕೃತಿಯಿಂದ ಇದನ್ನು ಸಿದ್ಧಮಾಡಿ ತೋರಿಸಿದರೆ ಮಂತ್ರಿಮಂಡಳವು ಕನ್ನಡಿಗರ ಅಭಿನಂದನೆಗೆ ಪಾತ್ರವಾಗುವದು. ಧಾರವಾಡ ಹುಬ್ಬಳ್ಳಿ ನೀರಿನ ಯೋಜನೆಯ ಅಡಿಗಲ್ಲು ಕೂಡಿಸುವ ಸಮಾರಂಭವೊಂದು ಮೊನ್ನೆ ನಡೆದು ಕರ್ನಾಟಕದ ಯೋಜನೆಗಳಿಗೆ ಮುಹೂರ್ತ ಮಾಡಿದಂತಾಗಿದೆ. ದಡ್ಡಿ ನೀರಾವರಿ ಯೋಜನೆಯು ಪರಿಶೀಲನೆಯಾಗಿ ನೀರಲ್ಲಿ ಮುಳುಗುವ ಹೊಲದೊಡೆಯರಿಗೆ ನೋಟೀಸು ಕೂಡ ಹೊರಟಿದ್ದರೂ ಮತ್ತೆ ಅದರ ಪರಿಶೀಲನೆಯೆಂದರೆ ಕಾಲದ ಮತ್ತು ಹಣದ ಅಪವ್ಯಯವಲ್ಲವೇ? ಜೋಗ ವಿದ್ಯುಚ್ಛಕ್ತಿಯ ಪರಿಶೀಲನೆಯೂ ಎರಡುಸಲ ಆಯಿತು. ಆ ಕಾಲಕ್ಕೆ ಉದ್ಯೋಗಗಳಿಗೆ ಆ ಶಕ್ತಿಯನ್ನುಪಯೋಗಿಸುವ ಅಂಶದ ವಿಚಾರ ಮಾಡಲಿಲ್ಲವಂತೆ. ಅದರಿಂದ ಯೋಜನೆ ಹಾನಿಕರವೆಂದು ಕಂಡುಬಂದಿತಂತೆ. ಈಗ ಮತ್ತೆ ಆ ದೃಷ್ಟಿಯಿಂದ ಪರಿಶೀಲನೆ ನಡೆಯಬೇಕಂತೆ! ಈ ಬಗೆಯ ಅಪೂರ್ಣ ಪರಿಶೀಲನೆಗೆ ಹೊಣೆಗಾರರಾರೋ ತಿಳಿಯದು? ಇವಲ್ಲದೆ ಸಣ್ಣ ಪುಟ್ಟ ಇನ್ನೂ ಅನೇಕ ಯೋಜನೆಗಳು ಸರಕಾರದ ಕಪಾಟಿನಲ್ಲಿಯೇ ಉಳಿದಿವೆ. ಈ ಪರಿಸ್ಥಿತಿಯಲ್ಲಿ ಮಂತ್ರಿಗಳು ಕರ್ನಾಟಕವನ್ನು ಅಲಕ್ಷಿಸಲಾಗಿಲ್ಲವೆಂಬುದನ್ನು ಸಿದ್ಧಮಾಡಿ ಕೊಡಲು ಆವ್ಹಾನಿಸುವದಕ್ಕಿಂತ ತಾವೇ ಅಂತರಂಗ ಪರೀಕ್ಷೆ ಮಾಡಿಕೊಂಡು ಕಾರ್ಯಪ್ರವೃತ್ತರಾಗಬೇಕು.

ಆಹಾರ ಧಾನ್ಯಗಳ ಉತ್ಪಾದನೆ

ಹಿಂದುಸ್ತಾನ ವಿಶಾಲ ದೇಶವಾಗಿದ್ದು ಆಹಾರ ಪದಾರ್ಥಗಳಲ್ಲಿ ಸ್ವಾವಲಂಬಿಯಾಗಲು ಬೇಕಾದಷ್ಟು ಅನುಕೂಲತೆಗಳಿದ್ದರೂ ಈ ವರೆಗೆ ಅದು ಪರದೇಶಗಳ ಮೋರೆಯನ್ನು ನೋಡುತ್ತ ಕೂಡ್ರಬೇಕಾಗಿದೆ. ಈ ಪರಿಸ್ಥಿತಿಯನ್ನು ಹೋಗಲಾಡಿಸದಿದ್ದರೆ ಹಿಂದುಸ್ತಾನದ ವಿನಿಮಯ ಹಣವೆಲ್ಲ ಆಹಾರಪದಾರ್ಥಗಳಿಗಾಗಿಯೇ ವೆಚ್ಚವಾಗಿ ಉಳಿದ ಯಂತ್ರೋಪಕರಣಗಳನ್ನು ತರಿಸಲು ಹಣವೇ ಉಳಿಯಲಿಕ್ಕಿಲ್ಲ. ಇದನ್ನರಿತೇ ಆಹಾರ ಧೋರಣ ಸಮಿತಿಯವರು ಒಂದು ಕೋಟಿ ಟನ್ ಆಹಾರ ಪದಾರ್ಥಗಳ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಸೂಚಿಸಿರುವರು. ಆಹಾರ ಧಾನ್ಯಗಳ ಬೆಳೆ ಹೆಚ್ಚಿಸುವ ಹೊಣೆಗಾರಿಕೆ ಹೆಚ್ಚಾಗಿ ಪ್ರಾಂತಿಕ ಸರಕಾರಗಳದೇ ಆಗಿದ್ದರೂ ಕೇಂದ್ರ ಸಮಿತಿಯೊಂದನ್ನು ಈ ಸಂಬಂಧದಲ್ಲಿ ನೇಮಿಸುವದು ಅವಶ್ಯವಾಗಿದೆ. ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಬೇಕಾದರೆ ನದಿಗಳಿಗೆ ಒಡ್ಡುಗಳನ್ನು ಹಾಕಿ ನೀರಾವರಿ ಯೋಜನೆ ಕೈಕೊಳ್ಳುವದು ಅವಶ್ಯ. ಮಳೆಯ ನೀರನ್ನೇ ಅವಲಂಬಿಸಿ ಹಿಂದುಸ್ತಾನ ಒಕ್ಕಲತನದಲ್ಲಿ ಪ್ರಗತಿಯನ್ನು ಸಾಧಿಸಲಾರದು. ಇದಲ್ಲದೆ ಸುಮಾರು ಆರು ಸಾವಿರ 'ಟ್ಯೂಬ' ಬಾವಿಗಳನ್ನು ತೆಗೆಯಿಸಬೇಕೆಂದು ಒಕ್ಕಲತನ ಶಾಖೆಯವರು ನಿರ್ಣಯಿಸಿದ್ದು ಉಚಿತವಾಗಿದೆ. ಪಡಭೂಮಿಗಳನ್ನು ಸಾಗುಮಾಡುವದನ್ನು ಸಮಿತಿಯವರು ಸೂಚಿಸಿದ್ದಾರೆ. ಅದೇ ರೀತಿ ಗೊಬ್ಬರ, ಒಳ್ಳೇ ಬೀಜ, ಒಕ್ಕಲತನದ ಉಪಕರಣ ಬೇಕು. ರೈತ ಒಡೆಯರಲ್ಲಿ ಮತ್ತೈಕ್ಯ ಮತ್ತು ಸಹಕಾರಪ್ರವೃತ್ತಿ ಅವಶ್ಯ. ಇದಿಲ್ಲದಿದ್ದರೆ ಉತ್ಪಾದನೆ ಹೆಚ್ಚಲಾರದು. ಹಿಂದುಸ್ತಾನ ಮತ್ತೆ ಆಹಾರಪದಾರ್ಥಗಳಿಗಾಗಿ ಪರದೇಶಗಳನ್ನೇ ಅವಲಂಬಿಸುವ ದುರ್ಧರ ಪ್ರಸಂಗ ಬರುವದು.

ಬಿರ್ಲಾರ ಯೋಜನೆ

ಹಿಂದುಸ್ತಾನದ ಪ್ರಸಿದ್ಧ ಉದ್ದಿಮೆಗಾರರಾದ ಶೇಟ ಘನಶ್ಯಾಮದಾಸ ಬಿರ್ಲಾ ಇವರು ದೇಶದ ಉದ್ಯೋಗಾಭಿವೃದ್ಧಿಯ ಪಂಚವಾರ್ಷಿಕ ಯೋಜನೆಯೊಂದನ್ನು ಸಿದ್ಧಪಡಿಸಿ ಪುಸ್ತಕ ರೂಪದಿಂದ ಪ್ರಸಿದ್ಧಿಸಿದ್ದಾರೆ. ೧೨೩೦ ಕೋಟಿ ರೂಪಾಯಿ ವೆಚ್ಚ ಮಾಡಿ ಈ ಯೋಜನೆಯನ್ನು ಐದು ವರ್ಷಗಳಲ್ಲಿ ಕಾರ್ಯಕಾರಿ ಮಾಡಿದರೆ ಐದನೆ ವರ್ಷದ ಕೊನೆಗೆ ಹಿಂದುಸ್ತಾನದ ವಾರ್ಷಿಕ ಉತ್ಪನ್ನವು ೧೧೦೦ ಕೋಟಿ ರೂಪಾಯಿಗಳಷ್ಟು ಹೆಚ್ಚಾಗುವದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕಳೆದ ೧೯೪೩–೪೬ ರ ಮೂರು ವರುಷಗಳ ಅವಧಿಯಲ್ಲಿ ಹಿಂದುಸ್ತಾನ ಸರಕಾರ ಒಟ್ಟು ೧೯೫೦ ಕೋಟಿ ರೂಪಾಯಿ ಬಂಡವಲನ್ನು ಹಾಕಿದ್ದನ್ನು ನೋಡಿದರೆ ಬಿರ್ಲಾರವರು ಸೂಚಿಸಿದಷ್ಟು ಬಂಡವಲು ಹಾಕಲು ಸರಕಾರಕ್ಕೆ ಅಸಾಧ್ಯವಾಗಲಾರದು. ಈ ಯೋಜನೆಯಲ್ಲಿ ಸರಕಾರವು ೧೦೦ ಕ್ಕೆ ೩೩ ರಷ್ಟು ಮತ್ತು ಉಳಿದದ್ದನ್ನು ಖಾಸಗಿ ಬಂಡವಲದಾರರು ಹಾಕಬೇಕೆಂದು ಬಿರ್ಲಾರವರು ಸೂಚಿಸಿದ್ದಾರೆ. ಈ ಯೋಜನೆಯನ್ವಯ ಔದ್ಯೋಗಿಕ ಅಭಿವೃದ್ಧಿಯನ್ನು ಸಾಧಿಸಬೇಕಾಗಿದ್ದರೆ ಔದ್ಯೋಗಿಕ ಶಾಂತಿ ಅತ್ಯವಶ್ಯವಾಗಿದೆಯೆಂದೂ ಅವರು ಸೂಚಿಸಿದ್ದಾರೆ. ಮೂರು ಪಾಳಿಗಳನ್ನು ಮಾಡಿ ಉತ್ಪಾದನೆಯನ್ನು ಹೆಚ್ಚಿಸಬೇಕು. ರಾಷ್ಟ್ರೀಕರಣದಲ್ಲಿ ಕೇವಲ ಸರಕಾರದ್ದೇ ಬಂಡವಲು ಇರುವದರಿಂದ ಖಾಸಗಿ ಉದ್ದಿಮೆದಾರರಿಗೆ ಅದರಲ್ಲಿ ಯಾವದೆ ಬಗೆಯ ಹಿತಸಂಬಂಧವುಳಿಯುವದಿಲ್ಲ. ಹೀಗೆ ಮಾಡದೆ ಅವರ ಹಿತಸಂಬಂಧಗಳೂ ಉಳಿಯುವಂತೆ ನೋಡಿಕೊಂಡದ್ದಾದರೆ ಉತ್ಪಾದನೆ ಹೆಚ್ಚಲು ಅವಕಾಶವುಂಟಾಗುವದು. ಕೂಲಿಕಾರರು ತಮ್ಮದೆಂದು ಆಯಾ ಉದ್ಯೋಗಗಳಲ್ಲಿ ನಿರತರಾದರೆ ಧ್ಯೇಯ ತಂತಾನೇ ಸಾಧಿಸಿದಂತಾಗುವದು.

ಸಕಾಲಿಕ ಎಚ್ಚರಿಕೆ

ನೂರೈವತ್ತು ವರುಷಗಳ ದಾಸ್ಯದಿಂದ ಭಾರತವಿಂದು ಸ್ವತಂತ್ರವಾಗಿದೆ. ಸ್ವಾತಂತ್ರ್ಯದ ನಂತರದ ಸಮಸ್ಯೆಗಳನ್ನು ಇದೀಗ ಬಿಡಿಸಬೇಕಾಗಿದೆ. ಬ್ರಿಟಿಶರು ಇಲ್ಲಿಂದ ಕಾಲ್ದೆಗೆಯುವಾಗ ಅನೇಕ ಸಮಸ್ಯೆಗಳನ್ನುಂಟುಮಾಡಿ ಹೋಗಿರುವರು. ಪಾಕಿಸ್ತಾನ, ಸಂಸ್ಥಾನ ಮೊದಲಾದ ಜಟಿಲವಾದ ಸಮಸ್ಯೆಗಳನ್ನು ಭಾರತ ಸರಕಾರ ಈಗ ಬಿಡಿಸಹತ್ತಿದೆ. ಆದ ಕಾರಣ ಜನಸಾಮಾನ್ಯರ ದಾರಿದ್ರ್ಯ ನಿವಾರಣೆಯತ್ತ, ಅದರ ಸಂಪತ್ತಿನ ಅಭಿವೃದ್ಧಿಯತ್ತ, ಗಮನ ಕೊಡಲು ಅದಕ್ಕೆ ಸಾಕಷ್ಟು ಅವಕಾಶ ಸಿಕ್ಕದಂತಾಗಿದೆ. ರಾಮರಾಜ್ಯ ಬಂದರೂ ರಾಗೀ ಬೀಸುವದು ತಪ್ಪಲಿಲ್ಲ ಎಂಬ ಜನತೆಯ ಕೂಗು ಇನ್ನೂ ಇದೆ. ಆದರೆ ಈ ಪರಿಸ್ಥಿತಿ ಇನ್ನು ಬಹಳ ದಿನಗಳ ವರೆಗೆ ಹಾಗೆಯೇ ಉಳಿದರೆ ಸ್ವರಾಜ್ಯ ಸಿಕ್ಕಿದೆಯೇ ಹಿಂದುಸ್ತಾನಕ್ಕೆ, ಎಂಬ ಸಂಶಯ ಕೂಡ ಜನತೆಯಲ್ಲಿ ಬೆಳೆಯಬಹುದು. ಇದನ್ನು ನೆನೆದೇ ಆಚಾರ್ಯ ವಿನೋಬಾ ಭಾವೆಯವರು ಜನತೆಯ ದಾರಿದ್ರ್ಯ ನಿವಾರಣೆಯತ್ತ ಸರಕಾರದ ಗಮನವನ್ನು ಎಳೆದಿದ್ದಾರೆ. ಸರಕಾರ ಇನ್ನು ಮುಂದೆ ದೇಶದ ಸಾಂಪತ್ತಿಕ ಪ್ರಗತಿಯತ್ತ ಗಮನಿಸಬೇಕು. ಹಿಂದುಸ್ತಾನದಲ್ಲಿ ಬೇಕಾದಷ್ಟು ಸಾಧನ ಸಾಮಗ್ರಿಗಳಿವೆ; ಜನಬಲವೂ ಬೇಕಾದಷ್ಟು ಇದೆ. ಹಣಕ್ಕೂ ಕೊರತೆಯಿಲ್ಲ. ಆದರೆ ಈ ವರೆಗೆ ಪರಕೀಯ ಆಡಳಿತದಲ್ಲಿ ಇತ್ತ ಗಮನಿಸುವವರೇ ಇಲ್ಲದ್ದರಿಂದ ಇಷ್ಟೆಲ್ಲ ಸಾಧನ ಸಂಪತ್ತು ನಿರರ್ಥಕವಾಯಿತು. ಆದರೆ ಈಗ ಸರಕಾರವು ಈಕಡೆಗೆ ಲಕ್ಷ್ಯವೀಯಹತ್ತಿದ್ದರಿಂದ ಬೇಗ ಪರಿಸ್ಥಿತಿ ಸುಧಾರಿಸಬಹುದೆಂದು ಆಶಿಸಲಾಗಿದೆ. ಹಿಂದುಸ್ತಾನ ಸರಕಾರದ ಜೊತೆಗೆ ಪ್ರಾಂತೀಯ ಸರಕಾರಗಳೂ ಈ ದಿಶೆಯಲ್ಲಿ ಜೋರಿನಿಂದ ಕೆಲಸ ಮಾಡುವದು ಕ್ರಮಪ್ರಾಪ್ತವಾಗಿದೆ.

ಮಾಧ್ಯಮಿಕ ಶಿಕ್ಷಣ

ಮೊನ್ನೆ ನಾನು ವಿಶ್ವವಿದ್ಯಾಲಯದ ಶಿಕ್ಷಣ ಮಾಧ್ಯಮದ ಬಗ್ಗೆ ಪ್ರಗತಿಪರ ನಿರ್ಣಯವನ್ನು ತೆಗೆದುಕೊಂಡದ್ದಕ್ಕಾಗಿ ಡಾ. ತಾರಾಚಂದ ಸಮಿತಿಗೆ ಧನ್ಯವಾದಗಳನ್ನು ಅರ್ಪಿಸಿದೆ. ಮಾಧ್ಯಮಿಕ ಶಿಕ್ಷಣದ ಮೇಲೂ ಹಾಗೇ ಅವರ ಸಮಿತಿಗೆ ಧನ್ಯವಾದಗಳನ್ನು ಅರ್ಪಿಸಲು ಸಾಧ್ಯವಾಗಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಆದರೆ ಆ. ಪ್ರ. ಯುವರು ವರದಿ ಮಾಡಿದ ಪ್ರಕಾರ ಆ ಗೊತ್ತುವಳಿಗಳು ಅತ್ಯಂತ ನಿರಾಶಾದಾಯಕವಾಗಿವೆ ಎಂದು ಹೇಳಬೇಕಾಗಿ ಬಂದುದಕ್ಕೆ ಬಹಳ ವಿಷಾದಪಡುತ್ತೇನೆ. ಗೊತ್ತುವಳಿಗಳ ಕೆಲವು ಮುದ್ದೆಗಳನ್ನು ಮೊದಲು ಕೊಡುತ್ತೇನೆ:

(೧) ಡಿಗ್ರಿ ತರಗತಿಗೆ ಸೇರುವ ಮೊದಲು ವಿದ್ಯಾರ್ಥಿಯು ೧೨ ವರ್ಷಗಳ ವಿದ್ಯಾಭ್ಯಾಸವನ್ನು ಮುಗಿಸಿರಬೇಕು.

(೨) ಮೊದಲು ಪ್ರಥಮದಶೆಯಲ್ಲಿ ಮೂಲ ಶಿಕ್ಷಣ ವರ್ಗಗಳಲ್ಲಿ ೫ ವರ್ಷಗಳ ವರೆಗೆ ಒತ್ತಾಯದ ಶಿಕ್ಷಣ ದೊರೆಯಬೇಕು. ಬಳಿಕ ೩ ವರ್ಷಗಳಲ್ಲಿ ಮೇಲ್ತರಗತಿಯ ಮೂಲ ಶಿಕ್ಷಣ ಅಥವಾ ಪೂರ್ವ ಮಾಧ್ಯಮಿಕ ವರ್ಗಗಳಲ್ಲಿ ವಿದ್ಯಾರ್ಥಿಯು ಉತ್ತೀರ್ಣನಾಗತಕ್ಕದ್ದು. ಅದರ ಮೇಲೆ ೪ ವರ್ಷಗಳ ಅವಧಿಯಲ್ಲಿ ಆತನು ಮಾಧ್ಯಮಿಕ ಶಿಕ್ಷಣವನ್ನು ಪಡೆಯುವನು. ಇದು ಮಾಧ್ಯಮಿಕ ಶಿಕ್ಷಣದ ಕೆಳಮೇಲು ಮೆಟ್ಟಲುಗಳ ಸ್ಥೂಲ ವಿಭಜನೆ.

(೩) ಪ್ರಾಥಮಿಕ ಮೂಲ ಶಿಕ್ಷಣ ಮುಗಿದ ಕೂಡಲೆ ಒತ್ತಾಯವಾಗಿ ರಾಷ್ಟ್ರಭಾಷೆಯನ್ನು ೩ ವರ್ಷಗಳಕಾಲ ಕಲಿಸಬೇಕು. ಅನಂತರ ಅದನ್ನು ಐಚ್ಛಿಕವೆಂದು ಪರಿಗಣಿಸಬಹುದು.

(೪) ೨ನೆಯ ಮೆಟ್ಟಿಲಲ್ಲಿ (ಸೀನಿಯರ್ ಬೇಸಿಕ್‌ಕೋರ್ಸ್) ಪೂರ್ವಮಾಧ್ಯಮಿಕಕ್ಕೆ ಸೇರುವವರನ್ನು ಬಿಟ್ಟು ಉಳಿದವರಿಗೆ ಇಂಗ್ಲೀಷು ಐಚ್ಛಿಕವಾಗಬೇಕು.

(೫) ವಿಶ್ವ ವಿದ್ಯಾನಿಲಯಗಳಲ್ಲಿ ಇಂಗ್ಲೀಷು ಶಿಕ್ಷಣ ಮಾಧ್ಯಮವಾಗಿರುವ ವರೆಗೆ ಮಾಧ್ಯಮಿಕ ಮಟ್ಟದಲ್ಲಿ ಅದು ಒತ್ತಾಯವಾಗಿ ಕಲಿಸಲ್ಪಡಬೇಕು.

(೬) ವಿಶ್ವವಿದ್ಯಾಲಯಗಳಲ್ಲಿ ಇಂಗ್ಲೀಷು ಮಾಧ್ಯಮವು ಕೊನೆಗೊಂಡ ಮೇಲೆ ಮಾಧ್ಯಮಿಕ ಮಟ್ಟದಲ್ಲಿ ರಾಷ್ಟ್ರಭಾಷೆಯನ್ನು ಒತ್ತಾಯವಾಗಿ ಕಲಿಸಬೇಕು.

ಮೊದಲನೆಯ ಮುದ್ದೆಯ ಮೇಲೆ ನಾನು ಹೇಳಬೇಕಾದುದೇನೂ ಇಲ್ಲ. ಉಳಿದ ಮುದ್ದೆಗಳನ್ನು ತೆಗೆದುಕೊಂಡರೆ ಈ ಸಮಿತಿಯು ಮತ್ತೊಂದು ಸಮಿತಿಯ ನಿರ್ಣಯಗಳನ್ನು ಏನೂ ತಿಳಿದುಕೊಳ್ಳದೆ ತನ್ನ ಕೆಲಸ ಸಾಧಿಸಿತೆಂದು ತೋರುತ್ತವೆ. ಏಕೆಂದರೆ ಅದು ಈಗಿನಿಂದ ಐದು ವರ್ಷಗಳ ನಂತರ ವಿಶ್ವ ವಿದ್ಯಾಲಯಗಳಲ್ಲಿ ಪ್ರಾದೇಶಿಕ ಇಲ್ಲವೆ ಸರಕಾರೀ ಭಾಷೆಗಳಲ್ಲಿ ಶಿಕ್ಷಣ ಕೊಡಲಾಗುವುದೆಂಬುದನ್ನು ತಿಳಿದಿದ್ದರೆ, ಪೂರ್ವಮಾಧ್ಯಮಿಕ ಇಲ್ಲವೆ ಮಾಧ್ಯಮಿಕ ವರ್ಗದ ವಿದ್ಯಾರ್ಥಿಯೂ ವಿಶ್ವ ವಿದ್ಯಾಲಯದ ಬೋಧಕ ಭಾಷೆ ಭಾರತೀಯವಾದ ಹೊರತೂ ಅಲ್ಲಿಗೆ ಹೋಗಲಾರ ಎಂಬುದನ್ನು ತಿಳಿದುಕೊಳ್ಳಬೇಕಾಗಿತ್ತು. ಸಮಿತಿಯ ಗೊತ್ತುವಳಿಗಳ ಮೇಲೆ ನಾನು ಟೀಕಿಸಿದಂತೆ ಅದರ ಗೊತ್ತುವಳಿಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಕಾಲೇಜಿನಲ್ಲಿ ಮುಂದಿನ ವರ್ಷದ ನಡುಗಾಲದಲ್ಲಿ ಪ್ರಥಮ ವರ್ಗವನ್ನು ಭಾರತೀಯ ಬೋಧಕ ಭಾಷೆಯಿಂದಲೇ ಪ್ರಾರಂಭಿಸಬೇಕಾಗುವದು. ಏಕೆಂದರೆ ಕೆಲವು ಡಿಗ್ರಿ ವರ್ಗಗಳು ೫ ಅಥವಾ ಹೆಚ್ಚು ವರ್ಷಗಳ ಓದಿನಿಂದ ಮುಗಿಯುವಂಥವಾಗಿರುತ್ತವೆ.

ಮಾಧ್ಯಮಿಕ ಶಿಕ್ಷಣ ಸಮಿತಿಯ ಗೊತ್ತುವಳಿಗಳ ಅವಲೋಕನದಿಂದ ಉಂಟಾದ ಮತ್ತೊಂದು ತಿಳುವಳಿಕೆ ಹೀಗಿದೆ: ಕಳೆದ ಹಲವು ವರ್ಷಗಳಿಂದ ಅನುಸರಿಸುತ್ತ ಬಂದಿರುವ ಪೂರ್ವ ವಿಶ್ವವಿದ್ಯಾಲಯ ಶಿಕ್ಷಣಪದ್ಧತಿಯಲ್ಲಿಯ ಅವೈಜ್ಞಾನಿಕವಾದ ಕೊಂಡಿಯನ್ನು ಕಳೆದೊಗೆಯಲು ಸಮಿತಿಯು ಸಮರ್ಥವಾಗಲಿಲ್ಲ. ಕೊಂಡಿಯನ್ನು ತೆಗೆದುಹಾಕುವುದೆಂದರೆ ಹೊಸ ವ್ಯವಸ್ಥೆ ಮಾಡುವುದು, ಮೂಲಭೂತ ಬದಲಾವಣೆಗಳನ್ನು ತರುವುದು; ಆದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಸಂಘಟಕರಿಗೆ ಅಂಥ ಅಪೇಕ್ಷೆ ಇದ್ದಂತೆ ತೋರುವುದಿಲ್ಲ. ಇದು ಖೇದಕರ. ಪಾಟ್ನಾದಲ್ಲಿ ಸೇರಿದ ಮೂಲ ಶಿಕ್ಷಣ ಪರಿಷತ್ತಿನಲ್ಲಿ ನಿರ್ದೇಶಿಸಿದಂತೆ ಮೂಲ ಶಿಕ್ಷಣಕ್ಕಾಗಿ ಇರುವ ೭ ವರ್ಷಗಳನ್ನು ಕಡಿಮೆ ಮಾಡಲು ಯಾವ ಪ್ರಯತ್ನವನ್ನು ಮಾಡಿದರೂ ಅದು ಶಿಕ್ಷಣಶಾಸ್ತ್ರೀಯವಾಗಿ ಅಸಮಂಜಸವೆನಿಸುತ್ತದೆ ಮತ್ತು ಆ ಕಾರಣದಿಂದ ಅಂಥ ಪ್ರಯತ್ನವನ್ನು ಪ್ರತಿಭಟಿಸಬೇಕು. ಅಲ್ಪಕಾಲದಲ್ಲಿ ಚಿರಸ್ಥಾಯಿಯಾದ ಅಕ್ಷರ ಜ್ಞಾನವನ್ನು ದೊರಕಿಸುವುದು ಸಾಧ್ಯವಿಲ್ಲ ಎಂಬ ವಿಷಯವನ್ನು ಬಿಟ್ಟರೂ ಮಗುವಿಗೆ ೧೪ ವರ್ಷ ತುಂಬುವುದರೊಳಗೆ ಸಾಮಾಜಿಕ ಮತ್ತು ನಾಗರಿಕ ವಿದ್ಯಾಭ್ಯಾಸವು ಫಲಿಸುವಂತೆ ಮಾಡಲು ಸಾಧ್ಯವಿಲ್ಲ.

ಪಾಟ್ನಾ ಗೊತ್ತುವಳಿಯು ಅನೇಕ ವರ್ಷಗಳ ಅನುಭವ ಮತ್ತು ಎಚ್ಚರಿಕೆಯಿಂದ ಎಸಗಿದ ಪರಿಶೀಲನ ಇವುಗಳ ಫಲವಾಗಿದೆ. ನಾಲ್ಕನೆಯ ಇಲ್ಲವೆ ಐದನೆಯ ವರ್ಷದ ನಂತರ ಮೂಲ ಶಿಕ್ಷಣವನ್ನು ಕವಲುದಾರಿಗೆ ಹಚ್ಚಲು ತಮ್ಮ ಮಕ್ಕಳು ಇಂಗ್ಲೀಷು ಶಬ್ದಗಳನ್ನೂ ವಾಕ್ಯಗಳನ್ನೂ ಉರುಹೊಡೆಯಬೇಕೆಂದು ಅಪೇಕ್ಷಿಸುವ ಮಧ್ಯಮ ವರ್ಗದವರ ಅನವಶ್ಯಕವಾದ ಅದೂರದರ್ಶಿತ್ವ ಮತ್ತು ತ್ವರೆ ಇವೇ ಕಾರಣ. ಅದು ಅವೈಜ್ಞಾನಿಕವಷ್ಟೇ ಅಲ್ಲ, ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೂ ಹಿತಕರವಲ್ಲ ಮತ್ತು ಬಹುಸಂಖ್ಯಾಕರಿಗಂತೂ ಅದು ಹಾನಿಕರವೆನಿಸುವುದು.

ಕವಲೊಡೆಸುವ ಗೊತ್ತುವಳಿಯಲ್ಲಿ ಮತ್ತೂ ಒಂದು ದೋಷವಿದೆ. ಐದು ವರ್ಷಗಳ ಓದು ಮುಗಿದೊಡನೆಯೇ ಮಗುವು ತಾನು ಮೂಲ ಶಿಕ್ಷಣದ ಉತ್ತರಾರ್ಧವನ್ನು (ಎರಡನೆಯ ಹಂತವನ್ನು) ಮುಗಿಸಿದ ಕೂಡಲೆ ಶಾಲೆ ಬಿಡಬೇಕೋ ಅಥವಾ ತಾನು ಮಾಧ್ಯಮಿಕ ಶಿಕ್ಷಣವನ್ನು ಪಡೆಯಬೇಕೋ ಎಂಬುದನ್ನು ನಿರ್ಣಯಿಸಬೇಕಾಗಿ ಬರುತ್ತದೆ. ಮೊದಲಿನ ಕವಲನ್ನು ಹಿಡಿಯುವುದಾದರೆ ಇಂಗ್ಲೀಷು ಐಚ್ಛಿಕವಾಗುತ್ತದೆ, ೨ನೆಯದನ್ನು ಹಿಡಿಯುವುದಾದರೆ ಇಂಗ್ಲೀಷು ಒತ್ತಾಯದ ಭಾಷೆಯಾಗುತ್ತದೆ. ಪ್ರಾಥಮಿಕ ವಿದ್ಯಾಭ್ಯಾಸ ಮುಗಿದ ವಯಸ್ಸಿನಲ್ಲಿ ಬಹಳ ಹುಡುಗರು ತಾವು ಮಾಧ್ಯಮಿಕ ಶಿಕ್ಷಣ ತೆಗೆದುಕೊಳ್ಳಬೇಕೋ ಬೇಡವೋ ಎಂಬುದನ್ನು ನಿರ್ಣಯಿಸಲು ಅಸಮರ್ಥರಾಗಿರುವರು, ಅನೇಕರಿಗೆ ಸಾಧ್ಯವಾದರೆ ತೆಗೆದುಕೊಳ್ಳಬೇಕೆಂಬ ಆಸೆ ಇರುವುದು. ಈ ಕಾರಣಗಳಿಂದ ಇಂಗ್ಲೀಷನ್ನು ಬಹುಪಕ್ಷ ಒತ್ತಾಯವಾಗಿ ಕಲಿವ ಪ್ರಸಂಗವು ಹಲವರಿಗೆ ಅನಿವಾರ್ಯವಾಗಿ ಪರಿಣಮಿಸುತ್ತದೆ. ಕವಲೊಡೆಸಿ ಐಚ್ಛಿಕವಿಟ್ಟಂತೆ ತೋರಿಸುವುದರ ಬದಲು ಐದು ವರ್ಷಗಳ ನಂತರ ಇಂಗ್ಲೀಷು ಒತ್ತಾಯದ ಭಾಷೆಯಾಗುತ್ತದೆ ಎಂದಿದ್ದರೆ ಎಷ್ಟೋ ಪಾಲು ಸರಳವಾಗುತ್ತಿತ್ತು. ಎಲ್ಲಾದರೂ ಒಂದೆಡೆ ಒಂದು ಜಾತಿಯನ್ನು ಸೃಷ್ಟಿಸಿದ ಹೊರತೂ ನಮಗೆ ಸಮಾಧಾನವಿಲ್ಲ ಎಂಬಂತೆ ತೋರುತ್ತದೆ. ಐದು ವರ್ಷಗಳ ನಂತರ ಇಂಗ್ಲೀಷು ಬಲ್ಲ ವಿದ್ಯಾರ್ಥಿಗಳು ಇಂಗ್ಲೀಷು ಬರದವರು ಎಂದು ಎರಡು ಜಾತಿಗಳಾಗಿ ವಿದ್ಯಾರ್ಥಿಗಳನ್ನು ವಿಂಗಡಿಸಬೇಕಾಗುತ್ತದೆ.

ಗೊಂದಲ ಇಲ್ಲಿಗೇ ಮುಗಿಯುವುದಿಲ್ಲ. ೩ನೆಯ ಮುದ್ದೆ ಮೂಲ ಶಿಕ್ಷಣದ ಉತ್ತರಾರ್ಧದ ನಂತರ ಪೂರ್ವ ಮಾಧ್ಯಮಿಕ ತರಗತಿಗಳಲ್ಲಿ ಉದ್ದಕ್ಕೂ ರಾಷ್ಟ್ರ ಭಾಷೆಯನ್ನು ಒತ್ತಾಯವಾಗಿ ಮಾಡಿರುವುದು. ಅಂದರೆ ಸುಮಾರು ೩ ಇಲ್ಲವೆ ಹೆಚ್ಚು ವರ್ಷಗಳ ವರೆಗೆ ಅದು ಒತ್ತಾಯವಾಗಿ ಇರುವಂತಾಯಿತು. ಆದರೆ ಅನಂತರ ಅದು ಐಚ್ಛಿಕ ವಿಷಯವಾಗಿ ಬಿಡುತ್ತದೆ. ಅಂದರೆ ಮಾಧ್ಯಮಿಕದ ೪ ವರ್ಷಗಳ ಶಿಕ್ಷಣದಲ್ಲಿ ಹಿಂದಿನ ೩ ವರ್ಷಗಳಲ್ಲಿ ಕಲಿತ ಅಲ್ಪಸ್ವಲ್ಪ ಅಂಶವನ್ನು ಮರೆತು ಬಿಡಲು ಓದಾಳುಗಳಿಗೆ ಕಾಲವನ್ನು ಒದಗಿಸಿಕೊಟ್ಟಂತಾಗುತ್ತದೆ. ಭಾರತದ ರಾಷ್ಟ್ರಭಾಷೆಯ ಅಭ್ಯಾಸವು ಇಂಥ ದುರವಸ್ಥೆಗೆ ಬಂದು ಮುಟ್ಟುತ್ತದೆ!

ಸಧ್ಯದ ಅಶಾಸ್ತ್ರೀಯ ಪದ್ಧತಿಯಲ್ಲಿ ಉತ್ತೀರ್ಣರಾದ ನಮಗೆ ಈ ಪದ್ಧತಿಯಿಂದ ಒದಗುವ ಕಾಲ ಶಕ್ತಿಗಳ ಪ್ರಚಂಡ ಅಪವ್ಯಯ ಗೊತ್ತಿರಬೇಕು. 'ಮರೆಯಲೆಂದೇ ಕಲಿಯುವ' ಶಿಕ್ಷಣ ಪದ್ಧತಿಯೆಂದು ಇದನ್ನು ಕರೆದರೆ ತಪ್ಪಾಗಲಾರದು. ವಿದ್ಯಾರ್ಥಿಗಳಿಗೆ ಐದು ವರ್ಷಗಳ ವರೆಗೆ ಕಲಿಸಲಾಗುತ್ತದೆ; ಆ ಮೇಲೆ ಶಿಕ್ಷಣ ಕವಲೊಡೆಯುವದರಿಂದ ಅವರಲ್ಲನೇಕರಿಗೆ ಕಲಿತದ್ದನ್ನು ಮರೆಯಲು ಅವಕಾಶ ದೊರೆಯುತ್ತದೆ. ಅವರು ಮೆಲ್ಲಮೆಲ್ಲನೆ ನಿರಕ್ಷರತೆಯತ್ತ ಸಾಗುವರು. ಆ ಬಳಿಕ ಕೆಲವರಿಗೆ ಮೂರು ವರ್ಷ ಇಂಗ್ಲೀಷು ಕಲಿಸಲಾಗುವದು. ಅವರಲ್ಲಿಯೂ ಅನೇಕರು ಆ ಅವಧಿಯ ನಂತರ ಶಾಲೆಗೆ ಶರಣು ಹೊಡೆಯುತ್ತಾರೆ ಮುಂದೆ ಅವರು ಟಪಾಲು ವಿಳಾಸಗಳನ್ನೋದುವಷ್ಟು ಉಳಿಸಿಕೊಂಡು ಉಳಿದ ಇಂಗ್ಲೀಷನ್ನು ಮರೆತುಬಿಡುವರು. ಈ ಪದ್ಧತಿಯನ್ನು ಇನ್ನೊಂದು ವಿಷಯಕ್ಕೂ—ಅಂದರೆ ರಾಷ್ಟ್ರಭಾಷೆಗೂ—ಅನ್ವಯಿಸಬೇಕೆಂದು ಸಮಿತಿಯು ಸೂಚಿಸಿದೆ. ಮೂಲ ಶಿಕ್ಷಣ ಪರಿಷತ್ತಿನ ಒಳ್ಳೆ ಮನಿತ ಶಿಕ್ಷಣತಜ್ಞರ ಗೌರವಾರ್ಹ ಅಭಿಪ್ರಾಯವನ್ನು ಈ ವಿಷಯದಲ್ಲಿ ಸ್ವೀಕರಿಸದಿದ್ದುದು ಜಾಣತನವಾಗಲಿಲ್ಲೆಂದು ನನಗೆ ಅನಿಸುತ್ತದೆ.

ಪುನಃ ಗೊತ್ತುವಳಿಗಳತ್ತ ಹೊರಳೋಣ. ವಿಶ್ವವಿದ್ಯಾಲಯಗಳಲ್ಲಿ ಇಂಗ್ಲೀಷು ಶಿಕ್ಷಣ ಮಾಧ್ಯಮವಾಗಿ ಉಳಿದಷ್ಟು ಕಾಲ ಮಾಧ್ಯಮಿಕಾವಸ್ಥೆಯಲ್ಲಿಯೂ ಇಂಗ್ಲೀಷು ಕಡ್ಡಾಯದ ವಿಷಯವಾಗಿರತಕ್ಕದ್ದೆಂದು ೬ನೆ ಮುದ್ದೆ ಹೇಳುತ್ತದೆ. ಆ ಇನ್ನೊಂದು ಸಮಿತಿಯ ನಿರ್ಣಯಗಳೇನೆಂದು ಈ ಸಮಿತಿಗೆ ತಿಳಿದಿರಲಿಲ್ಲವೆಂದೇ ಒಪ್ಪಿಕೊಂಡರೂ ಒಂದಲ್ಲ ಒಂದು ದಿನ ಇಂಗ್ಲೀಷಿಗಿಂತ ಪ್ರಾದೇಶಿಕ, ಸರಕಾರಿ ಅಥವಾ ಫೆಡರಲ್ ಅಥವಾ ರಾಷ್ಟ್ರೀಯ ಭಾಷೆಗೆ ಹೆಚ್ಚು ಪ್ರಾಶಸ್ತ್ಯ ಕೊಡುವದೇ ದೇಶದ ಧೋರಣವಾಗಿದೆಯೆಂದು ಈ ಸಮಿತಿಗೆ ಗೊತ್ತಿರಬೇಕಾಗಿತ್ತು. ಇದನ್ನು ನೋಡುವಾಗ ಈ ಧೋರಣದಲ್ಲಿ ಈ ಸಮಿತಿಗೆ ವಿಶ್ವಾಸವಿಲ್ಲವೆಂದೂ ಮರುಳರು ಬೇಕಾದ್ದು ಹೇಳಲಿ, ಇಂಗ್ಲೀಷು ಈಗ ತನಗಿರುವ ಸ್ಥಾನಮಾನಗಳನ್ನು ಕಾಯ್ದುಕೊಂಡು ಉಳಿದೇ ತೀರುವದೆಂಬ ನಂಬಿಕೆ ಅವರಿಗಿದೆಯೆಂದೂ ತೋರುತ್ತದೆ.

ರವೀಂದ್ರನಾಥ ಠಾಕೂರರಿಗೂ ಗಾಂಧೀಜಿಗೂ ನಮ್ಮ ದೇಶದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಸಂಘಟಕರ ವಿಷಯದಲ್ಲಿ ಅತ್ಯಂತ ಅಸಂತುಷ್ಟಿಯಿತ್ತು. ಕೆಳಗಿನಿಂದ ಶಿಕ್ಷಣ ಪದ್ಧತಿಯನ್ನು ಕಟ್ಟುತ್ತ ಬಂದು ಮಾಧ್ಯಮಿಕ ಶಿಕ್ಷಣ ಕೊನೆಗೊಂಡಲ್ಲಿಂದ ವಿಶ್ವವಿದ್ಯಾಲಯ ಶಿಕ್ಷಣವನ್ನು ಪ್ರಾರಂಭಿಸುವ ಬದಲು ಉಚ್ಚ ಶಿಕ್ಷಣವನ್ನನುಸರಿಸಿ ಕೆಳಗಿನ ಶಿಕ್ಷಣವನ್ನು ರೂಪುಗೊಳಿಸುವ ಚಾಳಿ ಶಿಕ್ಷಣಜ್ಞರಿಗೆ ಹತ್ತಿಬಿಟ್ಟದೆಯೆಂಬುದೇ ಗಾಂಧೀಜಿ ಠಾಕೂರರಿಬ್ಬರ ಆಕ್ಷೇಪವಾಗಿತ್ತು. ಇಂಗ್ಲೀಷು ವಿಶ್ವವಿದ್ಯಾಲಯ ಶಿಕ್ಷಣಮಾಧ್ಯಮದ ಸ್ಥಾನದಿಂದ ಚ್ಯುತವಾದಮೇಲೆಯೆ ಮಾಧ್ಯಮಿಕ ಶಿಕ್ಷಣದಲ್ಲಿ ರಾಷ್ಟ್ರಭಾಷೆ ಕಡ್ಡಾಯದ ವಿಷಯವಾಗಬೇಕೆಂದು ಸಮಿತಿ ಗೊತ್ತುವಳಿ ಮಾಡಿರುವದರಿಂದ ಅದಿನ್ನೂ ಮೇಲಿನ ದೋಷದಿಂದ ಪಾರಾಗುವ ಆತುರದಲ್ಲಿಲ್ಲವೆಂದು ವ್ಯಕ್ತವಾಗುತ್ತದೆ. ನಿಜವಾಗಿ ಗೊತ್ತುವಳಿ ತಿರುವು ಮುರುವಾಗಿರಬೇಕಿತ್ತು. ಉತ್ತಮ ಮೂಲಭೂತ ಜ್ಞಾನವನ್ನು ದೊರಕಿಸಿಕೊಡುವದೇ ತಮ್ಮ ಉದ್ದೇಶವಾದುದರಿಂದ ಇಂಗ್ಲೀಷಿನಲ್ಲಿ ಕೊಡಲ್ಪಡುವ ವಿಶ್ವವಿದ್ಯಾಲಯ ಶಿಕ್ಷಣವನ್ನು ಗ್ರಹಿಸುವಷ್ಟು ಪ್ರಬಲವಾದ ಇಂಗ್ಲೀಷ ಶಿಕ್ಷಣವನ್ನು ಕೆಳತರಗತಿಗಳಲ್ಲಿ ಕೊಡುವೆವೆಂದು ಭರವಸೆ ಕೊಡುವದು ಇನ್ನು ಸಾಧ್ಯವಿಲ್ಲೆಂದು ಸಮಿತಿಯವರು ಹೇಳಬೇಕಾಗಿತ್ತು. ಪ್ರಾದೇಶಿಕ ಮತ್ತು ರಾಷ್ಟ್ರಭಾಷೆಯಲ್ಲಿ ವಿದ್ಯಾರ್ಥಿಗಳು ಪರಿಣತರಾಗಬೇಕೆಂದು ತಮ್ಮ ಆತುರ. ಆದುದರಿಂದ ವಿಶ್ವವಿದ್ಯಾಲಯಗಳಿಗೆ ಇಂಗ್ಲೀಷಿನ ಪ್ರಬಲತರ ಜ್ಞಾನ ಬೇಕಿದ್ದರೆ ಅವು ಆ ಭಾಷೆಯನ್ನು ಕಲಿಯಲು ಬೇರೆಯೇ ವಿಶಿಷ್ಟ ವರ್ಗಗಳನ್ನು ತೆರೆದುಕೊಳ್ಳಲಿ ಎಂದು ಅವರು ತಿಳಿಸಬೇಕಾಗಿತ್ತು. ಮಾಧ್ಯಮಿಕ ಶಿಕ್ಷಣದ ಧ್ಯೇಯ ವಿಶ್ವವಿದ್ಯಾಲಯ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಒದಗಿಸಿಕೊಡುವದಲ್ಲ. ಬದಲಿಗೆ ಮಾಧ್ಯಮಿಕ ಶಿಕ್ಷಣದ ಧಾರೆಯನ್ನು ಮುಂದುವರಿಸುವದೇ ವಿಶ್ವವಿದ್ಯಾಲಯಗಳ ಕರ್ತವ್ಯವೆಂದು ಬಗೆಯಬೇಕು.

ಸಮಿತಿಯ ಕಾರ್ಯ ಇಷ್ಟು ನಿರಾಶಾದಾಯಕವಾದದಕ್ಕೆ ನನಗೆ ವಿಷಾದವೆನಿಸುತ್ತದೆ.

ವರ್ಧಾ
೭—೫-೪೮ ಕಿ. ಘ. ಮಶ್ರುವಾಲಾ

ಮೈಸೂರು ಸಂಸ್ಥಾನದ ಪ್ರತಿನಿಧಿ ಸಭೆಯ ಅಧಿವೇಶನ

೬೯ ಲಕ್ಷ ರೂಪಾಯಿ ಕೊರತೆ

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಆಯವ್ಯಯ ಪತ್ರಿಕೆಯ ಅಧಿವೇಶನ ೨೬ನೇ ತಾರೀಕು ಪ್ರಾರಂಭವಾಯಿತು. ದಿವಾನರಾದ ಸರ್ ರಾಮಸ್ವಾಮಿ ಮುದಲಿಯಾರರು ಆಯವ್ಯಯ ಪತ್ರಿಕೆಯನ್ನು ಮಂಡಿಸಿದರು. ಈ ವರ್ಷದ ಆದಾಯವು ೧೦೬೫ ಲಕ್ಷ ರೂಪಾಯಿ ಇದ್ದು ವೆಚ್ಚವು ೧೧೩೪ ಲಕ್ಷ ರೂಪಾಯಿಗಳಷ್ಟಾಗುವದು. ೬೯ ಲಕ್ಷ ರೂಪಾಯಿಗಳ ಕೊರತೆ ಇದೆ. ಇದರಲ್ಲಿ ಶಿಕ್ಷಣ ಶಾಖೆಗೆ ೨೬೫ ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಿದೆ. ಸಂಸ್ಥಾನದಲ್ಲಿ ಶಾಲೆ ಕಾಲೇಜುಗಳನ್ನು ಹೆಚ್ಚಿಸುವುದರಿಂದ ಅದಕ್ಕಾಗಿ ಹೆಚ್ಚು ಹಣವನ್ನು ತೆಗೆದಿಡಲಾಗಿದೆ. ಸಂಸ್ಥಾನದಲ್ಲಿ ವಾಣಿಜ್ಯ ಮತ್ತು ಕಾಯದೆ ಕಾಲೇಜುಗಳನ್ನು ಹೊಸದಾಗಿ ತೆರೆವ ವಿಚಾರವಿದೆ. ಅಬಕಾರಿ ಆದಾಯದ ಮತ್ತು ರೇಲ್ವೆ ಉತ್ಪನ್ನ ಈ ವರ್ಷ ಹೆಚ್ಚಿಗೆ ಬರುವದೆಂದು ಅಂದಾಜು. ಮೂರು ಜಿಲ್ಲೆಗಳಲ್ಲಿ ಮದ್ಯಪಾನ ಪ್ರತಿಬಂಧ ಮಾಡಲಾಗುವದು.

ಮದ್ಯಪ್ರತಿಬಂಧವಿದ್ದ ಹಿಂದುಸ್ಥಾನದ ಗಡಿಗೆ ಹೊಂದಿಕೊಂಡಿರುವ ಸಂಸ್ಥಾನದ ಗಡಿಯಲ್ಲಿ ಐದು ಮೈಲು ದೂರದ ವರೆಗಿನ ಅಂತರದಲ್ಲಿದ್ದ ಮದ್ಯದಂಗಡಿಗಳನ್ನು ಮುಚ್ಚಿಬಿಡಲಾಗಿದೆ. ನೌಕರರಿಗೆ ತುಟ್ಟಿಭತ್ತೆ ಮೊದಲಾದವುಗಳನ್ನು ಹೆಚ್ಚಿಸುವದರಿಂದ ವೆಚ್ಚ ಹೆಚ್ಚಿದೆ.

ದಿವಾನರ ಭಾಷಣದ ನಂತರ ಶ್ರೀ ಕೆ. ಹನುಮಂತಯ್ಯನವರು ಗಾಂಧೀಜಿಯವರ ನಿಧನದ ಬಗ್ಗೆ ದುಃಖ ಪ್ರದರ್ಶಿಸುವ ಗೊತ್ತುವಳಿ ಮಂಡಿಸಿದರು. ಅದು ಸ್ವೀಕೃತವಾದನಂತರ ಗಾಂಧೀಜಿಯವರಿಗೆ ಗೌರವ ಸಲ್ಲಿಸಲು ಕಾರ್ಯಕಲಾಪಗಳನ್ನು ಮರುದಿವಸಕ್ಕೆ ಮುಂದರಿಸಲಾಯಿತು.

ಕರಾಚಿಯಲ್ಲಿ ಸೇರಿದ ಹಿಂದ-ಪಾಕಿಸ್ತಾನ ಪರಿಷತ್ತಿನಲ್ಲಿ ಅವಶ್ಯಕ ಸರಕುಗಳ ಪೂರೈಕೆಯ ಬಗ್ಗೆ ಅಲ್ಪಾವಧಿ ಒಪ್ಪಂದಕ್ಕೆ ಹಿಂದ—ಪಾಕಿಸ್ತಾನಗಳು ಸಹಿ ಹಾಕಿದವು. ಒಪ್ಪಂದದ ಅವಧಿ ನಾಳಿನ ಜುಲೈ ೧ ರಿಂದ ೧ ವರ್ಷದ ವರೆಗಿದೆ.

ಶಿಕ್ಷಣ ಮಾಧ್ಯಮ

ಅ. ಪ್ರ. ಪರಿಷದಿಯ ಪ್ರಕಾರ ವಿಶ್ವವಿದ್ಯಾಲಯ ಶಿಕ್ಷಣಮಾಧ್ಯಮವನ್ನು ನಿರ್ಣಯಿಸಲು ಕೂಡಿದ ಸಮಿತಿಯು ಮೇ ೧ನೇ ವಾರದಲ್ಲಿ ದಿಲ್ಲಿಯಲ್ಲಿ ಸಭೆ ಸೇರಿತು. ಡಾ. ತಾರಾಚಂದರು ಅಧ್ಯಕ್ಷರಾಗಿದ್ದರು. ಸಮಿತಿಯಲ್ಲಿ ಈ ಕೆಳಗಿನ ಠರಾವುಗಳು ಪಾಸಾದವು:

(೧) ೫ ವರ್ಷಗಳ ಮಧ್ಯಕಾಲವಿರಬೇಕು; ಆ ಅವಧಿಯಲ್ಲಿ ಇಂಗ್ಲೀಷೇ ಶಿಕ್ಷಣ ಮತ್ತು ಪರೀಕ್ಷೆಯ ಮಾಧ್ಯಮವಾಗಿರಬೇಕು. ಈ ಕಾಲವನ್ನು ಆಯಾ ಪ್ರದೇಶದ ಇಲ್ಲವೆ ಸರಕಾರದ ಭಾಷೆಗಳ ಬಳಕೆಗೆ ಸಿದ್ಧತೆ ನಡೆಸಲು ಬಳಸಿಕೊಳ್ಳಬೇಕು.

(೨) ರಾಷ್ಟ್ರೀಯ ಇಲ್ಲವೆ ಮಾಂಡಲಿಕ (Federal) ಭಾಷೆಯಲ್ಲಿಯ ಪರೀಕ್ಷೆಯು ಕಡ್ಡಾಯವಿರಬೇಕು. ಆದರೆ ಫಲಿತಾಂಶವು ವಿದ್ಯಾರ್ಥಿಗಳ ಮುನ್ನಡೆಯ ಮೇಲೆ ವಿರುದ್ಧ ಪರಿಣಾಮ ಮಾಡದಂತಿರಬೇಕು.

(೩) ಇಂಗ್ಲೀಷನ್ನು ತೆಗೆದುಹಾಕಿ ಪ್ರಾದೇಶಿಕ ಭಾಷೆಗಳನ್ನು ಬಳಕೆಗೆ ತೆಗೆದುಕೊಳ್ಳುವ ಕಾರ್ಯ ಸಾವಕಾಶವಾಗಿ ಸಾಗಬೇಕು. ಮತ್ತು ಎಲ್ಲ ವಿಶ್ವವಿದ್ಯಾನಿಲಯದಲ್ಲೂ ಇಂಗ್ಲೀಷು ಒತ್ತಾಯದಿಂದ ಕಲಿಸಲ್ಪಡಬೇಕು.

(೪) ಪ್ರಾಂತಗಳು ಮತ್ತು ವಿಶ್ವವಿದ್ಯಾನಿಲಯಗಳೊಡನೆ ವಿಚಾರ ವಿನಿಮಯ ಮಾಡಿ ಆದಷ್ಟು ಮಟ್ಟಿಗೆ ಅಂತಾರಾಷ್ಟ್ರೀಯ ಪದಗಳನ್ನು ತೆಗೆದುಕೊಂಡು ಇಡೀ ದೇಶಕ್ಕೆ ಸಾಧಾರಣವಾದ ವಿಜ್ಞಾನಶಬ್ದಕೋಶವನ್ನು ತಯಾರಿಸಲು ಭಾಷಾಶಾಸ್ತ್ರಿಗಳ ಮತ್ತು ವಿಜ್ಞಾನಿಗಳ ಒಂದು ಸಮಿತಿಯನ್ನು ನಿಯಮಿಸಬೇಕು. ೫ ವರ್ಷಗಳಲ್ಲಿ ಕೆಲಸ ಮುಗಿಸಬೇಕೆಂದು ಆ ಸಮಿತಿಗೆ ತಿಳಿಸಬೇಕು.

(೫) ಒಂದು ಪ್ರದೇಶದಲ್ಲಿಯ ಭಿನ್ನ ಭಾಷೆಯ ಅಲ್ಪಸಂಖ್ಯಾಕರ ಭಾಷಾಸಮಸ್ಯೆಯ ಪರಿಹಾರದ ಬಗ್ಗೆ ಅತಿಪ್ರಾದೇಶಿಕ ಆಡಳಿತದ ಅಧಿಕಾರವನ್ನು ಕೊಡುವ ಪ್ರಶ್ನೆಯನ್ನು ಕೇಂದ್ರ ಸರಕಾರವು ಪರಿಶೀಲಿಸಬೇಕು.

(೬) ಘಟನಾ ಸಮಿತಿಯು ನಿರ್ಮಾಣಿಸಿದ ಲಿಪಿಯನ್ನೇ ಎಲ್ಲ ವಿಶ್ವವಿದ್ಯಾಲಯಗಳೂ ಬಳಸಲು ಒಪ್ಪಬೇಕು. ಕೆಲವರಿಗೆ ಮಾತ್ರ ಮಾಂಡಲಿಕ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ರೋಮನ್ ಲಿಪಿಯನ್ನು ಒಂದು ಹೆಚ್ಚಿನದನ್ನಾಗಿ ತೆಗೆದುಕೊಳ್ಳುವ ಅನುಕೂಲ ಬೇಕು.

ಈ ಮುದ್ದೆಗಳ ಮೇಲೆ ನಾನು ಸಂಕ್ಷಿಪ್ತ ಟೀಕೆ ಮಾಡುತ್ತೇನೆ.

ಇಂಗ್ಲೀಷನ್ನು ತೆಗೆದು ಹಾಕುವ ಮೊದಲು ದಾಟಬೇಕಾದ ವಿವಿಧ ವಿಘ್ನಗಳನ್ನು ಗಣನೆಗೆ ತಂದುಕೊಂಡರೆ ೫ ವರ್ಷದ ಅವಧಿಯನ್ನು ಮಧ್ಯಕಾಲವನ್ನಾಗಿ ಇಟ್ಟುಕೊಂಡದ್ದು ನ್ಯಾಯವೆಂದು ನನಗನಿಸುತ್ತದೆ. ಆದರೆ ಅವಧಿಯನ್ನು ಪ್ರತಿಜ್ಞೆಯೆಂಬ ದೃಷ್ಟಿಯಿಂದ ನೋಡಿ, ಆ ಅವಧಿಯೊಳಗೆ ಮಾಡತಕ್ಕದ್ದನ್ನು ಮಾಡಿಯೇ ಬಿಡಬೇಕು. ಸಂಧಾನದಲ್ಲಿ ಯಾವಾಗಲೂ ೩ ದಿನಗಳ ಅವಧಿಯನ್ನು ಕೊಡುತ್ತಾರೆ. ಆಗ ೩ ರೆಂದರೆ ೩ ದಿನಗಳೆಂದೂ ಅವನ್ನು ಮೀರಲಾಗದೆಂದೂ ಸ್ಪಷ್ಟವಾಗಿ ತಿಳಿಯಲಾಗುತ್ತದೆ.

ಇದು ೧೯೧೭ರಲ್ಲಿ ಮೊಟ್ಟ ಮೊದಲನೆಯ ಸಾರಿ ನಾನು ಮುಂಬಯಿಯಲ್ಲಿ ಗಾಂಧಿಯವರ ಭಾಷಣವನ್ನು ಕೇಳಿದ್ದನ್ನು ನೆನಪಿಗೆ ತರುತ್ತದೆ. ಒಂದು ನಿರ್ದಿಷ್ಟ ತಾರೀಕಿನೊಳಗೆ ಒತ್ತಾಯವಾಗಿ ಕೆಲಸ ಮಾಡಿಸುವದನ್ನು ನಿಲ್ಲಿಸಲು ಭಾರತ ಸರಕಾರವನ್ನು ಆ ಸಭೆ ಪ್ರಾರ್ಥಿಸಿಕೊಂಡಿತು. ಗಾಂಧಿಯವರು ಹಿಂದೀ ಸರಕಾರವನ್ನೂ ಸಭಿಕರನ್ನೂ ಆ ತಾರೀಕಿನ ಬಗ್ಗೆ ವಿಶೇಷ ಲಕ್ಷ್ಯವಿತ್ತಿರುವುದಾಗಿ ಎಚ್ಚರಿಸಿದರು. ತಾರೀಕು ಕೇವಲ ಅರ್ಥವಿಲ್ಲದ್ದೆಂದು ತಿಳಿದುಕೊಳ್ಳತಕ್ಕದ್ದಲ್ಲ. ಆ ಪದ್ಧತಿಯನ್ನು ಆ ತಾರೀಕಿನೊಳಗೆ ಸರಕಾರವು ಕಿತ್ತೊಗೆಯದಿದ್ದರೆ ತಾವು ಸುಮ್ಮನಿರಲಾರೆವೆಂದರು ಗಾಂಧೀಜಿ. ಅದೇ ಪ್ರಕಾರ ಸರಕಾರವು ಆ ದುಷ್ಪದ್ಧತಿಯನ್ನು ಅದೇ ತಾರೀಕಿನೊಳಗೆ ತೆಗೆದು ಹಾಕಿತು.

ಇನ್ನೊಂದು ಅಂಥದೇ ಸಂದರ್ಭ ನೆನಪಾಗುತ್ತದೆ. ಕಾಂಗ್ರೆಸ್ಸಿನ ೧೯೨೮ರ ಸಭೆಯಲ್ಲಿ ಅಧಿರಾಜ್ಯ ಸ್ಥಾನವನ್ನು ಭಾರತಕ್ಕೆ ಕೊಡಲು ಇಂಗ್ಲೆಂಡಿಗೆ ಒಂದು ವರುಷದ ಅವಧಿಯನ್ನು ಕೊಡಲಾಯಿತು. ಸರಕಾರವು ಕಾಲವನ್ನು ಹಾಗೆ ಕಳೆದರೆ ಕಾಂಗ್ರೆಸು ತನ್ನ ಬೇಡಿಕೆಯನ್ನು ಪೂರ್ಣ ಸ್ವರಾಜ್ಯಕ್ಕೆ ಏರಿಸಬೇಕೆಂದು ಗೊತ್ತಾಯಿತು. ೧೯೨೯ರ ಡಿಸೆಂಬರ ೩೧ರ ನಡುರಾತ್ರಿಗೆ ಅವಧಿ ಮುಗಿಯಿತು. ಆಗ ೧೯೩೦ನೆಯ ವರ್ಷದ ಹುಟ್ಟಿನೊಡನೆಯೇ ಕಾಂಗ್ರೆಸ್ಸು ತನ್ನ ಬೇಡಿಕೆಯನ್ನು ಬದಲಿಸಿ ಪೂರ್ಣ ಸ್ವರಾಜ್ಯಬೇಕೆಂಬ ಘೋಷಣೆಯನ್ನು ಮಾಡಿತು. ಆ ಧ್ಯೇಯವನ್ನು ಸಾಧಿಸಲು ಹೂಡಿದ ವಿವಿಧ ಚಳವಳಿಗಳು ಸ್ಪಷ್ಟವಾಗಿಯೇ ಇವೆ.

ಅದೇ ಪ್ರಕಾರ ಹಿಂದೀ ಸರಕಾರ ಮತ್ತು ವಿಶ್ವವಿದ್ಯಾನಿಲಯಗಳು ಈ ವರ್ಷದ ಅವಧಿಯನ್ನು ಭಾರತೀಯರಿಗೆ ಕೊಟ್ಟ ಭಾಷೆಯೆಂದು ತಿಳಿದು ಆ ಅವಧಿ ಮುಗಿದ ಮರುದಿನವೇ ಅಂದರೆ ೧೯೫೩ರ ಬೇಸಿಗೆ ವಿರಾಮದ ಕಳೆದು ಶಾಲೆ ಕಾಲೇಜುಗಳು ತೆರೆದೊಡನೆಯೇ ಪ್ರಾದೇಶಿಕ ಇಲ್ಲವೆ ಸರಕಾರೀ ಭಾಷೆಯ ಮೂಲಕ ಅತ್ಯುಚ್ಚ ವಿದ್ಯೆಯು ಸಿಗುವಂತಾಗಬೇಕು. (ಭಾರತದ ಘಟನೆಯ ಕರಡಿನಲ್ಲಿ ೨ನೆಯ ಪದಸಂಹತಿಯ ಅರ್ಥವನ್ನು ಸ್ಪಷ್ಟಪಡಿಸಬೇಕು. ಅಂದರೆ, ಒಂದು ಪ್ರಾಂತ ಇಲ್ಲವೆ ಭಾರತ ಒಕ್ಕೂಟದ ಸದಸ್ಯವೆನಿಸಿದ ಭಾಗವು ಒಂದು ಭಾಷಾವಾರು ಪ್ರದೇಶವಿದ್ದರೆ ಶಿಕ್ಷಣ ಮಾಧ್ಯಮವು ಆ ಸರಕಾರದ ಭಾಷೆಯೇ ಆಗುತ್ತದೆ, ಹಾಗಲ್ಲದೆ ಅದು ಭಿನ್ನ ಭಾಷೆಗಳ ಪ್ರದೇಶವಾದರೆ ವಿದ್ಯಾಸಂಸ್ಥೆ ಇರುವ ಪ್ರದೇಶದ ಭಾಷೆಯನ್ನೇ ಮಾಧ್ಯಮವನ್ನಾಗಿ ತೆಗೆದುಕೊಳ್ಳಬೇಕು).

ಈ ವಾಗ್ದಾನ ಆಚರಣೆಗೆ ಬರಬೇಕಾದರೆ, ಮೇಲೆ ಹೇಳಿದ ಮೂರನೆಯ ಮುದ್ದೆಗೆ ಭಾರತೀಯ ಭಾಷೆಗಳ ಮೂಲಕ ಕಾಲೇಜಿನ ಪ್ರಥಮ ವರ್ಗದಲ್ಲಿ ಶಿಕ್ಷಣ ಕೊಡುವದನ್ನು ೧೯೪೯ ಜೂನಿನಿಂದಲೇ ಪ್ರಾರಂಭ ಮಾಡಬೇಕಾಗುವದೆಂದು ಅರ್ಥ ಹಚ್ಚಬೇಕಾಗುವದು. ಅಮೇಲೆ ವರ್ಷಕ್ಕೆ ಒಂದೊಂದೇ ಮೇಲಿನವರ್ಗಕ್ಕೆ ಈ ನಿಯಮವನ್ನು ಅನ್ವಯಿಸುತ್ತ ಹೋಗಬೇಕು. ನಾನು ಮಾಡಿದ ಅರ್ಥ ಸರಿಯಾಗಿದ್ದರೆ, ಆಗ ಈ ಪರಿವರ್ತನೆಯನ್ನು ಸರಾಗವಾಗಿ ಮಾಡುವದಕ್ಕೋಸ್ಕರ, ಸಧ್ಯದ ವಿದ್ಯಾರ್ಥಿಗಳು ಇಂಗ್ಲೀಷಿನಲ್ಲೆ ಅಭ್ಯಾಸ ಮಾಡಿದ್ದರೂ ಈಗಿಂದಲೇ ಅವರಿಗೆ ತಮ್ಮ ಪ್ರಾದೇಶಿಕ ಇಲ್ಲವೆ ಸರಕಾರಿ ಭಾಷೆಯಲ್ಲಿ ಪ್ರಶ್ನ ಪತ್ರಗಳನ್ನು ಉತ್ತರಿಸಲು ಅವಕಾಶ ಕೊಡುವದು ಬಹಳ ಹಿತಾವಹವಾದೀತು. ಮೊದಲಿನ ಕೆಲ ವರ್ಷಗಳ ವರೆಗೆ ಅವರ ಉತ್ತರದ ಭಾಷೆ ಸ್ವಭಾಷೆ-ಇಂಗ್ಲೀಷು ಭಾಷೆಗಳ ಕಲಸು ಮೇಲೋಗರವಾಗಬಹುದು. ಆದರೆ ಅದರಿಂದ ವಿದ್ಯಾರ್ಥಿಗಳಿಗೆ ಆಯಾ ವಿಷಯಗಳನ್ನು ಸ್ವಭಾಷೆಯಲ್ಲಿಯೆ ವಿಚಾರಿಸಲು ಎಡೆಮಾಡಿಕೊಟ್ಟಂತಾಗುವದು. ಇದು ಅಭ್ಯಾಸವಾಗಬೇಕಾದರೆ ಬಹಳ ಕಾಲ ಬೇಕಾಗುವದು. ಅದು ವ್ಯಯಸಾಯದಿಂದಲೇ ಸಾಧಿಸಬಲ್ಲ ಮಾತು. ಈ ದೃಷ್ಟಿಯಿಂದ ನೋಡಿದರೆ ಪರೀಕ್ಷೆಯ ಮಾಧ್ಯಮವಾಗಿ ಇಂಗ್ಲೀಷನ್ನೂ ಉಳಿಯಗೊಡಬೇಕೆಂಬ ನಿರ್ಣಯವನ್ನು ಮಾರ್ಪಡಿಸುವದು ಅವಶ್ಯವೆಂದು ನನಗನಿಸುತ್ತದೆ.

ಗೊತ್ತುವಳಿಯ ಎರಡನೆಯ ಮುದ್ದೆ, ವಿದ್ಯಾಭ್ಯಾಸದಲ್ಲಿ ರಾಷ್ಟ್ರಭಾಷೆಯ ಸ್ಥಾನವನ್ನು ಕುರಿತದ್ದು. ಆ ಭಾಷೆ ಪೂರ್ಣವಾಗಿ ಬೆಳೆದು ಅಂತಃಪ್ರಾಂತೀಯ ಭಾಷೆಯಾಗಿ ರೂಪುಗೊಂಡು ಕಾಲಾಂತರದಲ್ಲಿ ಈಗ ಇಂಗ್ಲೀಷಿಗಿರುವ ಸ್ಥಾನದಲ್ಲಿ ನಿಲ್ಲಬೇಕಾದರೆ, ಈ ವರೆಗೆ ಶಾಲೆ ಕಾಲೇಜುಗಳಲ್ಲಿ ಇಂಗ್ಲೀಷಿಗಿರುತ್ತಿದ್ದ ಪ್ರಮುಖ ಸ್ಥಾನವೇ ಅದಕ್ಕೂ ದೊರೆಯತಕ್ಕದ್ದು. ಹೀಗೆ ಮಾಡಲು ಇಂಗ್ಲೀಷಿಗಾಗಿ ಆಗುತಿದ್ದಷ್ಟು ಕಾಲ ಧನಗಳ ವ್ಯಯ ಕೂಡ ಬೇಕಾಗಲಿಕ್ಕಿಲ್ಲ. ರಾಷ್ಟ್ರಭಾಷೆಗೂ ಇತರ ಭಾರತೀಯ ಭಾಷೆಗಳಿಗೂ ಸಾಮ್ಯವಿರುವದರಿಂದ ಪರೀಕ್ಷೆಯೆಂಬುದು ಈಗಿನ ರೂಪದಲ್ಲಿಯೆ ಉಳಿಯುವದಾದರೆ ಅದೇನು ಅಷ್ಟು ಅಪೇಕ್ಷಣೀಯ ಸಂಸ್ಥೆಯೆಂದು ನಾನು ಹೇಳಲಾರೆ. ಆದರೆ ಎಲ್ಲ ನಿಯಮ-ಬದ್ಧ ಶಿಕ್ಷಣದಲ್ಲಿಯೂ ಪರೀಕ್ಷೆಗೆ ಮಹತ್ವದ ಸ್ಥಾನವಿರುವದರಿಂದ, ರಾಷ್ಟ್ರಭಾಷೆಯ ಅಭ್ಯಾಸವನ್ನು ಅಲಕ್ಷಿಸಿದರೂ ಭಯವಿಲ್ಲವೆಂಬ ಭಾವನೆ ವಿದ್ಯಾರ್ಥಿಯ ಮನಸಿನಲ್ಲಿ ಬೇರೂರಿತೆಂದರೆ ಆ ಭಾಷೆ ಎಂದೆಂದಿಗೂ ಅಪರಿಪೂರ್ಣವೂ ಅಪ್ರೌಢವೂ ಆಗಿ ಉಳಿಯುವದು. ಮುಂಬಯಿ ವಿಶ್ವವಿದ್ಯಾಲಯದವರು ಪ್ರಾದೇಶಿಕ ಭಾಷೆಗಳನ್ನೂ, ಭೂಗೋಲ, ವಿಜ್ಞಾನಗಳನ್ನೂ ಪರೀಕ್ಷಾ ವಿಷಯಗಳಾಗಿ ಮಾಡದೆ ಕೇವಲ ಪ್ರಶಸ್ತಿಪತ್ರಿಕೆ ಕೊಡುವ ವಿಷಯಗಳಾಗಿ ಮಾಡಿದಾಗ ಆ ವಿಷಯಗಳ ಅಭ್ಯಾಸ ಅಲಕ್ಷ್ಯಕ್ಕೆ ಒಳಗಾಯಿತೆಂದು ಅನುಭವಕ್ಕೆ ಬಂತು. ನಿಜವಾಗಿ ೨ನೆಯ ಮುದ್ದೆಯಲ್ಲಿ "ಫೆಡರಲ್ ಇಲ್ಲವೆ ರಾಷ್ಟ್ರಭಾಷೆ"ಯೆಂಬ ಸ್ಥಾನದಲ್ಲಿ "ಇಂಗ್ಲೀಷ" ಎಂದೂ ೩ನೆ ಮುದ್ದೆಯಲ್ಲಿ "ಇಂಗ್ಲೀಷ" ಎಂಬಲ್ಲಿ "ಫೆಡರಲ್ ಇಲ್ಲವೆ ರಾಷ್ಟ್ರಭಾಷೆ"ಯೆಂದೂ ಪಲ್ಲಟ ಮಾಡಿದ್ದರೆ ಉಚಿತವಾಗುತಿತ್ತು.

೪ನೇ ಮತ್ತು ೫ನೆ ಮುದ್ದೆಗಳು ಅವಶ್ಯಕ ಉಪಸಿದ್ಧಾಂತಗಳೆನ್ನಬಹುದು. ಕಳೆದ ಸಂಚಿಕೆಯಲ್ಲಿ "ರಾಷ್ಟ್ರಭಾಷೆ"ಯೆಂಬ ತಲೆಕಟ್ಟಿನ ಕೆಳಗೆ ನಾನು ಫೆಡರಲ್ ಭಾಷೆ ಹಾಗು ಲಿಪಿಯ ವಿಷಯಗಳನ್ನು ಚರ್ಚಿಸಿದ್ದೇನೆ.

ಒಟ್ಟಿನ ಮೇಲೆ ಮೌಲಾನಾ ಅಬುಲಕಲಾಮರು ಆರಿಸಿದ ಡಾ. ತಾರಾಚಂದ ಸಮಿತಿ ತಾನು ಸಾಧಿಸಿದ ಕಾರ್ಯಗಳಿಗಾಗಿ ಅಭಿನಂದನಾರ್ಹವಾಗಿದೆ. ವಿವಿಧ ಶಾಖೆಗಳೂ ಬೇರೆ ಬೇರೆ ವಿಶ್ವವಿದ್ಯಾಲಯಗಳ ಅಧ್ಯಾಪಕರೂ ಈ ಗೊತ್ತುವಳಿಗಳನ್ನು ಪೂರ್ಣ ಯಶಸ್ವಿಯಾಗಿ ಮಾಡಲು ಪ್ರಯತ್ನಿಸುವರೆಂದು ಹಾರೈಸುತ್ತೇನೆ. ಗೊತ್ತುವಳಿಗಳು ಎಲ್ಲ ಸರಕಾರಗಳ ಹಾಗು ವಿಶ್ವವಿದ್ಯಾಲಯಗಳ ಸಂಯುಕ್ತ ಪ್ರಯತ್ನದ ಫಲವಾಗಿ ರೂಪುಗೊಂಡಿರುವದರಿಂದ ಅವುಗಳನ್ನು ಎಲ್ಲರೂ ತಮಗೆ ಬಂಧಕವೆಂದು ಬಗೆಯಬೇಕು. ಯಾರೂ ಅದರಿಂದ ನುಣುಚಿಕೊಳ್ಳಲು ಪ್ರಯತ್ನಿಸದಿರಲಿ.

ಮುಂಬಯಿ —ಕಿ. ಘ. ಮಶ್ರುವಾಲಾ

೧೪—೫—೪೮

ನಿಜಾಮರಿಗೆ ಕೊನೆಯ ಅವಕಾಶ?

ಗಾಣಗಾಪುರ ರೇಲ್ವೆ ದುರಂತದ ಸುದ್ದಿ ಬಂದೊಡನೆ ದಿಲ್ಲಿಯಿಂದ ಹೈದರಾಬಾದ ಮುಖ್ಯಮಂತ್ರಿ ಲಾಯಕ ಅಲ್ಲಿಯವರಿಗೆ ಅವಸರದ ಕರೆ ಬಂದು ಅವರು ಹಿಂದುಸ್ಥಾನ ಸರಕಾರದ ಕೊನೆಯ ಕರಾರುಗಳನ್ನು ತೆಗೆದುಕೊಂಡು ಹೈದರಾಬಾದಿಗೆ ಮರಳಿದ್ದಾರೆ. ಅವರು ಬೇಗನೆ ದಿಲ್ಲಿಗೆ ಮರಳಿ ನಿಜಾಮರ ಅಭಿಪ್ರಾಯವನ್ನು ಹಿಂದುಸ್ಥಾನ ಸರಕಾರಕ್ಕೆ ಮುಟ್ಟಿಸುವರೆಂದು ಗೊತ್ತಾಗಿದೆ. ಹೆಸರಿಗೆ ಮಾತ್ರ ಸ್ವತಂತ್ರವಾಗಿದ್ದು ಹಿಂದುಸ್ಥಾನದಲ್ಲಿ ಸೇರ್ಪಡೆಹೊಂದಿದಂತೆ ಮಾಡಲು ನಿಜಾಮರು ನಿರ್ಧರಿಸಿದ್ದಾರಂತೆ. ಹಿಂದುಸ್ಥಾನ ಸರಕಾರ ಪೂರ್ಣ ಸೇರ್ಪಡೆಯೇ ಆಗಬೇಕೆಂದು ಹಟ ತೊಟ್ಟಿದೆಯೆಂದೂ ಪಾಕಿಸ್ಥಾನ ಕೂಡ ನಿಜಾಮರಿಗೆ ಹಾಗೆಯೆ ಉಪದೇಶ ಕೊಟ್ಟಿದೆಯೆಂದೂ ಸುದ್ದಿ.

ಗೋಡಸೆ ಖಟ್ಲೆಯ ವಿಚಾರಣೆ ಪ್ರಾರಂಭ

ಜೂನ ೧೪ಕ್ಕೆ ಮುಂದೆ ಬಿತ್ತು

ಮಹಾತ್ಮಾ ಗಾಂಧಿಯವರ ಕೊಲೆಯ ಆರೋಪವುಳ್ಳ ನಥುರಾಮ ವಿನಾಯಕ ಗೋಡಸೆ ಮತ್ತು ಕೊಲೆಯ ಒಳಸಂಚು ಮೊದಲಾದ ಆರೋಪಗಳುಳ್ಳ ಬ್ಯಾ. ಸಾವರಕರ ಮೊದಲಾದವರ ಖಟ್ಲೆಯ ವಿಚಾರಣೆ ಹೊಸದಿಲ್ಲಿಯ ಇತಿಹಾಸ ಪ್ರಸಿದ್ಧ ಕೆಂಪುಕೋಟೆಯಲ್ಲಿ ಮೇ ೨೭ನೇ ತಾ. ನ ದಿನ ಪ್ರಾರಂಭವಾಯಿತು. ಕಾನಪುರದಲ್ಲಿ ಇತ್ತೀಚೆ ಸೆಶನ್ಸ ಜಡ್ಜರಾಗಿದ್ದ ಶ್ರೀ ಆತ್ಮಚರಣ ಆಯ್ ಸಿ. ಎಸ್. ಇವರು ವಿಶೇಷ ನ್ಯಾಯಾಧೀಶರೆಂದು ಈ ಖಟ್ಲೆಯನ್ನು ನಡೆಸಿರುವರು. ಸರಕಾರದ ಪರವಾಗಿ ಮುಂಬಯಿ ಅಡ್ವೊಕೇಟ ಜನರಲ್‌ರಾದ ಸಿ. ಕೆ. ದಫ್ತರಿಯವರು ಕೆಲಸ ಮಾಡುತಿರುವರು. ಮುಂಬಯಿಯ ಎನ್. ಕೆ. ಪೆಟಿಗರಾ, ಎಂ. ಜಿ. ವ್ಯವಹಾರಕರ ಪಂಜಾಬದ ರಾಯ ಬಹಾದ್ದೂರ ಜ್ವಾಲಾಪ್ರಸಾದ, ದಿಲ್ಲಿಯ ಪಂಡಿತ ಠಾಕೂರದಾಸ ಇವರು ಸಹಾಯ ಮಾಡುತಿದ್ದಾರೆ. ಮುಂಬಯಿಯ ಡೆ. ಪೋಲೀಸ ಕಮೀಶನರರಾದ ಜೆ. ಸಿ. ನಗರವಾಲಾ ಇವರೂ ಕೋರ್ಟಿನಲ್ಲಿ ಉಪಸ್ಥಿತರಾಗಿರುವರು. ಆರೋಪಿಗಳ ಪರವಾಗಿ ಪುಣೆಯ ಶ್ರೀ ಎಲ್. ಬಿ. ಭೋಪಟಕರ, ಪಿ. ಬ್ಯಾನರ್ಜಿ, ಜಮುನಾದಾಸ ಮೆಹತಾ, ಗಣಪತರಾಯ ಇನಾಮದಾರ ಇವರು ವಕೀಲಿ ನಡೆಸುವರು. ಸರಕಾರದ ಪರವಾಗಿ ೨೫೦ ಸಾಕ್ಷಿದಾರರಿರುವರು. ವಿಚಾರಣೆ ಜೂನ ೧೪ಕ್ಕೆ ಮುಂದೆ ಸಾಗುತಿದ್ದರೂ ೩ನೇ ತಾರೀಕಿಗೆ ಅಲ್ಪಾವಧಿಯ ವರೆಗೆ ಸೇರಿ ಕೆಲ ಔಪಚಾರಿಕ ಪ್ರಶ್ನೆಗಳ ನಿಕಾಲೆ ಮಾಡಲಾಗುವದು. ಮುಂಬೈ ಸುರಕ್ಷಿತತೆ ಕಾಯದೆಯನ್ವಯ ಈ ನ್ಯಾಯಾಲಯವನ್ನು ಸ್ಥಾಪಿಸಿದೆ.

ಕೆಂಪುಕೋಟೆಯಲ್ಲಿ ಆರೋಪಿಗಳು

ಇಂದು ಮುಂಜಾನೆ ಹತ್ತು ಹೊಡೆಯಲು ಕೆಲ ನಿಮಿಷ ಇರುವಾಗ ಆರೋಪಿಗಳನ್ನು ನ್ಯಾಯಾಲಯಕ್ಕೆ ತರಲಾಯಿತು. ಕೆಂಪು ಕೋಟೆಗೆ ಬರುವ ಎಲ್ಲ ದಾರಿಗಳಲ್ಲಿ ಪೋಲಿಸರ ಬಂದೋಬಸ್ತು ಇದೆ. ನ್ಯಾಯಾಲಯದ ಸುತ್ತಲೂ ಮುಳ್ಳಿನ ತಂತಿ ಬೇಲಿಯನ್ನು ಕಟ್ಟಲಾಗಿದ್ದು ಸಶಸ್ತ್ರ ಪೋಲೀಸರು ಕಾವಲು ಮಾಡುತಿರುವರು. ಒಳಗೆ ಬರುವವರನ್ನೆಲ್ಲ ತಪಾಸ ಮಾಡಿ ಬಿಡಲಾಗುತಿದೆ. ಪ್ರೇಕ್ಷಕರಾರಿಗೂ ಪ್ರವೇಶವಿಲ್ಲ ೧೦೦ ಜನ ಪತ್ರಿಕಾ ಪ್ರತಿನಿಧಿಗಳಿಗೂ ಫೋಟೋಗ್ರಾಫರರಿಗೂ ಪ್ರವೇಶವಿತ್ತು. ನ್ಯಾಯಾಧೀಶರ ಅಪ್ಪಣೆಯಿಂದ ಫೋಟೋಗಳನ್ನು ತೆಗೆಯಲಾಯಿತು. ಆಗ ನ್ಯಾಯಾಲಯವೆಲ್ಲ ವಿದ್ಯುದೀಪಗಳಿಂದ ಪ್ರಕಾಶಿತವಾಗಿತ್ತು.

ಆರೋಪಿಗಳಲ್ಲಿ ಎಲ್ಲಕ್ಕೂ ಮೊದಲು ನಥುರಾಮ ಗೋಡಸೆಯವರು ಬಂದು ಕಟಾಂಜನದಲ್ಲಿ ಕುಳಿತರು. ಅರ್ಧತೋಳಿನ ಶರ್ಟ ಹಾಕಿದ್ದರು. ಅಷ್ಟೊಂದು ದಷ್ಟಪುಷ್ಟ ಶರೀರವಲ್ಲ. ಇವರ ಹಿಂದೆ ನಾರಾಯಣ ದತ್ತಾತ್ರೆಯ ಆಪಟೆ ಅವರ ತರುವಾಯ ವಿಷ್ಣು ರಾಮಕೃಷ್ಣ ಕರಕರೆ, ದಿಗಂಬರ ರಾಮಚಂದ್ರ ಬಡಗೆ, ಮದನಲಾಲ, ಗೋಪಾಲ ವಿನಾಯಕ ಗೋಡಸೆ, ಶಂಕರ ಕಿಷ್ಟಯ್ಯಾ ಬ್ಯಾ. ವಿನಾಯಕ ದಾಮೋದರ ಸಾವರಕರ ಮತ್ತು ಡಿ. ಎಸ್. ಪರಚುರೆ ಹೀಗೆ ಕ್ರಮವಾಗಿ ಕುಳಿತುಕೊಂಡರು. ಬ್ಯಾ ಸಾವರಕರರ ಪ್ರಕೃತಿ ಅಸ್ವಸ್ಥವಿದ್ದುದರಿಂದ ಅವರಿಗೆ ಮೆತ್ತನ್ನ ಗಾದಿಯ ಆಸನವನ್ನು ಕೊಡಲಾಗಿದೆ. ಇವರೆಲ್ಲರ ಮೇಲೆ ಕೊಲೆ,ಕೊಲೆ ಮಾಡಲು ಒಳಸಂಚು ಮಾಡಿದ್ದು, ಪ್ರೋತ್ಸಾಹಕೊಟ್ಟದ್ದು, ಕಾನೂನಿಗೆ ವಿರುದ್ಧವಾಗಿ ಶಸ್ತ್ರಾಸ್ತ್ರ ಹಾಗು ಸ್ಫೋಟಕ ದ್ರವ್ಯಗಳನ್ನು ಇಟ್ಟುಕೊಂಡದ್ದರ ಆರೋಪಗಳಿವೆ.

ಈ ಅಪರಾಧಗಳ ಬಗ್ಗೆ ಎರಡು ಗಂಟೆಗಳ ವರೆಗೆ ವಿಚಾರಣೆ ನಡೆದು ೧೪ಕ್ಕೆ ಕೋರ್ಟು ಮುಂದರಿಯಿತು.

ಆರೋಪಿಗಳಾರು ?

೧ ನಥುರಾಮ ವಿನಾಯಕ ಗೋಡಸೆ

ಮಹಾತ್ಮರ ಕೊಲೆಯ ಆರೋಪವುಳ್ಳ ನಥುರಾಮ ಗೋಡಸೆ ಇವರು ಕೆಲ ಸಮಯದ ವರೆಗೆ ಹೊಲಿಗೆ ಕೆಲಸ ಮಾಡುತ್ತಿದ್ದರು ವಯಸ್ಸು ೩೬. ಬ್ಯಾ. ಸಾವರಕರರ ಪರಿಚಯವಾದನಂತರ ಅವರ ಖಾಸಗಿ ಕಾರ್ಯದರ್ಶಿಗಳಾಗಿ ದೇಶವೆಲ್ಲೆಲ್ಲ ಸಂಚರಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸದಸ್ಯರು. 'ಅಗ್ರಣಿ' ಎಂಬ ಮರಾಠಿ ಪತ್ರಿಕೆ ತೆಗೆದಿದ್ದರು ಅದು ನಿಂತಕೂಡಲೆ 'ಹಿಂದು ರಾಷ್ಟ್ರ' ಎಂಬ ಮತ್ತೊಂದು ಪತ್ರಿಕೆಯ ಸಂಪಾದಕರಾದರು ಜನೆವರಿ ೩೦ಕ್ಕೆ ಬಿರ್ಲಾ ಭವನದಲ್ಲಿ ಮಹಾತ್ಮ ಗಾಂಧಿಯವರಿಗೆ ಪಿಸ್ತೂಲಿನಿಂದ ಹೊರಟ ಮೂರು ಗುಂಡುಗಳು ತಾಕಿದ ಕೂಡಲೆ ಆ ಗುಂಡುಗಳನ್ನು ಹಾರಿಸಿದ್ದಕ್ಕಾಗಿ ಇವರನ್ನು ಸೆರೆಹಿಡಿಯಲಾಯಿತು

೨ ನಾರಾಯಣ ದತ್ತಾತ್ರೇಯ ಆಪಟೆ

ವಯಸ್ಸು ೩೫. ಬಿ. ಎಸ್ ಸಿ ಇದ್ದು ಅಹಮ್ಮದನಗರದಲ್ಲಿ ಉಪಾಧ್ಯಾಯರಾಗಿದ್ದರು ಅಲ್ಲಿಯೆ ಹಿಂದಿ ರಾಯಫಲ್ ಕ್ಲಬ್ಬನ್ನು ಸ್ಥಾಪಿಸಿದ್ದರು

೩ ವಿಷ್ಣು ದಿಗಂಬರ ಕರಕರೆ

ವಯಸ್ಸು ೩೫. ಅಹಮ್ಮದನಗರದಲ್ಲಿಯ ಒಂದು ಹೊಟೆಲ್ ಒಡೆಯರು; ನಟರೂ ಆಗಿರುವರು.

೪ ದಿಗಂಬರ ರಾಮಚಂದ್ರ ಬಡಗೆ

ವಯಸ್ಸು ೩೫ ಬ್ರಾಹ್ಮಣೇತರ. ಪುಣೆಯಲ್ಲಿ ಶಸ್ತ್ರಾಸ್ತ್ರಗಳ ಅಂಗಡಿ ಒಡೆಯರು.

೫) ಮದನಲಾಲ ಕಾಶ್ಮೀರಿಲಾಲ ಪಹವಾ

ವಯಸ್ಸು ೨೩. ಪಂಜಾಬದ ನಿರಾಶ್ರಿತರೆಂದು ವಿಸಾಪೂರ ಶಿಬಿರದಲ್ಲಿದ್ದರು. ಮಹಾತ್ಮರ ಪ್ರಾರ್ಥನ ಸಭೆಯಲ್ಲಿ ಬಾಂಬ ಸ್ಫೋಟವಾದಾಗ ಇವರ ಝಡತಿ ಮಾಡಲಾಗಿ ಕೈಬಾಂಬು ಇವರ ಕೈಯಲ್ಲಿ ಸಿಕ್ಕಿತೆಂದು ಹೇಳಲಾಗುತ್ತದೆ.

೬) ಶಂಕರ ಕಿಷ್ಟಯ್ಯಾ

ಬಡಗೆಯವರ ಸೇವಕರೆಂದು ಹೇಳಲಾಗುತ್ತದೆ; ರಿಕ್ಶಾ ಎಳೆಯುವವರು.

೭) ಗೋಪಾಳ ವಿನಾಯಕ ಗೋಡಸೆ

ವಯಸ್ಸು ೩೨. ನಥುರಾಮ ಗೋಡಸೆಯ ತಮ್ಮ ಕಳೆದ ಮಹಾಯುದ್ಧದಲ್ಲಿ ಸೈನ್ಯದಲ್ಲಿ ಸೇರಿದ್ದರು ಇನ್ನೂ ಬ್ರಹ್ಮಚಾರಿ.

೮) ವಿನಾಯಕ ದಾಮೋದರ ಸಾವರಕರ

ವಯಸ್ಸು ೬೫. ಬ್ರಿಟಿಶ ಆಳಿಕೆಯ ವಿರುದ್ಧ ಹೋರಾಡಿ ಅಂದಮಾನದಲ್ಲಿ ೧೪ ವರುಷ ಶಿಕ್ಷೆ ಅನುಭೋಗಿಸಿ ಬಂದವರು. ಅನಂತರ ರತ್ನಾಗಿರಿಯಲ್ಲಿ ಸ್ಥಾನಬದ್ಧರಾಗಿದ್ದರು. ಮೊದಲನೆಯ ಸಲ ಕಾಂಗ್ರೆಸ ಮಂತ್ರಿ ಮಂಡಲ ಸ್ಥಾಪಿತವಾದ ಕೂಡಲೆ ಬಿಡುಗಡೆ ಮಾಡಲ್ಪಟ್ಟರು. ನಂತರ ಹಿಂದು ಮಹಾಸಭೆ ಸೇರಿದರು.

೯) ದತ್ತಾತ್ರೇಯ ಸದಾಶಿವ ಪರಚುರೆ

ಇವರು ಗ್ವಾಲೇರದಲ್ಲಿ ಡಾಕ್ಟರರು. ವಯಸ್ಸು ೪೫ ಸಾವರಕರ ಮತ್ತು ಗೋಡಸೆಯವರ ಆಪ್ತಮಿತ್ರರು.

ರೂಪರಂಗ

ಕನ್ನಡ ಚಲಚ್ಚಿತ್ರ ಪ್ರಪಂಚ

—:—

ಲೇಃ— ಚಿತ್ರವಿಹಾರಿ

ಇದೀಗ ಅಂದರೆ ಕಳೆದ ಎರಡುಮೂರು ವರ್ಷಗಳಲ್ಲಿ ಕನ್ನಡ ಚಲಚ್ಚಿತ್ರ ಪ್ರಪಂಚದಲ್ಲಿ ಅದೆಷ್ಟೋ ಪ್ರಗತಿಯಾಗುತ್ತಿದೆಯೆಂಬುದಕ್ಕೆ ಈಬಗ್ಗೆ ಪ್ರದರ್ಶನಕ್ಕೆ ಬಂದ ಮತ್ತು ಮುಂದುಬರಲಿರುವ ಕನ್ನಡ ಚಿತ್ರಗಳೇ ಇದಕ್ಕೆ ಸಾಕ್ಷಿಯಾಗಿವೆ. ಈಗಲಾದರೋ ಅದೆಷ್ಟೋ ಚಲಚ್ಚಿತ್ರಗಳು ಪ್ರದರ್ಶನಕ್ಕೆ ಬಂದಿವೆ ಬರುತ್ತಿವೆ. ಆದರೆ ನಮ್ಮ ಚಲಚ್ಚಿತ್ರ ನಿರ್ಮಾಪಕರು ಚಿತ್ರಗಳನ್ನು ನಿರ್ಮಿಸುವಾಗ್ಗೆ ಅದೆಷ್ಟೋ ವಿಷಯಗಳ ಕಡೆಗೆ ಕೂಲಂಕಷವಾಗಿ ವಿಚಾರ ಮಾಡದೇ ಚಿತ್ರಗಳನ್ನು ನಿರ್ಮಿಸುತ್ತಲಿದ್ದಾರೆ. ಹೀಗಾಗಿ ಆ ಎಷ್ಟೋ ಚಿತ್ರಗಳು ಅಯಶಸ್ವಿಯಾಗಿವೆಯೆಂದು ಹೇಳಬಹುದು. ತಾವು ನಿರ್ಮಿಸಿದ ಚಿತ್ರವೇ ಜನತೆಗೆ ಮೆಚ್ಚಬೇಕು ಎಂಬುದು ಹೇಗೆ? ಹೀಗಾಗಿ ಜನತೆಯು ಸಹಾಯ ಪ್ರೋತ್ಸಾಹನ ಸಿಕ್ಕದೇ ಜನತೆಯನ್ನು ಜರೆಯುತ್ತಾರೆ ಆದ್ದರಿಂದ ಇಂದಿನ ಚಿತ್ರ ನಿರ್ಮಾಪಕರು ಈಗಿನ ಜನತೆಗೆ ಬೇಕಾದ ವಿಷಯವನ್ನು ಅರಿತುಕೊಂಡು ಪ್ರಸಿದ್ಧ ನಟನಟಿಯರನ್ನೊಳಗೊಂಡು ನುರಿತ ಕಥಾಲೇಖಕರನ್ನು ಆಯ್ದುಕೊಂಡು ಚಿತ್ರವನ್ನು ನಿರ್ಮಿಸಿದರೆ ಅದು ಖಂಡಿತವಾಗಿಯೂ ಆದರ್ಶ ಚಿತ್ರವಾಗುವದಲ್ಲದೇ ಜನತೆಯು ಬೆಂಬಲವಾದರೂ ಸಂಪೂರ್ಣ ಸಿಗುವದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಈಗಿನ ಜನತೆಗೆ ಮುಖ್ಯವಾಗಿ ಬೇಕಾದದ್ದು ಕ್ರಾಂತಿಮಯ ಚಿತ್ರಗಳು. ಕೇವಲ ಪೌರಾಣಿಕ, ಸಾಮಾಜಿಕ ಚಿತ್ರಗಳು ಬೇಕಾಗಿಲ್ಲ; ಇರಲಿ— ಆದರೆ ಅದಕ್ಕಾದರೂ ಒಂದು ಮಿತಿ ಬೇಕಲ್ಲವೇ? ಯಾವುದಕ್ಕಾದರೂ ಒಂದು ಮಿತಿ ಇರಲೇಬೇಕು

ಆದ್ದರಿಂದ ಇಂದಿನ ಚಲಚ್ಚಿತ್ರ ನಿರ್ಮಾಪಕರು ವಿಶೇಷವಾಗಿ ಕನ್ನಡ ಚಿತ್ರ ನಿರ್ಮಾಪಕರು ಇತ್ತಕಡೆಗೆ ಗಮನಿಸಿ ಜನತೆಗೆ ಇಂದು ಬೇಕಾದುದೇನು? ಎಂಥ ಚಿತ್ರಗಳನ್ನು ನಿರ್ಮಿಸಿದರೆ ಜನತೆಯ, ನಾಡಿನ, ನುಡಿಯ ಏಳ್ಗೆಯಾಗುತ್ತದೆ ಇದನ್ನು ಆಳವಾಗಿ ವಿಚಾರಿಸಬೇಕು. ಚಲಚ್ಚಿತ್ರದ ದಿಗ್ದರ್ಶಕತ್ವವು ಸುಲಭ ಸಾಧ್ಯವಿಲ್ಲ. ನುರಿತ-ದಿಗ್ದರ್ಶಕರು ಉತ್ತಮ ನಟ-ನಟಿಯರನ್ನೊಳಗೊಂಡು ಚಿತ್ರವನ್ನು ನಿರ್ಮಿಸಲಿ ಅಂಥ ಚಿತ್ರವೇ ಆದರ್ಶ ಚಿತ್ರ. ಪ್ರಥಮ ಪ್ರಯತ್ನದಲ್ಲಿ ಅದರ ಕೆಲವು ಲೋಪದೋಷಗಳು ಕಂಡುಬರಬಹುದು. ಅವುಗಳನ್ನೆಲ್ಲ ತಿಳಿದುಕೊಂಡು ಮುಂಬರುವ ಚಿತ್ರದಲ್ಲಿ ಈ ಬಗೆಯ ಲೋಪದೋಷಗಳಾಗದಂತೆ ದಕ್ಷತೆ ವಹಿಸಬೇಕು. ಯಾವನೂ ಕೂಡಲೇ ಸರ್ವಜ್ಞನಾಗಲಾರನು. ಪ್ರಯತ್ನ ಮಾಡಲೇಬೇಕು. ಪ್ರಯತ್ನಕ್ಕೆ ತಕ್ಕಂತೆ ತಕ್ಕ ಫಲವು ಸಿಕ್ಕುತ್ತದೆ.

ಆದ್ದರಿಂದ ನವಯುಗದ ಇಂದಿನ ಚಿತ್ರ ನಿರ್ಮಾಪಕರು ಜನತೆಯ ಮೇಲೆ ತಪ್ಪನ್ನು ಹೊರಿಸದೇ ತಮ್ಮಲ್ಲಿಯ ಲೋಪದೋಷಗಳನ್ನು ತೊಡೆದುಹಾಕಲು ಪ್ರಯತ್ನಿಸಲಿ!

ಆದರ್ಶ ಚಿತ್ರಪಟದ ಸ್ವರೂಪ

ಇಲ್ಲಿಯ ವರೆಗೆ ಈಗಿನ ಚಿತ್ರಪಟಗಳಲ್ಲಿಯ ಲೋಪದೋಷಗಳನ್ನು ಬರೆದದ್ದಾಯಿತು ಇನ್ನು ಆದರ್ಶ ಚಿತ್ರಪಟದ ಸ್ವರೂಪ ಹೇಗಿರಬೇಕೆಂಬುದನ್ನು ವಿಚಾರಿಸುವಾ. ಸಮಾಜದಲ್ಲಿಯ ಜನರ ಶೀಲ, ಮನೋವೃತ್ತಿಗಳನ್ನು ಉತ್ತಮ ಮಾರ್ಗಕ್ಕೆ ಒಯ್ಯಲು ಅವರ ಜೀವನದ ಸಂಸ್ಕೃತಿಯ ವಿಚಾರ ಶಕ್ತಿಗಳನ್ನು ಬೆಳೆಸಿ ಅವರ ಬಾಳಿನಲ್ಲಿಯ ಕುಂದುಗಳನ್ನು ತಿದ್ದಿ ಹಸನಾಗಿ ಮಾಡುವಂಥ ಚಲಚ್ಚಿತ್ರಗಳು ಇಂದಿನ ಸಮಾಜಕ್ಕೆ ಬೇಕು. ಮುಖ್ಯವಾಗಿ ಚಿತ್ರಪಟದ ಕಥಾವಸ್ತು ಚನ್ನಾಗಿರಬೇಕು. ಪ್ರಸಿದ್ಧ ಗ್ರಂಥಕಾರರ ಕಥೆ— ಕಾದಂಬರಿಯ ಆಧಾರದ ಮೇಲಿಂದ ಕಥೆಯನ್ನು ಹೆಣೆಯಲ್ಪಡಬೇಕು. ಚಲಚ್ಚಿತ್ರದ ಕಥೆಯು ಮಿತಿಯನ್ನು ನೋಡಿಯು ನಾನಾ ಸಂಗತಿಗಳಿಂದಲೂ ಅಲಂಕರಿಸಲ್ಪಟ್ಟು ಮನೋರಂಜನೆಯ ಜತೆಗೆ ಸಮಾಜ ಸುಧಾರಣೆಗಾಗಿ ಸಲಹೆಗಳನ್ನು ಸೂಚಿಸುವಂತಿರಬೇಕು ಚಿತ್ರಪಟದಲ್ಲಿ ಹಾಸ್ಯಕಲೆ ಪ್ರೇಮಗಳಿಗೆ ಮಿತಿ ಇರಲೇಬೇಕು. ಸಂದರ್ಭವಿದ್ದಲ್ಲಿ ಮಾತ್ರ ಹಾಸ್ಯಪ್ರೇಮಗಳ ಉಪಯೋಗ ಮಾಡಿಕೊಳ್ಳಬೇಕು. ಕಥಾ ಲೇಖಕರು ತಮ್ಮ ಕಥೆಯ ಅರ್ಥವನ್ನೂ ಚನ್ನಾಗಿ ವಿಮರ್ಶಿಸಿ ಅದರ ಬೆಲೆಯನ್ನೂ ತಿರುಳನ್ನೂ ಪ್ರೇಕ್ಷಕರು ಅರಿತುಕೊಳ್ಳುವಂತೆ ನೋಡಿಕೊಳ್ಳಬೇಕು. ಚಲಚ್ಚಿತ್ರವು ಕಲೆಯಲ್ಲಿಯ ಒಂದು ಭಾಗವು. ಉಜ್ವಲ ವಿಚಾರಗಳ ಸಂಚಯವು ಕಥೆಯಲ್ಲಿ ಸೇರಿರಬೇಕು.

ಆದ್ದರಿಂದ ಇಂದಿನ ಚಿತ್ರ ನಿರ್ಮಾಪಕರು ಇತ್ತ ಗಮನಿಸಿ ತಮ್ಮಲ್ಲಿಯ ಲೋಪದೋಷಗಳನ್ನು ಸರಿಪಡಿಸಿಕೊಂಡು ಚಿತ್ರಗಳನ್ನು ನಿರ್ಮಿಸಲಿ. ಅಂಥ ಚಿತ್ರಗಳು ಆದರ್ಶ ಚಿತ್ರಗಳಾಗಲಿ, ನಾಡಿನ ನುಡಿಯು ಪ್ರಗತಿಯಾಗಲಿ. ಕನ್ನಡ ಚಲಚ್ಚಿತ್ರದ ಪ್ರಪಂಚದಲ್ಲಿ ಇನ್ನು ಸ್ವಲ್ಪ ಪ್ರಗತಿಯಾಗಲಿ ಸಂಸ್ಕೃತಿಯು ಹಿರಿಮೆಯ ಮಾರ್ಗ ಹಿಡಿಯಲಿ.

ಸೊಹ್ರಾಬ್ ಮೋದಿಯ ತಯಾರಿಕೆ

ಒಂದು ವರ್ಷ ತಣ್ಣಗೆ ಕುಳಿತಿದ್ದು ಈಗ ಸೊಹ್ರಾಬ್ ಮೋದಿ ಚಿತ್ರ ತಯಾರಿಕೆಗೆ ಭರದಿಂದ ಪ್ರಾರಂಭಿಸಿದಂತಿದೆ ಒಂದೇ ಸಲ ೩ ಚಿತ್ರಗಳನ್ನು ತಯಾರಿಸಲು ಅವನು ಹೊರಟಿದ್ದಾನೆ.

೩ ರಲ್ಲಿ ಮೊದಲನೆಯದು ಒಂದು ಸಾಮಾಜಿಕ ವಸ್ತು ನಿಬದ್ಧವಾದ ಸುಕುಮಾರ ಪ್ರಯೋಗ (Comedy) ಕಥೆಯನ್ನು ಬರೆದು ದಿಗ್ದರ್ಶನ ಮಾಡಿದವರು ವಿಶ್ರಾಮ ಬೇಡೇಕರರು. ಅವರು ಕೌಟುಂಬಿಕ ಸುಕುಮಾರ ರೂಪಕಗಳ ಮತ್ತು ಸಾಮಾಜಿಕ ವ್ಯಂಗ್ಯ ಪ್ರಯೋಗಗಳ ದಿಗ್ದರ್ಶನದಲ್ಲಿ ಹೆಸರು ತೆಗೆದುಕೊಂಡವರು. ಮಿನರ್ವದ ಬಾವುಟದ ಕೆಳಗೆ ಸೆಂಟ್ರಲ್ ಸ್ಟುಡಿಯೋದಲ್ಲಿ ಮೋತೀಲಾಲ ಮತ್ತು ನಯನ ತಾರೆಯರ ಮುಖ್ಯಪಾತ್ರ ನಿರ್ವಹಣದೊಡನೆ ಈ ಚಿತ್ರವು ತಯಾರಾಗುತ್ತಿದೆ

೨ ನೆಯ ಚಿತ್ರವಾದ ದೌಲತ್ತು ಒಂದು ಮದುವೆಯ ಮಂಗಲದಿಂದ ಕೊನೆಗೊಳ್ಳುತ್ತದೆ ಕಥನಕಾರರು ಆಚಾರ್ಯ ಅತ್ರೆಯವರು. ಅವರು ಒಳ್ಳೆ ಚಿತ್ರಕಥಾ ಲೇಖಕರೂ ಹಾಸ್ಯ ಪ್ರಬಂಧಕಾರರೂ ಎನಿಸಿದವರು ಮಿನರ್ವದ ಧ್ವಜದಡಿಯಲ್ಲಿ ಸೊಹ್ರಾಬ್ ಮೋದಿಯೇ ಸ್ವಂತ ಇದರ ದಿಗ್ದರ್ಶನವನ್ನು ವಹಿಸಿಕೊಂಡಿದ್ದಾನೆ. ಇದರಲ್ಲಿ ಮಹುಬಲ, ಮಹೀಪಾಲ ಮತ್ತು ಜಾನಕಿದಾಸ ಇವರು ಪಾತ್ರ ವಹಿಸಿದ್ದಾರೆ.

೩ ನೆಯದು ಭಕ್ತ ಪ್ರಹ್ಲಾದ. ಇದರ ಕಥೆ ಶ್ರೀ ಎಸ್. ಎ. ಶುಕ್ಲರ ಕಥೆಯನ್ನು ಆಧರಿಸಿದೆ. ಸೆಂಟ್ರಲ್ ಸ್ಟುಡಿಯೋದ ಧ್ವಜದಡಿಯಾದರೂ ತಯಾರಾಗುತ್ತಿರುವುದು ಮಿನರ್ವದಲ್ಲಿ ಅದರಲ್ಲಿ ಶೋಭನಾ ಸಮರ್ಥ, ಮಹೀಪಾಲ, ಲಕ್ಷ್ಮಣ ಮತ್ತು ಶರ್ಮ ಇವರು ಪ್ರಧಾನ ಪಾತ್ರಗಳನ್ನು ವಹಿಸಿರುವರು. ಇದನ್ನು ಮೋದಿ ಸ್ವತಃ ದಿಗ್ದರ್ಶನ ಮಾಡುತ್ತಾನೆ ಶ್ರೀ ವೈ. ಡಿ. ಸರಪೋತದಾರರಿಗೆ ಸಹದಿಗ್ದರ್ಶಕರಾಗಿ ಕೆಲಸ ಮಾಡಲು ಅವಕಾಶ ಕೊಡಲಾಗಿದೆ.

ವೆಸ್ಟರ್ನ್ ಇಂಡಿಯಾ ಥಿಯೇಟರ್ಸ್

ಮೇಲಿನ ಕಂಪನಿಯು ರಣಜಿತದ "ಪಿಯಾ ಘರ್ ಆಜಾ"ವನ್ನು ಈಗ ಹೊರಡಿಸಿದೆ. ಇದು ಮುಂಬಯಿಯ ಸೆಂಟ್ರಲ್ದಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಇನ್ನೊಂದೆಂದರೆ, "ಬಂಗ್ಡಾದ್ ಕಾ ಚೋರ್" ಎಂಬ ಬಣ್ಣದ ಚಿತ್ರ, ತಯಾರಾಗುತ್ತಿದೆ.

ಅತ್ರೇಚಿ ಜಮ್ನಾದವರ ಗಾವೋ ಎಂಬ ಚಿತ್ರಕ್ಕೆ ದಿಲ್ಲಿ, ಸಂಯುಕ್ತಪ್ರಾಂತ ಮತ್ತು ಪೂರ್ವ ಪಂಜಾಬುಗಳನ್ನು ಬಿಟ್ಟು ಹಿಂದುಸ್ತಾನದ ಉಳಿದ ಎಲ್ಲೆಡೆ ಮತ್ತು ಪಾಕಿಸ್ತಾನದಲ್ಲಿ ವಿತರಣಾಧಿಕಾರ ಸಿಕ್ಕಿದೆ ಭಾಂತದವರ "ಪ್ರೇಯಸಿ" ಎಂಬ ಚಿತ್ರಕ್ಕೂ ಹೀಗೆ ಭಾರತ, ಬ್ರಹ್ಮದೇಶ, ಸಿಂಹಳ ಮತ್ತು ಪಾಕಿಸ್ತಾನಗಳಲ್ಲಿ ವಿತರಣಕ್ಕೆ ತೆಗೆದುಕೊಳ್ಳಲಾಗಿದೆ

ಶ್ರೀಮತಿ ಬರ್ನಾರ್ಡ್ ಶಿನ್‌ಬರ್ಗರು ತನ್ನ ೫೬ ನೇಯ ವರ್ಷ ವಯಸ್ಸಿನಲ್ಲಿ ೬೯ ಮಕ್ಕಳನ್ನು ಹಡೆದು ಸತ್ತಳು, ಇವಳು ಈಗ ಸುಮಾರು ೪೦ ವರ್ಷಗಳ ಹಿಂದೆ ಅಸ್ತಿಯದಲ್ಲಿದ್ದಳು ಅವಳು ನಾಲ್ಕುಸಲ ಒಮ್ಮೆಗೆ ನಾಲ್ಕು ಮಕ್ಕಳನ್ನೂ ೭ ಸಲ ಮೂರು ಮೂರನ್ನೂ ೧೬ ಸಲ ಅವಳಿಗಳನ್ನೂ ಹಡೆದಳು. ಅವಳ ಗಂಡ ಇವಳಲ್ಲಿ ೬೯ ಅಲ್ಲದೆ ಎರಡನೆಯ ಹೆಂಡತಿಯಲ್ಲಿ ೧೮ ಮಕ್ಕಳನ್ನು ಪಡೆದನು. ಅವನು ತನ್ನ ೭೭ ನೆಯ ವಯಸ್ಸಿನಲ್ಲೂ ಆರೋಗ್ಯದೃಢಕಾಯನೂ ಪ್ರಸನ್ನನೂ ಆಗಿ ತನ್ನ ೮೭ ಹೆಣ್ಣುಗಂಡು ಮಕ್ಕಳೊಡನೆ ಸುಖವಾಗಿದ್ದನು.

ಭವಿಷ್ಯ

ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಮೇ ೩೧ ರಿಂದ ಜೂನ ೬ ರ ವರೆಗೆ

ಮೇಷ

ಸ್ವತಃ ನಿಮಗೆ ಪಿತ್ತದಿಂದ ತೊಂದರೆಯಾದರೆ ಹೆಂಡತಿಗೆ ಮೈಚಳಕು ಹಿಡಿಯುವದರಿಂದ ಬಹಳ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಯೋಗ್ಯ ಸಲಹೆ ಕೊಡುವವರ ಸಹವಾಸ ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮನಸ್ಸಿನಂತೆ ದುರ್ಘಟವೆನಿಸುವಂಥ ಒಂದು ಕೆಲಸ ಅಲ್ಪಾಯಾಸದಿಂದ ಸಾಧ್ಯವಾಗುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ತೊಂದರೆ ಬಹಳ. ಆದರೆ ಕೊನೆಯಲ್ಲಿ ನಿಮಗೇ ಯಶಸ್ಸು ಸಿಕ್ಕುವಂತೆ ಅನುಕೂಲತೆ. ಮಿತ್ರಸುಖ ಅನುಕೂಲ. ಆದರೆ ಅವರಲ್ಲಿ ಒಬ್ಬರು ಪ್ರಾಪಂಚಿಕ ಆಪತ್ತಿಯಲ್ಲಿ ಹುರಳಿಸಿಹೋಗುವ ಸುದ್ದಿ. ಪ್ರವಾಸಾದಿಕೆಲಸ ಸುಖದ್ದು. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೩೧, ೪, ೫, ೬ ಅನುಕೂಲ.

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಕೆಲ ಬಹುಮೂಲ್ಯ ವಸ್ತುವಿನ ಇಲ್ಲವೆ ಬಹಳ ದ್ರವ್ಯ ಲಾಭ ಅಕಲ್ಪಿತವಾಗಿ ಆಗುವ ಸಂಭವ ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆಯಲ್ಲಿ ಕೆಲವೊಂದು ಬಗೆಯ ಕೊರತೆ. ಮಕ್ಕಳಲ್ಲಿ ಮತ್ತು ಮಿತ್ರರಲ್ಲಿ ಉನ್ನತಿ ವಾಹನದಿಂದ ತೊಂದರೆ ಇಲ್ಲವೆ ಹಾನಿ. ನಿಮ್ಮ ಅಹಿತ ಬಯಸುವ ಒಬ್ಬ ಅತಿಥಿ ಮನೆಗೆ ಬರುವ ಸಂಭವ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಾದಿ ಕೆಲಸ ಅನುಕೂಲ. ಕೃತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧, ೨, ೩, ೬ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳು ವಿಪರೀತ ಕಟಕಟಿಯುಂಟಾಗುವಂತೆ ವರ್ತಿಸುವರು ಅಲ್ಲದೆ ಪ್ರಾಪಂಚಿಕ ನಿತ್ಯದ ವ್ಯವಹಾರ ನಿಂತುಬಿಡುವ ಬಹಳ ಸಂಗತಿಗಳು ಸಂಭವಿಸುವವು. ಉದ್ಯೋಗದಲ್ಲಿ ಪ್ರಗತಿ ಕುಂಟುತ್ತ ಸಾಗುವದು ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಿಶೇಷ ಹೊಣೆಗಾರಿಕೆ ಮೈಮೇಲೆ ಬೀಳುವಂಥ ಕೆಲಸ ಮಾಡಬೇಕಾದ ಸರತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ದಗದಗಿ ಮತ್ತು ವೆಚ್ಚ ಹೆಚ್ಚು. ಆದರೆ ವಾತಾವರಣ ಯಶಕ್ಕೆ ಪೋಷಕವಾದಂತಹದು. ಮಿತ್ರ, ಸುಖ ಅನುಕೂಲ. ವಿಶೇಷ ಬುದ್ಧಿವಂತರ ಸಹವಾಸ, ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮೃಗಾದ ೪ ನೆ ಮತ್ತು ಆರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ ೧, ೨, ೩, ೪ ಅನುಕೂಲ.

ಕರ್ಕ

ಪ್ರಕೃತಿಗೆ ಕಿರಕುಳ ಕ್ಲೇಶ. ಪ್ರಾಪಂಚಿಕ ವಿಷಯಗಳಲ್ಲಿ ಹೆಂಡತಿಗೂಡ ಮೇಲಿಂದ ಮೇಲೆ ವಿರೋಧ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮೇಲೆ ಮೇಲೆ ಅನುಕೂಲವೆನಿಸಿದರೂ ಒಳಗಿಂದೊಳಗೆ ಬಹಳ ತೊಂದರೆಯದು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ. ಆದರೆ ಲಾಭ ಬಹಳ ಕಡಮೆ. ವೆಚ್ಚ ಮಾತ್ರ ಇಮ್ಮಡಿಮುಮ್ಮಡಿ ಮಾಡಬೇಕಾದ ಪ್ರಸಂಗ. ಧಂದೆಯವರಿಗಿಂತ ನೋಕರರಿಗೆ ತೊಂದರೆ ಕಡಮೆ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಕಡಮೆ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಪುಷ್ಯದ ೪ ನೆ ಮತ್ತು ಆಶ್ಲೇಷದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ ೪, ೫ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯದು ಬಹಳ ಕೆಡುತ್ತ ಹೋಗುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ ದೊರೆತ. ಮಕ್ಕಳಲ್ಲಿ ಉನ್ನತಿ ವಿದ್ಯಾಂತರ ಸಹವಾಸ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ. ಬಹಳ ಪ್ರತಿಷ್ಠೆ ಮತ್ತು ಕುಂಟ ಲಾಭ ಮಿತ್ರ ಸುಖ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವಲ್ಪ ಹಿಮ್ಮೆಟ್ಟುವದು. ಪ್ರವಾಸಾದಿ ಕೆಲಸ ಹಿತದ್ದು ಮಘಾದ ೪ ನೆ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೪, ೫, ೬, ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಮಕ್ಕಳಲ್ಲಿ ಉನ್ನತಿ. ಆದರೂ ಪ್ರಾಪಂಚಿಕ ಕಟಕಟಿ ದಿನ ದಿನಕ್ಕೆ ಹೆಚ್ಚುತ್ತ ನಡೆಯುವದು. ಸ್ಥಾವರದಲ್ಲಿ ಹೆಚ್ಚಳ. ಆದರೆ ರೋಖದಲ್ಲಿ ಮನಸ್ಸು ಅಸ್ವಸ್ಥವಾಗುವ ಘಟನೆಗಳು ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ವೆಚ್ಚ ವಿಪರೀತ ಮತ್ತು ನಿರರ್ಥಕ ಸಂಗತಿಗಳಲ್ಲಿ ಬಡಿದಾಟ ಮತ್ತು ಹೊಡೆದಾಟ ಪ್ರಸಂಗ. ಮೇಲಿಂದಮೇಲೆ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮಿತ್ರರು ನಿರರ್ಥಕ ಮತ್ತು ಅನಾವಶ್ಯಕ ಕೀಡಿ ಇಡುವದು. ಪ್ರವಾಸಾದಿ ಕೆಲಸ ಅನುಕೂಲ. ಉತ್ತರಾದ ೪ ನೆ ಮತ್ತು ಹಸ್ತದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧, ೨, ೬ ಅನುಕೂಲ

ತುಲಾ

ಪ್ರಕೃತಿ ಉತ್ತಮ ಪ್ರಾಪಂಚಿಕ ಸುಖ ಅನುಕೂಲ. ಕಠಿಣ ಕೆಲಸಗಳೂ ಅನಾಯಾಸವಾಗಿ ಮನಸ್ಸಿನಂತೆ ಆಗುವ ಸುಯೋಗ ಹೆಂಡತಿಯ ಸ್ವಭಾವದಲ್ಲಿ ಸ್ವಲ್ಪ ಗರ್ವ ಮತ್ತು ಎರಡನೆಯವರ ಬಗ್ಗೆ ಉಪೇಕ್ಷೆ. ಉದ್ಯೋಗದಲ್ಲಿ ಪ್ರಗತಿ ಬಹಳ ಒಳ್ಳೆ ಪ್ರತಿಷ್ಠೆ ಮತ್ತು ಕುಂಟ ಲಾಭ. ಅವಚಿತ ಲಾಭದ ಸಂಭವವೂ ಇದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಪ್ರವಾಸಾದಿ ಕೆಲಸ ಸುಖದ. ಚಿತ್ತಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೩೧, ೪, ೫ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ಹೆಂಡತಿ ಮತ್ತು ಮಕ್ಕಳ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಅವಚಿತ ಲಾಭದ ಸಂಭವವುಂಟು. ಕೆಲ ಧಾರ್ಮಿಕ ಇಷ್ಟವೆ ಮಂಗಳ ಕಾರ್ಯಗಳು, ಪ್ರಿಯಜನರ ಸಹವಾಸ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ; ಸ್ವಪ್ನ ಶುಭ ಮತ್ತು ಭಾವೀಸೂಚಕ ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ ೧, ೨, ೩, ೬ ಅನುಕೂಲ.

ಧನು

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ. ಆದರೆ ಮಕ್ಕಳಿಂದ ತೊಂದರೆಯ ವರ್ತನೆ ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಸಾಮಾನ್ಯ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಧಂದೆಯವರಿಗೆ ಹೆಚ್ಚು ಅನುಕೂಲ. ಮಿತ್ರಸುಖ ಉತ್ತಮ. ಸ್ಥಾವರದಲ್ಲಿ ಅನುಕೂಲ ಘಟನೆಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮೂಲಾದ ೪ ನೇ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೩೧, ೪, ೫ ಅನುಕೂಲ.

ಮಕರ

ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳಿಗೂಡ ಮೇಲಿಂದ ಮೇಲೆ ತಿಕ್ಕಾಟದ

(೧೨ ನೆಯ ಪುಟಕ್ಕೆ)

ಇಲಿ, ಮಿಡತೆಗಳ ಮೇಲೆ ರಾಮಬಾಣ

ಕುರಿಗಳ ಬಳಗ ಹೆಚ್ಚಿಸುವ ಉಪಾಯ

ಇಲಿಗಳ ನಾಶಕ್ಕೆ ಉಪಾಯ

ಜೋಳದ ಹೊಲಗಳಲ್ಲಿ ಬಿತ್ತಿದೊಡನೆ ಇಲಿಗಳು ಬೀಜವನ್ನಾರಿಸಿ ತಿಂದು ಇಲ್ಲವೆ ಸಸಿಗಳನ್ನು ನಾಶಮಾಡಿ ರೈತರಿಗೆ ಕಾಟ ಕೊಡುವದುಂಟು. ಬಿತ್ತನೆಯ ಕಾಲಕ್ಕೆ ಸಮೀಪಿಸಿದಂತೆ ರೈತರಿಗೆ ಈ ಚಿಂತೆ ಸಹಜವಾಗಿ ಬರುತ್ತದೆ. ಧಾರವಾಡ ಜಿಲ್ಲಾ ಒಕ್ಕಲತನ ಅಧಿಕಾರಿ ಶ್ರೀ ಬಿ. ಬಿ. ಯಲಿಗಾರರು ಈ ಬಗ್ಗೆ ಕೆಲ ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಆ ತಾಲೂಕಿನಲ್ಲಿರುವ ಅಗ್ರಿಕಲ್ಚರಲ್ ಅಸಿಸ್ಟಂಟ್ ಹಾಗು ಕಾರ್ಯಕರ್ತರಲ್ಲಿ "ಬೇರಿಯಂ ಕಾರ್ಬೋನೇಟ್" ಎಂಬ ವಿಷದ ಪುಡಿ ಪೌಂಡಿಗೆ ೦—೧೦ ಆ ಯಂತೆ ಸಿಗುತ್ತದೆ. ಔಷಧ ಅಂಗಡಿಗಳಲ್ಲಿಯೂ ಬೇಕಾದರೆ ಕೊಳ್ಳಬಹುದು. ಈ ಪುಡಿ ೧ ಪಾಲು, ಬಿಳಿ ಜೋಳದ ಹಿಟ್ಟು ೮ ಪಾಲು ಮತ್ತು ಶೇಂಗಾದ ಕಾಳಿನ ಪುಡಿ ಅರ್ಧ ಪಾಲು ಹೀಗೆ ಸೇರಿಸಿ ಸ್ವಲ್ಪ ನೀರು ಬೆರಸಿ ಸಣ್ಣ ಗೋಲಿ ಗುಂಡಿನಷ್ಟು ಆಕಾರದ ಗುಳಿಗೆಗಳನ್ನು ಮಾಡಬೇಕು. ಹೊಲದಲ್ಲಿರುವ ಪ್ರತಿಯೊಂದು ಇಲಿಯ ಬಿಲದಲ್ಲಿ (ಗುದ್ದು) ಎರಡೆರಡು ಮೂರು ಮೂರು ಗುಳಿಗೆಯಂತೆ ಹಾಕಬೇಕು. ಇದನ್ನು ತಿಂದ ಇಲಿಗಳೆಲ್ಲ ನಿಶ್ಚಯವಾಗಿ ನಾಶವಾಗುವವು. ಬಿತ್ತುವ ಮೊದಲೇ ಈ ಉಪಾಯ ಮಾಡಿದರೆ ಪೀಕಿನಲ್ಲಿ ನೂರಕ್ಕೆ ೫೦ ರ ವರೆಗೂ ಆಗ ಬಹುವಾದ ಹಾನಿಯನ್ನು ಉಳಿಸಬಹುದು. ಬಹಳಾದರೆ, ಎಕರೆ ಹೊಲಕ್ಕೆ ಅರ್ಧ ಪೌಂಡು ವಿಷ ಪುಡಿ ಬೇಕಾದೀತು. ಇದು ಭಯಂಕರ ವಿಷವಾದ್ದರಿಂದ ಔಷಧ ತಯಾರಿಸಿದೊಡನೆ ಕೈಯನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ಮಕ್ಕಳ ಕೈಗೆ ಗುಳಿಗೆಗಳು ಸಿಗದಂತೆ ಎಚ್ಚರಿಕೆಯಿರಲಿ.

ಮಿಡತೆಗಳಿಗೆ ರಾಮಬಾಣ

ಮಿಡತೆಗಳೇನು ಜೋಳದ ಬೆಳೆಗಳಿಗೆ ಚಿಲ್ಲರೆ ಶತ್ರುಗಳಲ್ಲ. ಅವುಗಳ ಹಾವಳಿಯನ್ನು ತಡೆಯಲು ಚೀಲಗಳನ್ನೆಳೆಯುವದೇ ಮೊದಲಾದ ಉಪಾಯಗಳನ್ನು ಈ ವರೆಗೆ ಕೈಕೊಳ್ಳಲಾಗುತ್ತು. ಆದರೆ ಅವು ಪೂರ್ಣ ಯಶಸ್ವಿಯಾಗಲಿಲ್ಲ. ಕಳೆದ ಒಂದು ವರ್ಷದಿಂದ ಒಕ್ಕಲತನ ಖಾತೆಯವರು ಪ್ರಯೋಗನಡೆಸಿ ಮಿಡತೆಗಳ ವಂಶವನ್ನೇ ನಾಶಮಾಡುವ ಹಾದಿಯನ್ನು ಕಂಡು ಹಿಡಿದಿದ್ದಾರೆಂದು ಶ್ರೀ ಯಲಿಗಾರರು ಪ್ರಸಿದ್ಧಿಸಿದ್ದಾರೆ. ಯೋಗ್ಯ ವೇಳೆಯಲ್ಲಿ "ಹೆಕ್ಸೆಲ್ಲಾನ್" ಎಂಬ ವಿಷದ ಪುಡಿಯನ್ನು ಬೆಳೆಯ ಮೇಲೆ ಹೊದೆದರೆ ಮಿಡತೆಗಳು ನಾಶವಾಗಿ ಹೋಗುವವು. ಎಕರೆಗೆ ೮ ಪೌಂಡ್ ಪುಡಿ ಬೇಕಾಗುತ್ತಿದ್ದು ಅದರ ಬೆಲೆ ಪೌಂಡಿಗೆ ೦—೪—೧೦ ಇದ್ದರೂ ಧಾರವಾಡ ಜಿಲ್ಹೆಯಲ್ಲಿ ಮಿಡತೆಗಳು ನಡೆಸುವ ಉಪದ್ರವವನ್ನು ಲಕ್ಷಿಸಿ ಸರಕಾರದವರು ಜಿಲ್ಹೆಯಲ್ಲಿ ೧೦ ಕೇಂದ್ರಗಳನ್ನು ತೆರೆದು ರೂಪಾಯಿಗೆ ೧೦ ಪೌಂಡಿನಂತೆ ಅಗ್ಗವಾಗಿ ಈ ಪುಡಿಯನ್ನು ಮತ್ತು ಅದನ್ನು ಹೊಡೆಯುವ ಡಸ್ಟರುಗಳನ್ನು ಆ ಕೇಂದ್ರಗಳಲ್ಲಿ ಇಡುವ ವ್ಯವಸ್ಥೆ ಮಾಡಿದ್ದಾರೆ. ಎಕರೆಗೆ ಐದಿ ೦—೧೦—೦ ವೆಚ್ಚ ಹಿಡಿಯುವದು. ರೈತರು ಒಟ್ಟೊಟ್ಟಿರಾಗಿ ಇದರ ಉಪಯೋಗ ಪಡೆವ ಐದಲು ಅಲ್ಲಲ್ಲಿ ಸಂಘಟಿತರಾಗಿ ಕೆಲಸ ನಡೆಸುವದು ಲಾಭಕರ. ಪ್ರತಿ ಕೇಂದ್ರದಲ್ಲಿ ದೈವ ಅಧಿಕಾರಿಗಳು ಅದನ್ನು ಉಪಯೋಗಿಸುವ ಕ್ರಮವನ್ನು ತೋರಿಸಿಕೊಡುವರು. ಬೇರೆ ಜಿಲ್ಹೆಯವರೂ ಈ ಪುಡಿಯ ಉಪಯೋಗವನ್ನು ಸ್ವತಂತ್ರವಾಗಿ ಮಾಡಿ ಮಿಡತೆಯನ್ನು ನಿರ್ನಾಮಮಾಡಬಹುದು.

ಟ್ರ್ಯಾಕ್ಟರುಗಳ ಮೇಲೆ ದೋರು

ಯುರೋಪ ಮತ್ತು ಅಮೇರಿಕ ದೇಶಗಳಲ್ಲಿ ಟ್ರಾಕ್ಟರುಗಳನ್ನು (ಉಳುವಯಂತ್ರ) ಉಪಯೋಗಿಸಿ ರೈತರು ಲಾಭ ಪಡೆದಂತೆ ನಾವೂ ಪಡೆಯಬೇಕೆಂದು ರೈತರಿಗೆ ಮೇಲಿಂದ ಮೇಲೆ ಉಪದೇಶ ಕೊಡಲಾಗುತ್ತಿದೆ. ಟ್ರ್ಯಾಕ್ಟರ ಉಳುಮೆಯಿಂದ ಹೊಲದ ಕರಿಕೆ (ಕಳೆ) ನಾಶವಾಗುವದೆಂದು ಅದರ ಗುಣವನ್ನು ಬಣ್ಣಿಸುತ್ತಾರೆ. ಆದರೆ ಶಾಲವಾಡದ (ಧಾರವಾಡ ಜಿಲ್ಹೆ) ೪೦ ರೈತರು ಕಳೆದ ವರ್ಷ ಸರಕಾರದ ಟ್ರ್ಯಾಕ್ಟರದಿಂದ ಸುಮಾರು ಒಂದು ಸಾವಿರ ಎಕರೆ ಭೂಮಿಯ ಉಳುಮೆ ಮಾಡಿಸಿ ಬೇರೆಯೆ ಅನುಭವ ಪಡೆದರು. ಕರಿಕೆ ನಾಶವಾಗುವ ಬದಲು ಅದು ತಿರುಗಿ ಚಿಗಿತು ೮—೧೦ ಸಾವಿರ ರೂ ಖರ್ಚು ಮಾಡುವ ಪ್ರಸಂಗ ಬಂದು ಮೊದಲಿದ್ದ ಸ್ಥಿತಿಯಲ್ಲಿ ಹೊಲಗಳು ಉಳಿದವೆಂದು ಆ ರೈತರು ಸರಕಾರಕ್ಕೆ ದೂರಿಕೊಂಡಿದ್ದಾರೆ. ಟ್ರ್ಯಾಕ್ಟರ ಉಳುಮೆಯಲ್ಲೇ ಮೂಲಭೂತ

ದೋಷಗಳಿವೆಯೆಂದು ತೋರುವದಿಲ್ಲ. ಆದರೆ ೧೫ ಇಂಚಿನಷ್ಟು ಭೂಮಿಯಲ್ಲಿ ಇಳಿಯ ಬೇಕಾಗಿದ್ದ ನೇಗಿಲು ೬ ರಿಂದು ೧೦ ಇಂಚಿನ ವರೆಗೆ ಮಾತ್ರ ಇಳಿದದ್ದರಿಂದ ಕರಿಕೆ ಬೇರು ಸಹಿತ ಕಿತ್ತು ಬರಲಿಲ್ಲವೆಂದೂ ಅದರಿಂದ ಅದಕ್ಕೆ ತಿರುಗಿ ಚಿಗುರಲು ಅವಕಾಶ ದೊರೆಯಿತೆಂದೂ ಅವರು ಹೇಳುತ್ತಾರೆ. ಈ ಎಲ್ಲ ಸಂಗತಿಗಳು ಈ ಹೊಸ ಉಪಕರಣಗಳ ನಿರುಪಯುಕ್ತತೆಯನ್ನು ಸಿದ್ಧಮಾಡಿ ತೋರಿಸುವದಿಲ್ಲವಾದರೂ ಅನುಭವವಿಲ್ಲದವರು ಈ ಹೊಸ ಪ್ರಯೋಗಗಳಿಗೆ ಕೈಹಾಕಿದರೆ ಅವು ಯಶಸ್ವಿಯಾಗುವದು ಕಠಿಣವೆಂದು ಇದರಿಂದ ಗೊತ್ತಾಗುತ್ತದೆ. ಜೋರೀಗೌಡ ಸ್ವಭಾವಿಕವಾಗಿ ಇದ್ದಂತೆ ಇರಲಿ ಎಂಬ ಮನೋವೃತ್ತಿಯವ ಎಲ್ಲ ಬದಲಾವಣೆಗಳನ್ನು ಅವನು ಸಂಶಯದಿಂದಲೇ ನೋಡುತ್ತಾನೆ. ಅವನು ಹೊಸಪದ್ಧತಿಗೆ ಒಲಿಯಬೇಕಾದರೆ ಬರಿ ಒಕ್ಕಲತನ ಖಾತೆಯ ಕಾಗದದ ಕುದುರೆಗಳ ಓಡಾಟ ಸಾಲದು. ಯಾರಾದರೂ ಹೊಸ ಪದ್ಧತಿಗಳನ್ನು ಪ್ರಯೋಗದಲ್ಲಿ ತೋರಿಸಿ ಅವು ನಿಜವಾಗಿ ಹಳೆ ಪದ್ಧತಿಗಿಂತ ಹೊಸದು ಲಾಭಕರವೆಂದು ತೋರಿಸಿಕೊಡಬೇಕು. ನಮ್ಮ ಒಕ್ಕಲತನ ಕಾಲೇಜಿನಿಂದ ಹೊರಬೀಳುವ ವಿದ್ಯಾರ್ಥಿಗಳು ಸರಕಾರಿ ನೌಕರಿಗೆ ಕೈಚಾಚಿ "ಸಾಹೇಬಗಿರಿ" ನಡೆಸುವ ಹವ್ಯಾಸ ಬಿಟ್ಟು ಬಿಡಬೇಕು ಮತ್ತು ತಮ್ಮ ಹಳ್ಳಿಗಳಿಗೆ ಮರಳಿ ಸ್ವಂತ ಹೊಲಗಳಲ್ಲಿ ಹೊಸ ಪದ್ಧತಿಯನ್ನು ವ್ಯಾಪಾರಿ ದೃಷ್ಟಿಯಿಂದ ಉಪಯೋಗಿಸಿ ಅವುಗಳ ಯೋಗ್ಯತೆಯನ್ನು ಹಳೆ ಪದ್ಧತಿಗೆ ತಕ್ಕೆ ಬಿದ್ದ ವರಿಗೆ ತೋರಿಸಿಕೊಡಬೇಕು. ಇಲ್ಲದಿದ್ದರೆ ಒಕ್ಕಲತನದ ಸುಧಾರಣೆಯೆಲ್ಲ ಕಾಗದದಲ್ಲೆ ಉಳಿಯುವದು ನಿಶ್ಚಯ.

ಕುರಿಗಳ ವಂಶಾಭಿವೃದ್ಧಿ

ಕುರಿಗಳ ಸಂಖ್ಯೆಯನ್ನು ಹೆಚ್ಚಿಸಲು ಒಂದು ಉಪಾಯವನ್ನು ರಶಿಯಾದ ಪ್ರೊ. ಝುವಡೋಸ್ಕಿ ಯವರು ಕಂಡುಹಿಡಿದಿದ್ದಾರೆ. ನಮ್ಮ ಬಡ ಕುರುಬರಿಗೆ ಈ ಸಂಶೋಧನೆಗಳ ಉಪಯೋಗ ಸಿಗಬೇಕಾದರೆ ಎಷ್ಟು ವರ್ಷವೋ. ಆದರೂ ನಮ್ಮ ಕುರುಬರಿಗೆ ಇಂಥ ಸಂಗತಿಗಳು ರುಚಿಸಬಹುದೆಂದು ಇಲ್ಲಿ ಅವರ ಉಪಾಯದ ಸಾರವನ್ನು ಇಲ್ಲಿ ಕೊಡುವೆವು. ಹೆಣ್ಣು ಕುರಿ ಸಾಧಾರಣವಾಗಿ ಒಂದು ಬಾರಿಗೆ ಒಂದೇ ಮರಿ ಇಡುತ್ತದೆ. ಅಪರೂಪವಾಗಿ ಎರಡು ಮರಿ ಇಡುವದುಂಟು. ಸಂಯೋಗವಾಗುವಾಗ ಗರ್ಭಾಶಯದಲ್ಲಿದ್ದ ಬೆಳೆದ ಅಂಡಗಳ ಸಂಖ್ಯೆಯನ್ನೇ ಮರಿಗಳ ಸಂಖ್ಯೆ ಅವಲಂಬಿಸುತ್ತದೆ. ಈಗ, ಬೆಳೆದ ಹೆಣ್ಣು ಕುರಿಯ ಚರ್ಮದೊಳಗೆ ಶ್ಲೇಷ್ಮದ ಇಂಜಕ್ಶನ್ (ಪ್ರಾಣಿಗಳಲ್ಲಿ ಬೆಳವಣಿಗೆಯನ್ನುಂಟುಮಾಡುವದಕ್ಕೋಸ್ಕರ ತಲೆಯಲ್ಲಿರುವ ಒಂದು ಗ್ರಂಥಿಯಿಂದ ಶ್ಲೇಷ್ಮರಸ ಹೊರಡುತ್ತದೆ.) ಕೊಟ್ಟರೆ, ಕುರಿಯ ಗರ್ಭಾಶಯದಲ್ಲಿ ಅನೇಕ ಅಂಡಗಳು ಬೇಗನೆ ಬೆಳೆಯುವವು. ಆ ಮೇಲೆ ಅದರೊಡನೆ ಟಗರಿನ ಸಂಯೋಗ ಮಾಡಿಸಿದರೆ ಮೂರು, ನಾಲ್ಕು ಒಮ್ಮೊಮ್ಮೆ ಏಳು ಮರಿಗಳು ಹುಟ್ಟುವವು. ರಶಿಯಾದಲ್ಲಿ ಈ ಉಪಾಯವನ್ನು ೨೦ ಲಕ್ಷ ಕುರಿಗಳ ಮೇಲೆ ಪ್ರಯೋಗಿಸಿ ಕನಿಷ್ಠ ೫ ಲಕ್ಷ ಕುರಿಮರಿಗಳನ್ನು ಹೆಚ್ಚಿಸಲಾಗಿದೆ. ಇಂಜಕ್ಶನ್ನಿಗೆ ಬೇಕಾದ ರಸವನ್ನು ಇಲಿಗಳಿಂದ ತೆಗೆಯಲಾಗುತ್ತದೆ.

ರೇಲ್ವೆಯ ಮೇಲೆ ರಜಾಕಾರರ ಮುತ್ತಿಗೆ

ಅತ್ಯಾಚಾರ ಲೂಟಿ ಅಪಹರಣ

ನಿಜಾಮು ಸಂಸ್ಥಾನದ ಸ್ಟೇಶನ್ ಗಾಣಗಾಪುರ ಎಂಬಲ್ಲಿ ಮದ್ರಾಸ ಮೇಲ ಗಾಡಿಯ ಮೇಲೆ ತಾ. ೨೨ ರಂದು ರಜಾಕಾರರು ದಾಳಿ ಮಾಡಿದ ವರದಿ ಬಂದಿದೆ. ಹೆಣ್ಣುಮಕ್ಕಳ ಎದೆಗೆ ಖಡ್ಗ ಹಿಡಿದು ಮಂಗಳ ಸೂತ್ರ ಮೊದಲು ಮಾಡಿ ಅವರ ಆಭರಣಗಳನ್ನೆಲ್ಲ ರಜಾಕಾರ ಗೂಂಡರು ಕಸಿದುಕೊಂಡರಂತೆ. ೯ ಜನರಿಗೆ ಗಾಯಗಳಾಗಿದ್ದು ೮ ಜನ ಸ್ತ್ರೀಯರೂ ಇಬ್ಬರು ಹುಡುಗರೂ ಕೆಲ ಜನ ಪುರುಷರೂ ಕಾಣೆಯಾಗಿದ್ದಾರೆ. ದಾಳಿಯು ಅತಿ ಉಗ್ರ ಸ್ವರೂಪದ್ದಾಗಿದ್ದರೂ ನಿಜಾಮು ಪೋಲೀಸರು ದಾಳಿಗಾರರನ್ನು ತಡೆಯಲು ಪ್ರಯತ್ನಿಸಲಿಲ್ಲವಷ್ಟೇ ಅಲ್ಲ ಪ್ರಯಾಣಿಕರಿಗೆ ಸ್ವಲ್ಪ ಸಹ ಸಹಾಯ ನೀಡಲಿಲ್ಲ. ಈ ಬಗ್ಗೆ ಶ್ರೀ ಕುರುವಿಲ್ಲಾ ಥಾಮಸ್ ಎಂಬ ಒಬ್ಬ ಪ್ರತ್ಯಕ್ಷದರ್ಶಿ ಹೀಗೆ ಹೇಳಿದ್ದಾರೆ:—

ರಜಾಕಾರರೆಂದು ಹೇಳಲಾಗುತ್ತಿದ್ದ ಹಾಗೂ ಸಮವಸ್ತ್ರ ಧರಿಸಿದ ೧೨ ಜನ ಶಸ್ತ್ರಧಾರಿಗಳು ಬರ್ಚಿ ಬಂದೂಕಗಳಿಂದ ಗಾಡಿಯ ಮೇಲೆ ಎರಗಿದರು. ಮೊದಲು ಎಂಜೀನಿನ ಹತ್ತರದ ಡಬ್ಬಿಗೆ ಮುತ್ತಲು ಹಿಂದಿನ ಡಬ್ಬಿಯಲ್ಲಿದ್ದವರು ರೇಲ್ವೆ ಹಳಿಯ ಗುಂಟ ಭಯಭೀತರಾಗಿ ಓಡತೊಡಗಿದರು. ಸ್ಟೇಶನ್ನಿನ ಹೊರಗೆ ಸುಮಾರು ೧೦೦ ಜನರು ಶಸ್ತ್ರಧಾರಿಗಳಾಗಿ ದಾಳಿಗಾರ ಗುಂಡರಿಗೆ ಸಹಾಯ ಮಾಡಲು ಸಿದ್ಧರಾಗಿ ನಿಂತಿದ್ದರು. ದಾಳಿಗಾರರು ೩ ನೇ ೩ ನೇ ವರ್ಗಗಳ ಡಬ್ಬಿಗಳಲ್ಲಿ ಹೊಕ್ಕು ಪ್ರಯಾಣಿಕರನ್ನು ಹೊರಗೆಳೆದು ಅವರನ್ನು ಥಳಿಸಿದರು. ಖಡ್ಗಗಳನ್ನು ಎದೆಗಿಟ್ಟು ಸ್ತ್ರೀಯರ ಆಭರಣಗಳನ್ನೆಲ್ಲ ಕಸಿದುಕೊಂಡರು. ಹಿಂದಿನ ಸ್ಟೇಶನ್ನಿನಲ್ಲಿಯೇ ಮುಸಲ್ಮಾನ ಪ್ರವಾಸಿಕರಿಗೆ ಕೆಳಗಿಳಿಯ ಹೇಳಿ ಅವರಿಗೆ ಮುಂದೆ ಪ್ರವಾಸ ಬೆಳಸಬೇಡಿರೆಂದು ಹಿತೋಪದೇಶ ಮಾಡಿದರು. ದಾಳಿಗಾರರು ಮೊದಲು ಡ್ರಾಯವರನನ್ನು ಕೆಳಗಿಳಿಸಿ ತೆಪ್ಪಗಿರಬೇಕೆಂದು ಸ್ಟೇಶನ್ ಮಾಸ್ತರನನ್ನು ಬೆದರಿಸಿದರು. ೩ ನೇ ವರ್ಗದ ಒಬ್ಬ ಗೃಹಸ್ಥನು ಇದು ಉಚಿತವಲ್ಲವೆಂದು ಅಂಗಲಾಚಿ ಬೇಡಿಕೊಳ್ಳಲು ಅವನ ಬೆನ್ನಿಗೆ ಬರ್ಚಿಯನ್ನು ಚುಚ್ಚಿ ಅವನನ್ನು ಪ್ಲಾಟಫಾರ್ಮಿನ ಮೇಲೆ ಆಳೆದೊಗೆದರು. ಹಿಂದೀ ಸೈನ್ಯ ಪಡೆಯ ಲೆಪ್ಟಿನೆಂಟ ಭಾಟಿ ಎಂಬವನಿಗೆ ಮೋರೆಯ ಮೇಲೆ ಹೊಡೆತ ಬಿದ್ದು ಅವನು ಗಾಯಗೊಂಡಿದ್ದಾನೆ.

ಅರ್ಧದಷ್ಟು ಗಾಡಿಯ ಲೂಟಿ ಆದ ಮೇಲೆ ಪ್ಲ್ಯಾಟಫಾರ್ಮಿನ ಮೇಲಿದ್ದ ಒಬ್ಬ ಮುಸಲ್ಮಾನ ಪ್ರತಿಷ್ಠಿತನು ನಡುವೆ ಬಂದಂತೆ ನಟಿಸಿ ದಾಳಿಯನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳಲು ದಾಳಿಗಾರರು ಗೊಂದಲ ನಿಲ್ಲಿಸಿದರು. ೧ ನೇ ವರ್ಗದಲ್ಲಿದ್ದ ಒಬ್ಬ ಆರಬನನ್ನು ಮುಂದೆ ಗಂಡಾಂತರವಿದೆಯೆಂದು ಹೇಳಿ ಮೊದಲೇ ಇಳಿಸಿಕೊಳ್ಳಲಾಗಿತ್ತು.

ದಾಳಿ ನಡೆದಾಗ ಗಾರ್ಡನು ಗಾಡಿಯನ್ನು ಹೊರಡಿಸಲು ೩ ಸಲ ಯತ್ನಿಸಿದನು. ಆದರೂ ಸಾಧ್ಯವಾಗಲಿಲ್ಲ. ಆ ಮೇಲೆ ಗಾಡಿಯು ಸೊಲ್ಲಾಪುರಕ್ಕೆ ಬರಲು ಕಲೆಕ್ಟರ ಮತ್ತು ಡಾಕ್ಟರರು ಬಂದು ಗಾಯಗೊಂಡವರ ಉಪಚಾರ ವ್ಯವಸ್ಥೆ ಮಾಡಿದರು. ಈ ಬಗ್ಗೆ ಶ್ರೀ ಕೃಷ್ಣಮೂರ್ತಿ ಎಂಬ ಇನ್ನೊಬ್ಬ ಪ್ರವಾಸಿಕರು ಕೊಟ್ಟ ವರದಿಯೂ ಇದೇ ಅಭಿಪ್ರಾಯದ್ದಿದೆ.

ನಾರದ ಭವಿಷ್ಯ

(೧೧ ನೇ ಪುಟದಿಂದ ಬಂದುದು)

ಪ್ರಸಂಗ ಅಪ್ರಿಯ ಜನರ ಸಹವಾಸ ವಿಪರೀತ ಸಂಗತಿಗಳ ಹವ್ಯಾಸದಿಂದ ಯಾತಾಯಾತವನ್ನು ಹೆಚ್ಚಿಸಿಕೊಳ್ಳುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಡಿಮೆಯು. ಆದರೆ ಲಾಭ ಅನುಕೂಲ. ಅವಚಿತ ಲಾಭದ ಸಂಭವ. ಧಂದೆದವರಿಗಿಂತ ನೋಕರದಾರರಿಗೆ ತೊಂದರೆ ಕಡಿಮೆ. ಮಿತ್ರ ಸುಖ ಅನುಕೂಲ. ಪ್ರವಾಸಾದಿ ಕೆಲಸ ತೊಂದರೆಯದು. ಉತ್ತರಾಷಾಢಾದ ೪ ನೆ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೩೧, ೧, ೨, ೩ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ ಹೆಂಡತಿಯ ವಿಪರೀತ ಆಗ್ರಹ. ಮಕ್ಕಳ ಉನ್ನತಿ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಬಹಳ ಪ್ರತಿಷ್ಠೆ ಮತ್ತು ಸ್ವಂತ ಲಾಭ, ಮಿತ್ರರಿಂದ ಹಿತದ ಕೃತ್ಯಗಳು. ಮನಸ್ಸು ಯಾವಾಗಲೂ ಉತ್ಸಾಹಿತ. ಪರೋಪಕಾರದ ಕೆಲಸಗಳಲ್ಲಿ ಸಾಹಸದಿಂದ ವಿಜಯ ಸಂಪಾದಿಸುವದರಿಂದ ಲೌಕಿಕದಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಪ್ರವಾಸಾದಿ ಕೆಲಸ ಹಿತದ್ದು. ಧನಿಷ್ಠಾದ ೪ ನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧, ೨, ೩, ೪ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಅಪ್ರಿಯ ಜನರ ಸಹವಾಸದಿಂದ ಮನಸ್ಸು ಉದಾಸೀನ. ಸಿಟ್ಟಿನ ಭರದಲ್ಲಿ ಬೈದಾಟದ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಧಂದೆದವರಿಗಿಂತ ನೋಕರದಾರರಿಗೆ ಹೆಚ್ಚು ಅನುಕೂಲ. ಬಹಳ ಸಮಯ ವಾಹನ ಸುಖದ ಯೋಗ. ಮಿತ್ರಸುಖ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು, ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ ಉತ್ತರಾಭಾದ್ರಪದದ ೪ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧, ೨, ೩, ೪ ಅನುಕೂಲ.

ಹೈದರಾಬಾದ ಕೊನೆಯ ಅಂಕ

(೫ ನೇ ಪುಟದಿಂದ ಬಂದುದು)

ಗಳನ್ನು ಸ್ಥಾಪಿಸಲು ಉಗ್ರ ಕ್ರಮಗಳನ್ನು ಕೈಕೊಳ್ಳಬೇಕಾಗುವದು.

ಇದರ ಪರಿಣಾಮ ದೂರದೂರದ ವರೆಗೆ ಹಬ್ಬಬಹುದು. ಆದರೆ ಬೇರೆ ಹಾದಿಯಿಲ್ಲವೆಂದು ತೋರುತ್ತದೆ. ನಾವು ತಡ ಮಾಡುವ ಹಾಗಿಲ್ಲ. ಬಂದದ್ದನ್ನು ಧೈರ್ಯದಿಂದಲೂ ನಿರ್ಧಾರದಿಂದಲೂ ಹೊಣೆಗಾರಿಕೆಯಿಂದಲೂ ಎದುರಿಸಬೇಕು.

ಸರಕಾರಗಳ ಕಾರ್ಯಪದ್ಧತಿಯೆ ಬೇರೆ. ಆದರೆ ನಾಗರಿಕರಿಗೂ ಹೊಣೆಯಿಲ್ಲದಿಲ್ಲ. ಈ ಹೊಣೆಯನ್ನು ಎಲ್ಲರೂ ಅರಿಯಬೇಕು, ಜಾಣ್ಮೆಯಿಂದಲೂ ಧೈರ್ಯದಿಂದಲೂ ನಡೆದುಕೊಂಡು ಜನರು ಧೃತಿಯನ್ನು ಎಲ್ಲ ಪ್ರಸಂಗಗಳಲ್ಲಿಯೂ ಕಾಯ್ದುಕೊಂಡು ಹೋಗಬೇಕು.



ನಾಲಗೊಂಡದ ಹಳ್ಳಿಗರು ರಜಾಕಾರರು ಎಳೆದ ಬರೆಗಳು

ಸೂರ್ಯಪೇಟೆಯ ವ್ಯಾಪಾರಿ ಶ್ರೀ ಮೂರ್ತಿ ಮತ್ತು ಹೆಂಡತಿ ರಜಾಕಾರರ ಕೈಲಿ ಮೃತ್ಯು

ಕರ್ನಾಟಕ

ಧಾರವಾಡ

ಹುಬ್ಬಳ್ಳಿಯ ಪ್ರಸಿದ್ಧ ವಕೀಲರಾಗಿದ್ದ ಶ್ರೀ ಬಾಜೀರಾವ ಕದೀಬ ಇವರು ಪುಣೆಯಲ್ಲಿ ತಮ್ಮ ಮಾವನ ಮನೆಯಲ್ಲಿ ಕಳೆದ ವಾರ ಆಕಸ್ಮಾತ್ ಹೃದಯವಿಕಾರದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮರಣ ಕಾಲಕ್ಕೆ ಇವರಿಗೆ ೪೮ ವರುಷಗಳಾಗಿದ್ದವು.

ಹಾವೇರಿ ತಾಲೂಕಿನ ಬುಜರುಕು ನೀರಾಪುರಕ್ಕೆ ಕಲೆಕ್ಟರರಾದ ರಾವಬಹದ್ದೂರ ಬೆಂಜಾಮಿನ್‌ರವರು ಕಳೆದ ವಾರ ಹೋದಾಗ ರೈತರನ್ನು ಕರೆಯಿಸಿ ಅವರವರ ದೂರುಗಳನ್ನು ಕೇಳಿಕೊಂಡರು ಮತ್ತು ಪರಿಹಾರದ ಆಶ್ವಾಸನವನ್ನು ಕೊಟ್ಟರು. ಹಾಳಾದ ದೇವಸ್ಥಾನಗಳ ಜೀರ್ಣೋದ್ಧಾರ ಮಾಡುವದಾಗಿಯೂ ಹೇಳಿದರು.

ಇದೇ ಜೂನ ಮೊದಲನೇ ವಾರದಿಂದ ಧಾರವಾಡ ಜಿಲ್ಹೆಯಲ್ಲಿ ಅಗ್ಗದರದ ಕಾಳಿನ ಅಂಗಡಿಗಳನ್ನು ಸರಕಾರದವರು ತೆರೆಯಲಿರುವರು ಧಾರವಾಡದಲ್ಲಿ ೧೦, ಹುಬ್ಬಳ್ಳಿಯಲ್ಲಿ ೧೫, ಗದಗಿನಲ್ಲಿ ೧೦ ಮತ್ತೆ ಪ್ರತಿತಾಲೂಕಿನ ದೊಡ್ಡ ಹಳ್ಳಿಗಳಲ್ಲಿ ೫-೬ ಇಂಥ ಅಂಗಡಿಗಳು ಸ್ಥಾಪಿತವಾಗಲಿದ್ದು ಅಲ್ಲಿ ಜೋಳ, ಗೋದಿ, ಗೋದಿಹಿಟ್ಟು ಅಗ್ಗದರದಿಂದ ಮಾರಲ್ಪಡುವವು. ಸಹಕಾರಿ ಸಂಘ ಮತ್ತು ಸ್ಥಾನಿಕಸ್ವರಾಜ್ಯ ಸಂಘಗಳಿಗೆ ಇವನ್ನು ಕೊಡಲಾಗುವದು.

ಮೊಗಲಾಯಿ ಸ್ಟೇಶನುಗಳಲ್ಲಿ ರಜಾಕಾರರು ಗೊಂದಲಹಾಕುತ್ತಿದ್ದುದರ ಪರಿಣಾಮವಾಗಿ ಹುಬ್ಬಳ್ಳಿಯಿಂದ ರಾತ್ರಿ ೧೦ ಗಂಟೆಗೆ ಗುಂತಕಲ್ಲ ಕಡೆಗೆ ಹೋಗುವ ಗಾಡಿ ಗದುಗಿನ ವರೆಗೆ ಮಾತ್ರ ಹೋಗಹತ್ತಿದೆ. ಸಂರಕ್ಷಣೆಯ ಯೋಗ್ಯ ವ್ಯವಸ್ಥೆಯ ನಂತರ ಎಂದಿನಂತೆ ರಾತ್ರಿಗಾಡಿ ಹೊರಡುವದೆಂದು ತಿಳಿಯುತ್ತದೆ.

ಗದಗ ಎನ್. ಸಿ. ಮಿಲ್ಲಿನ ಒಡೆಯರು ಮತ್ತು ಕೆಲಸಗಾರರಲ್ಲಿ ಚರ್ಚೆ ನಡೆದು ಹೊರಗೀಲಿ ಹಾಕಲ್ಪಟ್ಟಿತ್ತಷ್ಟೆ. ಇದೀಗ ಆ ತಂಟೆ ಬಗೆಹರಿದಿದ್ದು ಗಿರಣಿ ೨೪ ರಿಂದ ಪ್ರಾರಂಭವಾಗಿದೆ. ತುಟ್ಟಿ ಭತ್ತೆಯನ್ನು ದಿನಕ್ಕೆ ೧೪ ಆಣೆಯಂತೆ ಇನ್ನೆರಡು ತಿಂಗಳ ಕೊಡಲು ಒಪ್ಪಿದ್ದಲ್ಲದೆ ಅಷ್ಟರಲ್ಲಿ ಸರಕಾರದವರು ಬಟ್ಟೆಗಳ ದರ ನಿರ್ಧರಿಸದಿದ್ದರೆ ಮತ್ತೆರಡು ತಿಂಗಳು ಅದನ್ನು ಕೊಡುವರು ಹೊರಗೀಲಿಯ ಕ್ರಮಬದ್ಧತೆಯನ್ನು ಪ್ರಶ್ನಿಸದಿರಲು ಉಭಯ ಪಕ್ಷದವರು ಒಪ್ಪಿರುವರು

ಹುಬ್ಬಳ್ಳಿಯ ಯೋಗೀಶ್ವರ ಗ್ರಂಥಮಾಲೆಯ ಸಂಪಾದಕರಾದ ಶ್ರೀ ರಾಮರಾವ ಕೋಲಂಗಡೆಯವರು ಬರೆದ ಮ.ಗ್ರಶ್ನ ಭಾಂಡಾರವೆಂಬ ಗ್ರಂಥಕ್ಕೆ ಶ್ರೀ ರಾಘವೇಶರಾವ ಶಿರೂರ ಇವರು ೨ ಸಾವಿರ ರೂಪಾಯಿ ಕೊಟ್ಟಿರುವರು. ಇದರ ಮೊದಲನೆ ಭಾಗಕ್ಕೆ ಮುಂಬಯಿಯ ಶೇರ ಬ್ರೋಕರ ಬರ್ವೆಯವರು ೧೦೦೦ ರೂಪಾಯಿ ಕೊಟ್ಟಿರುವರು.

ಕನ್ನಡ ಸಂಸ್ಥಾನ

ಕೊಲ್ಹಾಪುರ ಸಂಸ್ಥಾನ ವಿಲೀನವಾಗುವದವಶ್ಯವಾಗಿದೆ ಆದುದರಿಂದ ಅಲ್ಲಿನ ಪ್ರಜಾಪರಿಷತ್ತಿನವರು ಭೇದಭಾವವನ್ನು ಮರೆತು ಅದನ್ನು ಸಾಧಿಸಿಕೊಳ್ಳಬೇಕೆಂದು ಸಂಸ್ಥಾನ ಸ್ಥಾಯೀಸಮಿತಿಯ ಸದಸ್ಯರಾದ ಶ್ರೀ ಶಿಖರೆಯವರು ಪ್ರಕಟಿಸಿದ್ದಾರೆ.

ಸೊಂಡೂರು ಸಂಸ್ಥಾನ ಪ್ರಜಾಸಂಘದ ಸದಸ್ಯರಾದ ಶ್ರೀ ಬಿ ಚಂದ್ರಶೇಖರ ಶಾಸ್ತ್ರಿಗಳು ಸಂಘದ ಚಟುವಟಿಕೆ ನಡೆಸುತ್ತಿರುವಾಗ ೧೯ ನೇತಾರೀಕು ಪೋಲೀಸರು ಅಪಮಾನಕರ ರೀತಿಯಲ್ಲಿ ಅವರಿಗೆ ಅತ್ಯಾಚಾರಗೊಳಿಸಿದ್ದನ್ನು ಪ್ರಜಾಸಂಘದವರು ನಿಷೇಧಿಸಿದರು. ಸರಕಾರದವರು ಈ ಅಪರಾಧಮಾಡಿದವರ ಮೇಲೆ ಕ್ರಮ ಕೈಕೊಳ್ಳಬೇಕೆಂದೂ ಕೇಳಿಕೊಳ್ಳಲಾಯಿತು.

ಬೆಳಗಾವಿ

ಗೋಕಾಕ ಸಕ್ಕರೆ ಪ್ರಕರಣದ ವಿಚಾರಣೆ ನಡೆದಂತಾಗಿದೆ. ವಿಶೇಷಾಧಿಕಾರಿಗಳಾದ ಶ್ರೀ ಕುಮಾರ ಇವರು ಈಗ ಅನೇಕ ಸಾಕ್ಷೀ ಪುರಾವೆಗಳನ್ನು ತೆಗೆದುಕೊಂಡಿರುವರು. ಈಗ ಆ ಅಪ್ಪಾಧಿಕಾರಿಗಳಲ್ಲಿ ಕೆಲವರ ಮೇಲೆ ಗಾಡಿ ಬಾಡಿಗೆಯ ಸಂಬಂಧವಲ್ಲಿ ಮತ್ತೊಂದು ಪ್ರಕರಣದ ವಿಚಾರಣೆ ಶ್ರೀ ಕುಮಾರರ ಮುಂದೆ ನಡೆದಿದೆ. ಗೋದೀ ಚೀಲಗಳ ಬಗ್ಗೆಯೂ ಒಂದು ಪ್ರಕರಣ ಪ್ರಾರಂಭವಾಗಿದೆಯಂತೆ.

ಗಲಭೆಗಳ ಮೂಲಕ ಸಂತಸ್ತವಾದ ೧೮ ಕುಟುಂಬಗಳಿಗೆ ಒಟ್ಟು ಸುಮಾರು ೧೪ ಸಾವಿರ ರೂಪಾಯಿ ಪರಿಹಾರ ಕೊಡುವದಾಗಿ ಪರಿಹಾರ ಸಮಿತಿಯವರು ನಿರ್ಧರಿಸಿದ್ದಾರೆ ಮತ್ತು ೫ ಜನರಿಗೆ ೧೯ ಸಾವಿರ ರೂಪಾಯಿಗಳನ್ನು ಸಾಲವೆಂದು ಕೊಡಲು ನಿರ್ಧರಿಸಿದ್ದಾರೆ.

ಬೆಳವಡಿಯಲ್ಲಿ ಒಕ್ಕಲತನ ಶಾಖೆಯವರು ಏರ್ಪಡಿಸಿದ ಒಕ್ಕಲತನ ಪ್ರದರ್ಶನದ ಅಧ್ಯಕ್ಷಸ್ಥಾನದಿಂದ ಮಾತಾಡುತ್ತ ಶ್ರೀ ತಲ್ಲೂರ ರಾಯನಗೌಡರು ಪ್ರದರ್ಶನಗಳು ಹಳ್ಳಿಯ ಅಂಗಳಕ್ಕಿಳಿಯಬೇಕೆಂದೂ ಅಂದರೇನೇ ರೈತರಿಗೆ ನಿಜವಾಗಿ ಅವುಗಳ ಉಪಯೋಗವಾಗುವದೆಂದೂ ಹೇಳಿದರು.

ಬೆಳಗಾವಿಯಲ್ಲಿ ಕೂಡಲಿದ್ದ ಕರ್ನಾಟಕ ಆಯುರ್ವೇದ ಸಮ್ಮೇಲನ ನಗರದಲ್ಲಿಯ ನೀರಿನ ಕೊರತೆಯ ಮೂಲಕ ಮುಂದೆ ಬಿದ್ದಿದೆಂದು ಕಾರ್ಯದರ್ಶಿಗಳು ತಿಗಸುತ್ತಾರೆ.

ಬೆಳಗಲಿ ಪುಂಡರ ತಂಡವು ಕುದುರೆಗಳ ಮೇಲೆ ಸಶಸ್ತ್ರ ಸಂಚರಿಸುತಲಿದ್ದು ಗೋಕಾಕ ತಾಲೂಕಿನಲ್ಲಿ ಈಗ ಹಾವಳಿಯನ್ನು ನಡೆಸಿದೆ ಯ. ಮನಪ್ಪನೆಂಬವನು ಇದರ ಮುಖ್ಯಸ್ಥನು. ಇತ್ತೀಚೆ ಈ ತಂಡವು ಧರ್ಮಟ್ಟಿ ಇನಾಮದಾರರ ಕುದುರೆಯನ್ನು ಒಯ್ದುದಲ್ಲದೆ ವೆಂಕಟಾಪುರದಲ್ಲಿ ದರೋಡೆ ಹಾಕಿ ೮-೧೦ ಸಾವಿರ ರೂಪಾಯಿಗಳನ್ನು ಒಯ್ದಿರುವರು. ಹಳ್ಳಿಗರನ್ನು ಬೆದರಿಸಿ ಅವರಿಂದ ಈ ತಂಡವು ಹಣ ಸೆಳೆಯುತಿರುವದು.

ಗೋಕಾವಿಯ ಲೋಕಪ್ರಿಯ ವಕೀಲರೂ ಪೋಲೀಸ ಪ್ರಾಸಿಕ್ಯೂಟರರೂ ಆಗಿದ್ದ ಶ್ರೀ ಮಾಂಗಳೇಕರರನ್ನು ೨೫ನೇ ತಾರೀಕು ಮುಂಜಾನೆ ಅವರ ಮನೆಯಲ್ಲಿಯೇ ಕೊಲೆ ಮಾಡಲಾಯಿತು. ನಾಲ್ವರನ್ನು ಮಾಂಗಳೇಕರರ ಮನೆಯಿಂದ ಓಡಿ ಹೋಗುವಾಗ ಸೆರೆಹಿಡಿಯಲಾಯಿತು. ಇವರಲ್ಲಿ ಕೆಲವರು ಲಂಚ ನಿರ್ಮೂಲನ ಶಾಖೆಯವರೆಂದು ಹೇಳಿಕೊಳ್ಳುತಿರುವರು. ಮಾಂಗಳೇಕರರನ್ನು ನೋಡಲು ಅನೇಕ ಜನರು ಬಂದು ಹೋದರು. ಇವರ ನಿಧನದ ನಿಮಿತ್ತ ಗೋಕಾಕ ಪೇಟೆ ಮುಚ್ಚಿತ್ತು.

ಬಳ್ಳಾರಿ

ಬಳ್ಳಾರಿ ಜಿಲ್ಹೆಯ ಬಣಜಾರ ಸಂಘದ ೪ ನೇ ಸಮ್ಮೇಳನ ಹರಪನಹಳ್ಳಿ ತಾಲೂಕಿನ ಕೇಮೂರ ನಳ್ಳಿ ತಾಂಡದಲ್ಲಿ ೯ ನೇ ತಾರೀಕಿಗೆ ನಡೆಯಿತು. ಸಮಾಜದ ಸರ್ವವಿಧ ಉನ್ನತಿಗಾಗಿ ಪ್ರಯತ್ನಿಸಬೇಕೆಂದು ಮುಂತಾದ್ದರ ಬಗೆಗೆ ವಿಚಾರನಾಗಿ ಸಮ್ಮೇಲನ ಮುಕ್ತಾಯಗೊಂಡಿತು.

ಹೈದರಾಬಾದ ಸಂಸ್ಥಾನ ಸತ್ಯಾಗ್ರಹಿ ವಿ. ರಾ. ರಡ್ಡಿಯವರು ಬಿಡುಗಡೆಯ ನಂತರ ಕನಕಗಿರಿಗೆ ಹೋದ ಕೂಡಲೆ ರಾಜಾಸಾಹೇಬ ಪಠಾಣನೆಂಬವನು ಅವರ ಗಾಂಧೀ ಟೊಪ್ಪಿಗೆಯನ್ನು ಸೆಟ್ಟಿ ಅವರನ್ನು ಹೊಡೆದು, ಅವರು ಕಂಪ್ಲಿಗೆ ಬರಹತ್ತಿದಾಗ ಅವರ ಬೆನ್ನು ಹಿಂದೆಯೆ ಬಂದ. ಅವನ ಬಗ್ಗೆ ಸಂಶಯ ಬಂದು ಪೋಲೀಸರು ಅವನನ್ನು ಹಿಡಿದು ಹೊಸಪೇಟೆಗೆ ಒಯ್ದರು, ಅವನನ್ನು ಬಿಡಿಸಲು ಕೆಲ ಜನರು ಹೊಸಪೇಟೆಗೆ ಹೋಗಿರುವರಂತೆ.

ಅದವಾನಿ, ಆಲೂರು, ರಾಯದುರ್ಗ ತಾಲೂಕುಗಳ ಕರ್ನಾಟಕ ಏಕೀಕರಣ ಪರಿಷತ್ತು ಎಮ್ಮಿಗನೂರಿನಲ್ಲಿ ಜೂನ ೧೨ ಕ್ಕೆ ಸೇರಲಿದೆ. ಇದರ ಪ್ರಾರಂಭೋತ್ಸವವನ್ನು ಮಾನ್ಯ ಶ್ರೀ ಕೆ ಚೆಂಗಲರಾಯರೆಡ್ಡಿಯವರು ನೆರವೇರಿಸುವರು. ಶ್ರೀ ಕೆ. ಆರ್ ಕಾರಂತರು ಅದರ ಅಧ್ಯಕ್ಷತೆ ವಹಿಸುವರು. ಈ ಮೂರು ತಾಲೂಕುಗಳು ಕರ್ನಾಟಕಕ್ಕೇ ಸೇರಬೇಕೆಂಬ ಪರಿಷತ್ತಿನ ಧ್ಯೇಯಕ್ಕೆ ಒಪ್ಪುವ ಈ ಮೂರು ತಾಲೂಕುಗಳ ಪ್ರತಿಯೊಬ್ಬರು ಪ್ರತಿನಿಧಿಯಾಗಬಹುದು. ಪ್ರತಿನಿಧಿ ಚಂದಾ ೨ ರೂ ಊಟ ಉಚಿತ ಎಂದು ಮುಂತಾಗಿ ಆಹ್ವಾನ ಸಂಘದವರು ಪ್ರಕಟಿಸುವರು.

ದಕ್ಷಿಣ ಕನ್ನಡ

ಭಾರತ ಸರಕಾರದಿಂದ ನೇಮಿಸಲ್ಪಟ್ಟಿರುವ ಬಂದರ ಸಮಿತಿಯ ಸದಸ್ಯರಾದ ಶ್ರೀ ಕೆ ಮಿತ್ರ್ರ ಮತ್ತು ಜಿ ಬಿ ಮೂರ್ತಿಯವರು ೧೬ ಕ್ಕೆ ಮಂಗಳೂರಿಗೆ ಭೆಟ್ಟಿ ಕೊಟ್ಟರು. ಅವರು ನೇತ್ರಾವತಿ ನದಿಯು ಸಂಗಮ ಗುರುಪುರ ಹೊಳೆಯ ಹಿನ್ನೀರು ಅಳಿವೆ, ಅಳಿವೆಯಿಂದ ಈಗ ಹಡಗು ಬಂದು ನಿಲ್ಲುವ ಸ್ಥಳ ಮೊದಲಾದವುಗಳನ್ನು ನೋಡಿಕೊಂಡರು.

ಮಂಗಳೂರು ಜಾಯಿಂಟ ಸ್ಟಾಕ ಬ್ಯಾಂಕಿನವರು ಈ ಸಮಿತಿಯವರನ್ನು ಆಮಂತ್ರಿಸಿದಾಗ ಬಂದರಕ್ಕೆ ಮಂಗಳೂರೇ ತಕ್ಕದಾಗಿದೆಂಬ ಅಂಶವನ್ನು ಅವರ ಗಮನಕ್ಕೆ ತರಲಾಯಿತು. ಸೆಂಟ ಎಲೋಸಿಯಸ್ ಕಾಲೇಜನ್ನು ಸಮಿತಿಯವರು ಸಂದರ್ಶಿಸಿದರು.

ಮಂಗಳೂರಿನ ಕಮ್ಯುನಿಸ್ಟ ಮುಖಂಡರಾದ ಶ್ರೀ ಎಸ್ ಎನ್. ಹೊಳ್ಳರನ್ನು ೨೦ ಕ್ಕೆ ಸೆರೆ ಹಿಡಿಯುವಾಗ ಪೋಲೀಸರ ಮೇಲೊ ಒಂದು ಚಹಾದಂಗಡಿಯ ಮೇಲೂ ಕಲ್ಲು ತೂರಬತ್ತಿದ್ದರಿಂದ ಪೋಲೀಸರು ಲಾಠೀ ಪ್ರಹಾರ ಮಾಡಿದರು ಎ. ಕೆ. ನಾರಾಯಣ ಮತ್ತು ಮಾಧವ ಪೂಜಾರಿ ಎಂಬ ಇಬ್ಬರನ್ನು ಬಂಧಿಸಲಾಯಿತು. ಮ್ಯಾಜಿಸ್ಟ್ರೇಟರು ಅವರನ್ನು ೧೫ ದಿನ ರಿಮಾಂಡಿನಲ್ಲಿಟ್ಟಿರುವರು.

ಶ್ರೀ ಹೊಳ್ಳರನ್ನು ವೆಲ್ಲೂರ ತುರಂಗಕ್ಕೊಯ್ಯುವಾಗ ಮಂಜೇಶ್ವರ ಸ್ಟೇಶನದಲ್ಲಿ ಕಮ್ಯುನಿಸ್ಟರ ಗುಂಪೊಂದು ಪೋಲಿಸರ ಮೇಲೆ ಏರಿ ಬಿದ್ದು ಅವರನ್ನು ಗಾಯಗೊಳಿಸಿತು. ಈ ಗೊಂದಲದಲ್ಲಿ ಹೊಳ್ಳರು ಪಾರಾಗಿ ಹೋದರು.

ದಕ್ಷಿಣ ಕನ್ನಡ ಜಿಲ್ಹಾ ಕಾಂಗ್ರೆಸ ಸಮಿತಿಯು ಬಂದರ ಸಮಿತಿಯವರಿಗೆ ಮನವಿಯನ್ನು ಅರ್ಪಿಸಿದರು. ಮಂಗಳೂರ ೧೯೧೯ ರಿಂದ ಈ ವರೆಗೆ ೧೨ ಕೋಟಿ ರೂಪಾಯಿಗಳ ಸಮುದ್ರ ವ್ಯಾಪಾರ ಮಾಡಿದೆ. ದಕ್ಷಿಣ ಕರ್ನಾಟಕ ಮಲೆನಾಡಿಗೆ ಇದೊಂದು ಉತ್ತಮ ಬಂದರವಾಗಿದೆ. ಇದು ಉತ್ತಮ ಬಂದರವಾಗುವದೆಂದು ಮುಂತಾಗಿ ಈ ಮನವಿಯಲ್ಲಿ ಹೇಳಲಾಗಿದೆ. ಹಂಚಿನ ಉದ್ದಿಮೆದಾರರು ಪುರಸಭೆಯವರು ಮನವಿಯನ್ನು ಕೊಟ್ಟರು ವಾಣಿಜ್ಯ ಸಂಘದವರು ಕೊಟ್ಟ ಮನವಿಯಲ್ಲಿ ಭತ್ಯ, ಮಲ್ಪೆ ಮತ್ತು ಕುಂದಾಪುರ ಊರುಗಳಲ್ಲಿ ಮಂಗಳೂರೇ ಬಂದರವಾಗಲು ತಕ್ಕದಾಗಿದೆಯೆಂದೂ ಇದರ ಉತ್ಪನ್ನವು ೪೫೦ ಲಕ್ಷವಾಗಿದ್ದು ಭಟ್ಕಳದ್ದು ೧೫ ಲಕ್ಷ ಮಲ್ಪೆಯದು ೨೫ ಲಕ್ಷ ಇಷ್ಟು ಮಾತ್ರ ಆಗಿದೆಯೆಂದು ಹೇಳಲಾಗಿದೆ ತಾವು ನಿಷ್ಪಕ್ಷಪಾತನಾದ ವರದಿಯನ್ನು ಮಾತ್ರ ಬರೆಯುವದಾಗಿಯೂ ಭಾರತದ ಹಿತವೇ ತಮ್ಮ ಗುರಿಯಾಗಿಯೂ ಸಮಿತಿಯ ಮಾನ್ಯ ಸದಸ್ಯರು ತಮ್ಮ ಉತ್ತರ ಕೊಟ್ಟರು.

ಉತ್ತರ ಕನ್ನಡ

ಕಾರವಾರ ರಾಷ್ಟ್ರ ಸೇವಾದಲದ ವಾರ್ಷಿಕೋತ್ಸವ ನಿಮಿತ್ತ ದಾಲವಾರಿಯ ವಿಷಯಗಳು ನಡೆದವು ಆಸ್ಪತ್ರೆ, ಶುಟಾಗ್ರ, ಪಾಠ ರೋಧ, ಬಂಡಲಗಾರಿಕೆ ಗ್ರಾಮೋದ್ಯೋಗ ಮೊದಲಾದ ವಿಷಯಗಳ ಬಗ್ಗೆ ಶಿಕ್ಷಣದ ಕಾರ್ಯಕ್ರಮ ನಡೆಯಿತು.

ಕುಮಟಾ ತಾಲೂಕಿನ ಧಾರೇಶ್ವರದ ಪುರಾಣ ಪ್ರಸಿದ್ಧ ಧಾರಾನಾಥ ದೇವಾಲಯವು ೨೦ ನೇ ತಾರೀಖಿನಿಂದ ಹರಿಜನರಿಗೆ ಮುಕ್ತ ಮಾಡಲ್ಪಟ್ಟಿತು. ತೆಗಡೆ ಗ್ರಾಮದ ಶ್ರೀ ಶಾಂತಿಕಾರೇಶ್ವರಿ ದೇವಾಲಯವೂ ಮುಕ್ತಮಾಡಲ್ಪಟ್ಟಿತು.

ಮೈಸೂರ ಸಂಸ್ಥಾನ

ಅರಸೀಕೆರೆ ನಗರಕ್ಕೆ ನೀರು ಪೂರೈಸುವದರಸಲುವಾಗಿ ಕಳ್ಳನಕಟ್ಟೆಯಲ್ಲಿ ಕಟ್ಟಿದ ವಾಟರ ವರ್ಕ್ಸದ ಪ್ರಾರಂಭೋತ್ಸವ ೧೯ ಕ್ಕೆ ಜರುಗಿತು ಇದರಿಂದ ನಗರಕ್ಕೆ ಆಕಷ್ಟು ನೀರು ಪೂರೈಕೆಯದರಿಂದ ಜನ ಬೌರ ಸಭಾಪತಿಯನ್ನು ಕೊಂಡಾಡುತಿರುವರು

ಮುಂಬಯಿ ಸರಕಾರದ ಒಕ್ಕಲತನ ಶಾಖೆಯ ಮಂತ್ರಿಗಳಾದ ಶ್ರೀ. ಪಾಟೀಲ ಮಲ್ಲನಗೌಡರು ಮೈಸೂರ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂ ಇವರ ಗೂಡ ಜೋಗವಿದ್ಯುಚ್ಛಕ್ತಿಯ ಸಂಬಂಧದಲ್ಲಿ ಮಾತುಕತೆ ನಡೆಸಿದರು. ಮುಂಬಯಿ ಪ್ರಾಂತದ ಭಾಗಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವದರ ಬಗ್ಗೆಯೇ ಈ ಮಾತುಕತೆ ನಡೆದವೆಂದು ತಿಳಿಯುತ್ತದೆ.

ಹೈದರಾಬಾದ ಉಪ್ಪಿನ ವಾಗೀನುಗಳಿಗೆ ತಡೆ

ಮುಂಬಯಿ ಸರಕಾರದ ಅಜ್ಞೆಯ ಮೇರೆಗೆ ಮನಮಾಡ ರೇಲ್ವೆ ನಿಲ್ದಾಣದಲ್ಲ ಹೈದರಾಬಾದ ಸಂಸ್ಥಾನಕ್ಕೆ ಕಳಿಸಲಾದ ೧೫೦ ಉಪ್ಪಿನ ವಾಗೀನುಗಳನ್ನು ತಡೆಹಿಡಿಯಲಾಗಿದೆಯೆಂದು ತಿಳಿಯುತ್ತದೆ.

ಹಿಂದುಸ್ತಾನ

ಮುಂಬಯಿ

ಮೋಮಿನಾಬಾದ ತಾಲೂಕಿನ ಬರದಾಪುರ ಪೋಲೀಸ ಸ್ಟೇಶನ್ನಿನ ನಿಜಾಮ ಪೋಲೀಸರು ೪ ವರ್ಷದ ಹುಡುಗಿಯ ಮೇಲೆ ಬಲಾತ್ಕಾರ ನಡೆಸಿ ಪ್ರತಿಭಟಿಸಿದ ಹಳ್ಳಿಗರು ಹಾಗು ಸಂಸ್ಥಾನ ಕಾಂಗ್ರೆಸಿನ ಕೆಲಸಗಾರರು ರೊಚ್ಚಿಗೆದ್ದು ಪ್ರತಿಭಟನೆ ಮಾಡಿ ಹುಡುಗಿಯನ್ನು ಪಾರುಮಾಡಿದರು. ತಿಕ್ಕಾಟವಾಗಿ ೬ ಪೋಲೀಸರು ಸತ್ತರು ಉಳಿದವರು ಓಡಿಹೋದರು. ಪೋಲೀಸ ಠಾಣೆಯು ನಾಶಗೊಳಿಸಲ್ಪಟ್ಟಿದೆ.

ಪ್ರಾ. ಲೋಕೂರ ನಾರಾಯಣರಾಯರು ಮುಂಬಯಿಯ ಸಂಯುಕ್ತ ಕರ್ನಾಟಕ ಸಂಘಕ್ಕೆ ೧ ಸಾವಿರ ರೂಪಾಯಿ ಕೊಟ್ಟು ಪೋಷಕರಾಗಿದ್ದಾರೆ. ಶ್ರೀಯುತರು ಕಳೆದ ವರ್ಷ ಈ ಸಂಘದ ಅಧ್ಯಕ್ಷರಾಗಿದ್ದರು.

ಹಳ್ಳಿಗಳಲ್ಲಿ ಸ್ವಚ್ಛತೆ ಮತ್ತು ಆರೋಗ್ಯಗಳನ್ನು ಕಾಯುವ ಮತ್ತು ಹೆಚ್ಚಿಸುವ ಕಾರ್ಯಕ್ಕಾಗಿ ಸೋಸಿಯಲ್ ಸರ್ವಿಸ ಲೀಗ ಮುಂಬಯಿಯವರು ವರ್ಷಕ್ಕೆ ೧೫೦ ರೂ. ಗಳ ವರೆಗೆ ಕೊಡುಗೆ ಕೊಡುತ್ತಾರೆ. ಈ ಕಾರ್ಯದಲ್ಲಿ ತೊಡಗಿದ್ದ ಮತ್ತು ಆರ್ಥಿಕ ಸಹಾಯ ಬೇಕಿದ್ದ ಸಂಘ ಸಂಸ್ಥೆಗಳು ಸೋಸಿಯಲ್ ಸರ್ವೀಸ ಲೀಗ ಮುಂಬಯಿ ೪, ಈ ವಿಳಾಸಕ್ಕೆ ತಮ್ಮ ಕಾರ್ಯದ ವರದಿ ಕಳುಹಿಸಿ ಅರ್ಜಿಯ ನಮೂನೆಗಳನ್ನು ಬೇಡಬೇಕೆಂದು ಸೋಸಿಯಲ್ ಸರ್ವಿಸ ಲೀಗಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮುಂಬಯಿ ಪ್ರಾಂತದಲ್ಲಿಯ ನಿರಾಶ್ರಿತರ ನಿಯಂತ್ರಣವು ಜೂನ ಮೊದಲನೇ ವಾರದಿಂದ ಹಿಂದುಸ್ತಾನ ಸರಕಾರದಿಂದ ಮುಂಬಯಿ ಸರಕಾರದ ಕಡೆಗೆ ಬರತಕ್ಕದಿದ್ದು ಮುಖ್ಯ ಉಪಮಂತ್ರಿ ಶ್ರೀ ಡಿ. ಕೆ. ಕುಂಟೆಯವರು ನಿರಾಶ್ರಿತರ ವಿಶೇಷ ಅಧಿಕಾರಿಗಳಾಗಲಿದ್ದಾರೆಂದೂ ಮುಂಬಯಿ ಸರಕಾರದ ಅರ್ಥಸಚಿವ ಶ್ರೀ ವೈಕುಂಠಲಾಲ ಮೆಹತಾರವರು ನಿರಾಶ್ರಿತರ ದಫ್ತರನ್ನು ವಹಿಸಬಹುದೆಂದೂ ತಿಳಿದುಬರುತ್ತದೆ.

ಮದ್ರಾಸ

ಬೀದರ ಜಿಲ್ಹೆಯಲ್ಲಿ ರಜಾಕಾರರು ಹಳ್ಳಿಗಳನ್ನು ಲೂಟಿ ಮಾಡಿದ್ದಾರೆಂದೂ ಅಮಾನುಷವಾಗಿ ಸ್ತ್ರೀಯರ ಮಾನಹರಣ ಮಾಡಿದ್ದಲ್ಲದೆ ಅನೇಕ ಸ್ತ್ರೀಯರನ್ನು ಬತ್ತಲೆ ಮಾಡಿ ಮೆರವಣಿಗೆ ತೆಗೆದಿದ್ದರೆಂದೂ ೩೦೦ ಕ್ಕಿಂತ ಹೆಚ್ಚು ಜನರು ಸಂಹರಿಸಲ್ಪಟ್ಟಿದ್ದಾರೆಂದೂ ತಿಳಿದು ಬಂದಿದೆ. ಗೊರಗಟ್ಟಿ ಮತ್ತು ಅನಂದವಾಡಿ ಮೊದಲಾದ ಹಳ್ಳಿಗಳಲ್ಲಿ ೨೫ ಲಕ್ಷ ರೂ. ಗಿಂತ ಹೆಚ್ಚು ಆಸ್ತಿ ಹಾನಿಗೀಡಾಗಿದೆ.

ಮದ್ರಾಸ ಸರಕಾರದವರು ಭಾರತೀಯ ಇತಿಹಾಸ ಪರಿಷತ್ತಿಗೆ ೧೯೪೮—೪೯ ಮತ್ತು ೧೯೪೯—೫೦ ಈ ಅವಧಿಯಲ್ಲಿ ೨೦ ಸಾವಿರ ರೂಪಾಯಿ ಸಹಾಯ ಮಾಡಲು ನಿರ್ಧರಿಸಿದ್ದಾರೆ. ಡಾ. ರಾಜೇಂದ್ರ ಪ್ರಸಾದರು ಈ ಪರಿಷತ್ತಿನ ಅಧ್ಯಕ್ಷರಿದ್ದು ಪರಿಷತ್ತಿನವರು ಹಿಂದುಸ್ತಾನದ ಇತಿಹಾಸವನ್ನು ಬೇರೆ ಬೇರೆ ತಜ್ಞರಿಂದ ಬರೆಯಿಸಿ ೨೦ ಗ್ರಂಥಗಳಲ್ಲಿ ಪ್ರಸಿದ್ಧಿಸಲಿರುವರು.

ಬಿಜವಾಡದಲ್ಲಿ ಬಿಸಿಲಿನ ತಾಪವು ತಾ. ೧೭ ರಂದು ೧೨೦ ಡಿಗ್ರಿವರೆಗೆ ಏರಿದ್ದು ತಾಪ ಸಹಿಸದೆ ಮೂವರು ಮರಣಹೊಂದಿದ್ದಾರೆಂದು ತಿಳಿಯುತ್ತದೆ.

ಹಿಂದುಸ್ತಾನ ಅಹಾರ ಮಂತ್ರಿಗಳಾದ ಶ್ರೀ. ಜಯರಾಮದಾಸ ದೌಲತ ರಾಮರು ಮದ್ರಾಸ ಇಲಾಖೆಯಲ್ಲಿ ಸಂಚರಿಸುತ್ತಿರುವಾಗ ಸದ್ಯದ ಅಹಾರ ಪರಿಸ್ಥಿತಿಯ ಬಗ್ಗೆ ಎಳ್ಳಷ್ಟೂ ಧೈರ್ಯಗುಂದಬೇಕಾಗಿಲ್ಲವೆಂದೂ ಎಲ್ಲ ವ್ಯವಸ್ಥೆಯನ್ನೂ ಮಾಡಿರುವದರಿಂದ ಸರಕಾರದಲ್ಲಿ ವಿಶ್ವಾಸವಿಟ್ಟು ಜನರು ನಡೆಯಬೇಕೆಂದೂ ಭರವಸೆ ಹೇಳಿದರು.

ಮದ್ರಾಸ ಗವ್ಹರ್ನರ ಸರ ಅರ್ಚಿಬಾಲ್ಡ ನೈ ಅವರು ಗಾಂಧಿ ಸ್ಮಾರಕ ನಿಧಿಗೆ ೫ ಸಾವಿರ ರೂ. ಗಳನ್ನು ಕೊಟ್ಟಿದ್ದು ಇದರಲ್ಲಿ ೧ ಸಾವಿರ ಮದ್ರಾಸ ನಗರ ಗಾಂಧಿ ನಿಧಿಗೆ ಉಳಿದ ನಾಲ್ಕು ಸಾವಿರಗಳಲ್ಲಿ ಅಂಧ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡುಗಳ ಗಾಂಧಿ ನಿಧಿಗೆ ಒಂದೊಂದು ಸಾವಿರ ಹಂಚಬೇಕು ಎಂದು ಸೂಚಿಸಿದ್ದಾರೆ.

ಉತ್ತರ ಮಲಬಾರದಲ್ಲಿಯ ಕಮ್ಯುನಿಸ್ಟರು ಕೊಳ್ಳೆ ಸಾರಿಗೆ ಮೊದಲಾದ ಹಿಂಸಾಚರಣೆಯಲ್ಲಿ ತೊಡಗಿರುವರೆಂಬ ಸಂಶಯದಿಂದ ಕಮ್ಯುನಿಸ್ಟರ ಸಾರ್ವತ್ರಿಕ ಬಂಧನ ಕೈಕೊಳ್ಳಲಾಗಿದೆ. ಪೋಲೀಸರ ಕಣ್ಣು ತಪ್ಪಿಸಿ ಅಡವಿಯಲ್ಲಿ ಅಡಗಿಹೋದ ಒಬ್ಬ ಕಮ್ಯುನಿಸ್ಟನು ಹಾವು ಕಡಿದು ಮರಣ ಹೊಂದಿದನೆಂದು ಕಾಲಿಕತ್ತದಿಂದ ಸುದ್ದಿ ಬಂದಿದೆ.

ಹೊಸದಿಲ್ಲಿ

ಅಪ್ಪಣೆಪಡೆದುಕೊಳ್ಳದೆ ಬಟ್ಟೆಯನ್ನು ಪಾಕಿಸ್ತಾನಕ್ಕೆ ನಿರ್ಯಾತಮಾಡಿದ್ದಕ್ಕಾಗಿ ದಿಲ್ಲಿ ರೇಲ್ವೆ ಸ್ಟೇಶನ್ನಿನಲ್ಲಿ ತಾ. ೧೭ ಕ್ಕೆ ೧೬ ಜನರು ಸೆರೆಹಿಡಿಯಲ್ಪಟ್ಟರು ಮತ್ತು ೪೦ ಸಾವಿರ ರೂಪಾಯಿ ಬೆಲೆಯ ಬಟ್ಟೆ ಜಪ್ತಮಾಡಲ್ಪಟ್ಟಿತು.

ಮಸೂರಿಯಲ್ಲಿ ಸರದಾರ ವಲ್ಲಭಭಾಯಿಯವರ ಪ್ರಕೃತಿಯು ಈಚೆಗೆ ಸುಧಾರಿಸುತ್ತ ನಡೆದಿತ್ತು. ಆದರ ಮತ್ತೆ ಅವರು ಕಾರ್ಯಪ್ರವೃತ್ತರಾದೊಡನೆ ಪ್ರಕೃತಿ ಸ್ವಲ್ಪ ಇಳಿಮುಖವಾಗಿದ್ದು ಪುನಃ ಪೂರ್ಣ ವಿಶ್ರಾಂತಿಯ ಸಲಹೆಯನ್ನು ಅವರಿಗೆ ಕೊಡಲಾಗಿದೆ

ನಿರಾಶ್ರಿತರ ಪುನರ್ನಿವೇಶನ ಕಾರ್ಯವನ್ನು ಹೆಚ್ಚು ವೇಗವಾಗಿ ಸಾಧಿಸಲು ಹಿಂದುಸ್ತಾನ ಸರಕಾರದ ಪರಿಹಾರ ಮತ್ತು ಪುನರ್ನಿವೇಶನ ಮಂತ್ರಿಗಳು ಭಾರತದ ಎಲ್ಲ ಪ್ರಾಂತಗಳ ಮತ್ತು ಸಂಸ್ಥಾನಗಳ ಮುಖ್ಯ ಮಂತ್ರಿಗಳ ಸಭೆಯನ್ನು ಮೇ ತಿಂಗಳ ಕೊನೆಯ ವಾರದಲ್ಲಿ ಕರೆದಿದ್ದಾರೆಂದು ತಿಳಿಯುತ್ತದೆ.

ಮಹಾಬೋಧಿ ಸಂಘದ ಬೌದ್ಧ ಶಿಷ್ಯಮಂಡಲದವರು ಮುಖ್ಯ ಮಂತ್ರಿ ಪಂ. ನೆಹರೂರವರನ್ನು ಕಂಡು ಬುದ್ಧನ ಜನ್ಮದಿನವಾದ ವೈಶಾಖ ಪೂರ್ಣಿಮೆಯ ದಿನ ಭಾರತದಲ್ಲಿ ಸಾರ್ವಜನಿಕ ಬಿಡುವು ಕೊಡಬೇಕೆಂದು ಕೇಳಿಕೊಂಡರು.

ಅಂತರ ರಾಷ್ಟ್ರೀಯ ಅವಶ್ಯಕ ಅಹಾರ ಸಮಿತಿಯ ಅಕ್ಕಿ ಸಮಿತಿಯು ೧೯೪೮ ನೆಯ ವರ್ಷಕ್ಕಾಗಿ ಹಿಂದುಸ್ತಾನಕ್ಕೆ ೮ ಲಕ್ಷ ೨೫ ಸಾವಿರ ಟನ್ನ ಅಕ್ಕಿಯನ್ನು ಕೊಡಬೇಕೆಂದು ಅಭಿಪ್ರಾಯಪಟ್ಟಿದೆ. ಬ್ರಹ್ಮದೇಶ ಮತ್ತು ಸಯಾಮದಿಂದ ಅಕ್ಕಿಯ ನಿರ್ಯಾತವು ಹೆಚ್ಚಾಗುತ್ತಿದೆಯೆಂದು ವರದಿಯಾಗಿದೆ.

ಲಂಡನದಿಂದ ಬಂದ ಅಮಂತ್ರಣವನ್ನು ಮನ್ನಿಸಿ ಇಂಡಿಯನ್ ಕೌನ್ಸಿಲ್ ಆಫ್ ವರ್ಲ್ಡ ಅಫೇರ ಎಂಬ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಎ. ಅಪ್ಪಾದೊರೆಯವರು ಇಂಗ್ಲಂಡದಲ್ಲಿಯ ಅಂತರ ರಾಷ್ಟ್ರೀಯ ಸಂಸ್ಥೆಗಳು ಕೆಲಸ ಮಾಡುತ್ತಿರುವ ಪದ್ಧತಿಯನ್ನು ಕಲಿಯಲು ಹೋಗಲಿರುವರು ಆ ಮೇಲೆ ಇವರು ಫ್ರಾನ್ಸ, ಅಮೇರಿಕಾ, ಕಾನಡಾ ಮೊದಲಾದಲ್ಲಿಯೂ ಹೋಗಿ ಅಲ್ಲಿಯ ಅಂತರ ರಾಷ್ಟ್ರೀಯ ಸಂಸ್ಥೆಗಳ ಕಾರ್ಯಪದ್ಧತಿಯನ್ನು ಅಭ್ಯಸಿಸುವವರಿದ್ದಾರೆ.

ಡಾ. ಜೀವರಾಜ ಮೇಥಾರು ಬಡೋದೆಯ ಮುಖ್ಯ ಮಂತ್ರಿಗಳಾಗಿ ನಿಯಮಿಸಲ್ಪಟ್ಟಿದ್ದು ಅವರು ಜೂನ ೧ ರಿಂದ ಅಧಿಕಾರ ವಹಿಸುವರಾಗಿ ತಿಳಿಯುತ್ತದೆ.

ಹಿಂದುಸ್ತಾನ ಸರಕಾರದ ಅರ್ಥಸಚಿವರಾದ ಮಾನ್ಯ ಷಣ್ಮುಖಂ ಚೆಟ್ಟಿಯವರು ಸ್ಟರ್ಲಿಂಗ ಮಾತುಕತೆಗಳ ಸಂಬಂಧದಲ್ಲಿ ಲಂಡನಕ್ಕೆ ತೆರಳಲಿದ್ದಾರೆ. ಮುಂಬಯಿಯಲ್ಲಿ ಶ್ರೀ. ಟಿ. ಟಿ. ಕೃಷ್ಣಮಾಚಾರಿ, ಸರ್ ಪುರುಷೋತ್ತಮ ಠಾಕೂರದಾಸ, ಸರ್ ಚಿಂತಾಮಣಿ ದೇಶಮುಖ (ರಿಝರ್ವ ಬ್ಯಾಂಕ ಗವರ್ನರರು) ಮೊದಲಾದವರು ಅವರನ್ನು ಕೂಡಿಕೊಳ್ಳುವರು.

ಹಿಂದುಸ್ತಾನ ಮಂತ್ರಿಮಂಡಲದ ಸಭೆಯು ತಾ. ೨೨ ರಂದು ಸಂಜೆಯ ೫ ಗಂಟೆಗೆ ಸರಕಾರಿ ಭವನದಲ್ಲಿ ಸೇರಿತ್ತು. ಮುಖ್ಯ ಪ್ರಧಾನರು ಅಧ್ಯಕ್ಷತೆ ವಹಿಸಿದ್ದರು.

ಅಂಧ್ರ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಪ್ರೊ. ಎನ್. ಜಿ. ರಂಗಾ ಅವರು ತಾ. ೨೨ ರಂದು ಮುಖ್ಯ ಪ್ರಧಾನರಾದ ಪಂ. ನೆಹರು ಅವರೊಡನೆ ಹೈದರಾಬಾದದ ಗಡಿಯಲ್ಲಿಯ ಘಟನೆ ಹಾಗು ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಿ ಪೂರ್ವ ಗೋದಾವರಿ ಮತ್ತು ವಿಶಾಖಾಪಟ್ಟಣ ಜಿಲ್ಹೆಗಳಲ್ಲಿಯ ಗಡಿಭಾಗಗಳಲ್ಲಿ ಪ್ರವಾಸ ಮಾಡಲು ತೆರಳಿ ಹೋದರು.

ಭಾರತ ಅಹಾರ ಮಂತ್ರಿ ಶ್ರೀ. ಜಯರಾಮದಾಸ ದೌಲತರಾಮರು ಮದ್ರಾಸದ ಪತ್ರಿಕಾಕರ್ತರಿಗೆ ಕೊಟ್ಟ ಸಂದರ್ಶನದಲ್ಲಿ ಮುಂಬಯಿ ಮತ್ತು ಮದ್ರಾಸ ಪ್ರಾಂತಗಳು ಕೊರತೆಯ ಪ್ರದೇಶಗಳೆಂದೂ ಇವುಗಳತ್ತ ಲಕ್ಷ್ಯಪೂರ್ವಕವ ಬಗ್ಗೆ ಶ್ರೀ. ಬಿ. ಎಲ್. ಪಟೇಲರು ವಿಶೇಷ ಅಧಿಕಾರಿಗಳೆಂದು ನೇಮಿಸಲ್ಪಟ್ಟಿದ್ದಾರೆಂದೂ ಹೇಳಿದರು.

ಅಖಿಲಭಾರತ ಆಕಾಶವಾಣಿಯ ಬಿಜವಾಡಾ ನಿಲ್ದಾಣವು ಈ ಅಕ್ಟೋಬರದಿಂದ ಪ್ರಾರಂಭವಾಗುವದೆಂದು ತಿಳಿಯುತ್ತದೆ. ನಿಲ್ದಾಣವನ್ನು ಕಟ್ಟುವದು ಈಗಾಗಲೇ ಪ್ರಾರಂಭವಾಗಿದ್ದು ೪ ತಿಂಗಳಲ್ಲಿ ಅದು ಮುಗಿಯುವದು.

ನಿಜಾಮ ಸರಕಾರದ ಸುಂಕದ ಉತ್ಪನ್ನ ಕರಗಿತು

ನಿಜಾಮ ಸರಕಾರದ ಸುಂಕದ ಉತ್ಪನ್ನವು ಮಾರ್ಚ ೩೧ ಕ್ಕೆ ಮುಗಿದ ತ್ರೈಮಾಸಿಕದಲ್ಲಿ ಕಳೆದ ವರ್ಷದ ಈ ಅವಧಿಯಲ್ಲಿ ಬಂದದ್ದಕ್ಕಿಂತ ೧೨ ಲಕ್ಷ ರೂ. ಕಡಮೆಯಾಗಿರುವದು. ಕಳೆದ ವರ್ಷ ಈ ೬ ತಿಂಗಳಲ್ಲಿ ಆಯಾತ ನಿರ್ಯಾತಗಳಿಂದ ೧೬೯, ೨೦, ೯೦೮ ರೂಪಾಯಿ ಉತ್ಪನ್ನವಾಗಿತ್ತು. ಗಡಿಗಳಲ್ಲಿಯ ದುರ್ಘಟನೆಗಳಿಂದ ಸಾರಿಗೆಗೆ ತಡೆಯಾಗಿದ್ದುದು ಹಾಗು ಹಿಂದಿ ವಸಾಹತುಗಳಿಂದ ಆಯಾತವಾಗುವ ಕೆಲವು ಪದಾರ್ಥಗಳ ಮೇಲೆ ನಿರ್ಬಂಧ ಹಾಕಿದ್ದುದು ಈ ಉತ್ಪನ್ನ ಕಡಮೆಯಾಗಲು ಕಾರಣವೆಂದು ಹೇಳಲಾಗುತ್ತದೆ.

ನೌಕರಿಯಲ್ಲಿ ಜಾತೀಯ ಪ್ರಾತಿನಿಧ್ಯವಿಲ್ಲ

ಹಿಂದುಸ್ತಾನ ಸರಕಾರವು ಒಂದು ಪ್ರಕಟನೆ ಹೊರಡಿಸಿ ನೌಕರಿಯಲ್ಲಿ ಹರಿಜನರ ಹೊರತಾಗಿ ಕಾಯ್ದಿಟ್ಟ ಸ್ಥಳಗಳನ್ನು ಕೇವಲ ಯೋಗ್ಯತೆಯ ಮೇಲಿಂದ ತುಂಬಲಾಗುವದೆಂದೂ ಜಾತೀಯ ಪ್ರಾತಿನಿಧ್ಯ ಗಣಿಸಲಾಗುವದಿಲ್ಲವೆಂದೂ ಸ್ಪಷ್ಟಪಡಿಸಿದೆ.

ಹಿಂದುಸ್ತಾನ ಸರಕಾರವು ೧೯೪೭ ಅಗಸ್ಟ ೧೫ ಕ್ಕೆ ನೌಕರಿಯ ವಿಷಯದಲ್ಲಿ ಜಾತೀಯ ಪ್ರಾತಿನಿಧ್ಯವನ್ನು ದಲಿತರ ಹೊರತಾಗಿ ಗಮನಿಸ ಕೂಡದೆಂದು ನಿರ್ಧರಿಸಿದೆ. ಸ್ಪರ್ಧೆ ಪರೀಕ್ಷೆಗಳಿಲ್ಲದೆ ತುಂಬತಕ್ಕ ಸ್ಥಳಗಳನ್ನು ಮಾತ್ರ ಆಯಾ ಪ್ರಾಂತದಲ್ಲಿಯ ಭಿನ್ನ ಭಿನ್ನ ಮತಗಳ ಜನ ಸಂಖ್ಯೆಯ ಪ್ರಮಾಣದಿಂದ ಜನರನ್ನು ಸೇರಿಸಿಕೊಳ್ಳಬೇಕೆಂಬ ಸಾಮಾನ್ಯ ತತ್ವವನ್ನು ಸರಕಾರವು ಇಟ್ಟುಕೊಂಡಿದೆ.

ಕಮ್ಯುನಿಸ್ಟರಿಗೆ ಸೋಲು

ಪೆಂಬೂರಿನಲ್ಲಿ ಎಂ. ಎಸ್. ಎಂ. ರೇಲ್ವೆ ಕಾಮಗಾರ ಸಂಘದ ವಾರ್ಷಿಕ ಪರಿಷತ್ತು ಸೇರಿತ್ತು. ಆಗ ಸಂಘ ಅಧಿಕಾರ ಸ್ಥಳಗಳ ಆಯ್ಕೆಯೂ ಆಯ್ತು ಅಧಿಕಾರ ಸ್ಥಳಗಳಿಗೆ ನಿಂತ ಕಮ್ಯುನಿಸ್ಟ ಪಕ್ಷದ ಹುರಿಯಾಳುಗಳು ಸೋಲಿಸಲ್ಪಟ್ಟರು. ಅ. ಭಾ. ರೇಲ್ವೆ ಕೆಲಸಗಾರರ ಮಹಾಮಂಡಳದ ಕಾರ್ಯದರ್ಶಿಗಳಾದ ಶ್ರೀ. ಗುರುಸ್ವಾಮಿಯವರು ಕಮ್ಯುನಿಸ್ಟರ ಬೆಂಬಲವಿದ್ದ ಶ್ರೀ. ಕಲ್ಯಾಣಸುಂದರಂ ಅವರನ್ನು ಸೋಲಿಸಿ ಪ್ರಚಂಡ ಬಹುಮತದಿಂದ ಅಧ್ಯಕ್ಷರಾಗಿ ಆರಿಸಿ ಬಂದರು. ಅ. ಭಾ. ಟ್ರೇಡ ಯೂನಿಯನ ಕಾಂಗ್ರೆಸಿನವರು ಮಹಾಮಂಡಲದಲ್ಲಿ ಒಡಕುಂಟು ಮಾಡಲು ಯತ್ನಿಸುವದನ್ನು ಖಂಡಿಸುವ ಗೊತ್ತುವಳಿಯೊಂದನ್ನು ಪರಿಷತ್ತಿನಲ್ಲಿ ಸ್ವೀಕರಿಸಲಾಯಿತ್ತು ಈ ಸಂಘಕ್ಕೆ ಕೆಂಪು ಧ್ವಜವೇ ಸದಾ ಇರತಕ್ಕದ್ದೆಂದು ನಿರ್ಣಯಿಸಲಾಯ್ತು.

ಪಶ್ಚಿಮ ಬಂಗಾಲ

ಪ್ರಾಂತದಲ್ಲಿ ಬಟ್ಟೆಯ ಬೆಲೆಯು ಮಿತಿಮೀರಿ ಏರಿದ್ದರಿಂದ ಪಶ್ಚಿಮ ಬಂಗಾಲ ಸರಕಾರವು ಪ್ರಾಂತದಲ್ಲಿಯ ಬಟ್ಟೆ ಸಂಗ್ರಹದ ಅರ್ಧದಷ್ಟನ್ನು ಸೀದಾ ಪದ್ಧತಿಯನ್ವಯ ಹಂಚಲು ಅಪ್ಪಣೆ ಕೊಡಬೇಕೆಂದು ಭಾರತ ಸರಕಾರಕ್ಕೆ ಬೇಡಲು ನಿರ್ಧರಿಸಿರುವದಾಗಿ ತಿಳಿದುಬರುತ್ತದೆ. ಭಾರತ ಸರಕಾರದ ಅಪ್ಪಣೆ ಸಿಕ್ಕುತ್ತಲೇ ಸೀದಾಪದ್ಧತಿಯು ಜಾರಿಯಲ್ಲಿ ಬರುವದು ಮತ್ತು ಸಹಕಾರಿ ಸಂಸ್ಥೆ ಹಾಗೂ ಅಪ್ಪಣೆ ಪಡೆದ ವ್ಯಾಪಾರಿಗಳ ಮುಖಾಂತರ ಬಟ್ಟೆಯನ್ನು ಹಂಚಲಾಗುವದು.

ಪಾಕಿಸ್ತಾನ

ನಾರಾಯಣ ಗಂಜದಲ್ಲಿ (ಡಾಕಾ) ತಾ. ೧೫ ಕ್ಕೆ ಮುಸ್ಲಿಂಲೀಗ ಸಭೆ ಸೇರಿತ್ತು ಸಭೆಯಲ್ಲಿ ಎರಡು ಬಣಗಳಲ್ಲಿ ತಿಕ್ಕಾಟವಾಗಿ ೧೨ ಜನರು ಗಾಯಗೊಂಡರು ೨೫ ಜನ ಪ್ರಮುಖರನ್ನು ಬಂಧಿಸಲಾಗಿದೆ.

ಪಾಕಿಸ್ತಾನ ಘಟನಾ ಸಮಿತಿಯ ಸದಸ್ಯನಾಗಿರತಕ್ಕವನು ಪಾಕಿಸ್ತಾನ ನಾಗರಿಕನಿರಬೇಕು ಇಲ್ಲವೆ ಆಗಬೇಕು ಎಂಬ ಗೊತ್ತುವಳಿಯನ್ನು ತಾ ೧೮ ಕ್ಕೆ ಪಾಕಿಸ್ತಾನ ಘಟನಾ ಸಮಿತಿಯಲ್ಲಿ ಸ್ವೀಕರಿಸಲಾಯಿತು: ಇದರ ಫಲವಾಗಿ ಜ. ಸುಹರ್ದಿಯವರು ಸದಸ್ಯತ್ವ ಕಳೆದುಕೊಂಡಿದ್ದಾರೆ ಈ ಬಗ್ಗೆ ಮಾತನಾಡುತ್ತ ಸುಹ್ರವರ್ದಿಯವರು ನನ್ನಂತಹನನ್ನು ಹೊರಗೆ ಹಾಕಲೆಂದೇ ಈ ಗೊತ್ತುವಳಿಯು ಸ್ವೀಕೃತವಾಗಿದೆಯೆಂದು ಉದ್ಗಾರ ತೆಗೆದರಾಗಿ ತಿಳಿಯುತ್ತದೆ.

ಮುಂಬಯಿ ಕೈದಿಯ ಮೋಸ

ಮುಂಬಯಿಯ ಕಾರಾಗೃಹದಲ್ಲಿದ್ದ ದಿವಾಕರ ಪುರುಷೋತ್ತಮ ಪಟೇಲ ಎಂಬ ಕೈದಿಯು ಒಂದು ಕೃತಕ ಪತ್ರದಿಂದ ಜೇಲ ಅಧಿಕಾರಿಯನ್ನು ವಂಚಿಸಿ ಕ ವರ್ಗದಿಂದ ಬ ವರ್ಗಕ್ಕೆ ಹೋಗಿದ್ದನು. ಇಷ್ಟು ಸಾಲದೆ ಇದೇ ಬಗೆಯ ಕೃತಕ ಮಾಡಿ ಜೇಲಿನಿಂದ ಬಿಡುಗಡೆಹೊಂದಲು ಹವಣಿಸಲು ಆಗ ಅವನ ಮೋಸಗಾರಿಕೆಯಲ್ಲ ಹೊರಬಿತ್ತು. ಇದಕ್ಕಾಗಿ ಅವನಿಗೆ ಮತ್ತೆ ಒಂದು ವರ್ಷದ ಶಿಕ್ಷೆ ವಿಧಿಸಲಾಯಿತು.

ಸರಕಾರದ ಸಾಲ ಪತ್ರಗಳು

ಹಿಂದುಸ್ತಾನ ಸರಕಾರದ ಆರ್ಥಿಕ ಶಾಖೆಯವರು ಸರಕಾರದ ಹೊಸ ಸಾಲಪತ್ರಗಳ ವಿಷಯದಲ್ಲಿ ಒಂದು ಪ್ರಕಟನೆ ಹೊರಡಿಸಿದ್ದು ಅದರಸಾರ ಹೀಗಿದೆ.

೧೦೦ ಕ್ಕೆ ವರ್ಷಕ್ಕೆ ೨॥ ರೂ ಬಡ್ಡಿದರದ ೧೯೪೯—೫೨ ರ ಸಾಲಪತ್ರಗಳನ್ನು ಮಾತ್ರ ೧೯೪೮ ಜೂನ ೧ ನೇ ತಾ ನಿಂದ ಕೊಡಲು ಪ್ರಾರಂಭಿಸಿ ೩೫ ಕೋಟಿ ರೂ ಗಳಷ್ಟು ಒಟ್ಟು ಹಣವಾದಕೂಡಲೇ ಕೊಡುವದನ್ನು ನಿಲ್ಲಿಸಿ ಬಿಡಲಾಗುವದು. ಬಡ್ಡಿಯನ್ನು ಮೇ ೧೫ ರಿಂದ ಆಕರಣೆ ಮಾಡಲಾಗುವದಲ್ಲದೆ ಇದರ ಮೇಲೆ ಆದಾಯಕರವನ್ನು ಹೇರಲಾಗುವದು.

ಶ್ರೀ ಕರಮರಕರರು ಜೂನ ೧೫ ಕ್ಕೆ ಹಿಂದುಸ್ತಾನಕ್ಕೆ ಬರುವರು

ಪರದೇಶ ಪ್ರವಾಸ ಮುಗಿಸಿಕೊಂಡು

ಹವಾನಾ ಪರಿಷತ್ತಿನ ಕಾರ್ಯಕಲಾಪ ಮುಗಿಸಿಕೊಂಡು ಶ್ರೀ ದತ್ತಾತ್ರಯ ಕರಮರಕರರು ಇದೇ ಜೂನ ೧೫ ಕ್ಕೆ ಹಿಂದುಸ್ತಾನಕ್ಕೆ ಮುಟ್ಟುವರು ಅವರು ನ್ಯೂಯಾರ್ಕಿನಿಂದ ಇದೇ ೨೪ ಕ್ಕೆ ಹೊರಟು ಪ್ಯಾರೀಸಿಗೆ ಹೋಗುವರು ಅಲ್ಲಿಂದ ಅವರು ಲಂಡನ್ನಿಗೆ ಹೋಗಿ ಕೆಲದಿನ ಅಲ್ಲಿ ಇರುವರು ನ್ಯೂಯಾರ್ಕಿನಲ್ಲಿ ಅವರು ಇದ್ದಾಗ ಯುಕ್ತರಾಷ್ಟ್ರ ಸಂಘದ ಕಾರ್ಯಪದ್ಧತಿಯನ್ನು ಅವಲೋಕಿಸಿದರು. ಮತ್ತು ಒಂದೆರಡು ವಿಶ್ವವಿದ್ಯಾಪೀಠಗಳನ್ನು ಸಂದರ್ಶಿಸಿದರು.

ಚಂದಾದಾರರಲ್ಲಿ ವಿನಂತಿ

—●—

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ ನಿರಾಕರಿಸಿ ಹಿಂದುಗಡೆ M-O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚ ಸಹಿತ(ಚಂದಾಹಣ ಮುಂಗಡ)

೧ ವರ್ಷ ೬-೪-೦
೬ ತಿಂಗಳಿಗೆ . . . ೩-೪-೦
೩ ,, ... ೧-೧೨-೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ಮುದ್ರಾ ರಾಕ್ಷಸಿ

(ಬಳ್ಳಾರಿ ಬೀಚಿ)

ಇದೇನು ಅವಮಾನವೆಂದು ಸ್ತ್ರೀಯರೆಲ್ಲರೂ ಸಿಟ್ಟಿಗೆ ಬಂದು ಸಂಪು ಹೂಡುವದು ಬೇಡ ಸದ್ಯ. 'ಸಿ' ಅನ್ನುವದು 'ಸ' ಅನ್ನುವದಕ್ಕೆ ಆದ ಮುದ್ರಾ ರಾಕ್ಷಸನ ಹಾವಳಿಯು ಪರಿಣಾಮ ಅಷ್ಟೆ. ಅಚ್ಚಿನ ಮನೆಯಲ್ಲಿ ಮೊಳೆ ಜೋಡಿಸುವವರ ಮೇಲೆ ನಿಮಗೂ ಕೊಂಚ ಕೋಪ ಬರಲೆಂದು ಬುದ್ಧಿಪೂರ್ವಕ ಮಾಡಿದ ಪರಪಾಟು ಇದು. 'ಬೈ' ಬೀಳುವಲ್ಲಿ 'ಕೈ' ಬೀಳಬಹುದು ಒಂದೊಂದು ಬಾರಿ. ಪಾಪ! ಮೊಳೆ ಜೋಡಿಸುವವನೂ ತಪ್ಪು ಮಾಡುವ ಮನುಷ್ಯ ಜಾತಿಗೆ ತಾನೇ ಸೇರಿದವನು? ಆದರೆ ಬರೀ ಬೈ ಬೀಳುವಲ್ಲಿ ಕೈ ಬಿದ್ದರೆ ಆಗುವ ಪ್ರಮಾದದಿಂದ, ಅದೇ ಕೈಯಿಂದ ಹಣೆ ಬಡಿದುಕೊಳ್ಳಬೇಕಾಗುತ್ತೆ ಆ ವೇಳೆ.

ಊರಲ್ಲಿ ಒಂದು ಬಾರಿ ಚುನಾವಣೆ ರೋಗ ಹಬ್ಬಿತು. ಎಲ್ಲಿ ನೋಡಿದರೂ ಜನಸಂದಣಿ ರಸ್ತೆ ತುಂಬ ಗಾಡಿಗಳು ಅತಿ ವಿಚಿತ್ರ ಅದರ ಉಮೇದುವಾರರ ಏಜಂಟರಿಂದ. ಆರಡಿ ಎತ್ತರ ಮೂರಡಿ ಅಗಲದ ಅಕ್ಷರಗಳುಳ್ಳ ಹಾಸಿಗೆಯಂತಹ ಕಾಗದಗಳು. ಗೋಡೆ ಗೋಡೆಗೂ ನಿಂತಿವೆ. ಎದುರಿನಲ್ಲಿ ಈ ವಾಕ್ಯವನ್ನು ಓದಿ ಕಕ್ಕಾಬಿಕ್ಕಿಯಾಗಿ ಹಾಗೆಯೇ ನಿಂತೆ:

"ಕೋತಿ ಮಾರ್ಕಿನ ಅಸದುಲ್ಲಾರಿಗೇ ನಿಮ್ಮ ಮಗಳನ್ನ ಕೊಡಿರಿ"! ಏನು ಇದು, ಅಸದುಲ್ಲಾರ ಕಲೆ! ಕೈತಿಕ್ಕುತ್ತ ಮುಂದೆ ನಿಂತ ಅಸದುಲ್ಲಾರ ಏಜಂಟ ಹೇಳಿದ: "ಅಚ್ಚಿನಲ್ಲಿ ಕೊಂಚ ತಪ್ಪಿದೆ, ಸ್ವಾಮಿ. 'ಕೋಳಿ ಮಾರ್ಕಿನ ಅಸದುಲ್ಲಾರಿಗೇ ನಿಮ್ಮ ಮತಗಳನ್ನು ಕೊಡಿರಿ' ಎಂದಿರಬೇಕಿತ್ತು" ಎಂದು ಬರೆದವನ ಮನಸಿನಲ್ಲಿದ್ದುದಕ್ಕೆ ಭಾಷ್ಯವನ್ನು ಮಾಡಿದ. ಸದ್ಯ ಮಗಳು ಉಳಿದಳು ಎಂದು ಮನೆಗೆ ನಡೆದೆ.

ಮೊಳೆ ಜೋಡಿಸುವವರು ಪಂಚಮದಳದವರಿರಬಹುದೇ? ಎಂದು ಯೋಚಿಸುತ್ತ ಹಾಗೆಯೇ ಮನೆ ಮುಟ್ಟಿದಾಗ ಮೇಜಿನ ಮೇಲೆ ಪೋಸ್ಟು ಕುಳಿತಿದ್ದಿತು. ಒಂದಂತೂ ವಿವಾಹ ಮಹೋತ್ಸವ ಆಹ್ವಾನ ಪತ್ರಿಕೆ. ಮದುವೆ ಯಾರದು ಎನ್ನುವದೊಂದನ್ನು ಬಿಟ್ಟು ಬೇರೆ ಎಲ್ಲವೂ ತಿಳಿಯಿತು.

ನನ್ನ ತಮ್ಮನ ಮಗನಾದ ಅಪ್ಪಾರಾಯನಿಗೆ } ರಾ। ಶ್ರೀ ಹನುಮಂತರಾಯರ ಮಗನಾದ ಸೀತೂನೊಂದಿಗೆ

ಎಂದಿದ್ದಿತು. ಎರಡೂ ವರಗಳೇ!

"ಹನುಮಂತರಾಯರ ಮಗಳು, ಸೀತೂ, ಅವಳ ಮದುವೆ" ಎಂದಳು ನನ್ನ ಅವಳು ಹಿಂದಿನಿಂದ. ಪುರುಷ-ಪುರುಷರ ಮದುವೆಗಳು ಜರುಗಿದರೆ ನನ್ನ ಮಗಳಿಗೆ ಇನ್ನೇನು ವರ ಸಿಕ್ಕೀತೆಂದು ದಿಗಿಲಾಗಿತ್ತು. ಜೊತೆಯಲ್ಲಿದ್ದ ಇನ್ನೊಂದು ಲಕ್ಕೋಟೆಯನ್ನು ತೆಗೆದೆ. ಗಾತ್ರದ ಮೇಲೆಯೇ ತಿಳಿಯಿತು, ನನ್ನ ಕತೆ ಮರಳಿ ಬಂದಿದೆಯೆಂದು. ಹೋಗಿ ಬರುವ ಚಾರ್ಜು ಕೊಟ್ಟೇ ಕಳುಹಿದ್ದೆ ನನ್ನ ಕತೆಗೆ. ಸಂಪಾದಕರ ಪ್ರಾಮಾಣಿಕತನಕ್ಕೆ ಮೆಚ್ಚಿ, ಒಳ ನೋಡಿದೆ. ಮುದ್ರಾಗಿ ಅಚ್ಚಾಗಿದ್ದ ಪತ್ರದೊಂದಿಗೆ ನನ್ನ ಕತೆಯೂ ಬಂದಿದ್ದಿತು ಸಂಪಾದಕರ ಪತ್ರದಲ್ಲಿ ಇಷ್ಟೇ ಇದ್ದುದು:

"ನಿಮ್ಮ ಕತ್ತೆಯು ಬೆಳವಣಿಗೆ ಬಹು ಚೆನ್ನಾಗಿದೆ. ಓಟವೂ ಇದೆ. ಆದರೆ ನಮ್ಮ ಪತ್ರಿಕೆಯಲ್ಲಿ ಎಡೆಯಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ" ಸಾಲದೇ, "ತ್ತ" ದಿಂದ ಇಷ್ಟು ಪ್ರಮಾದವಾದರೆ?

ಕಾರ್ಯಬಾಹುಲ್ಯದ ಮೂಲಕ ನಾಲ್ಕು ದಿನಗಳು ಮದರಾಸಿಗೆ ಹೋಗಬೇಕಾಯಿತು. ಆ ಊರಲ್ಲಿ ಎಲ್ಲಿ ಉಳಿಯಬೇಕೆಂದು ಅನುಮಾನಿಸುತ್ತಿದ್ದಾಗ ಸಿಕ್ಕಿ ಬಿಟ್ಟಿತು ಜಾಹೀರಾತು. "ಒಂದು ಬಾರಿ ನಮ್ಮ ಮದರಾಸಿ ದಾಡ್ಜಿಂಗ ಹೌಸಿನಲ್ಲಿ ಇಳಿದು ನೋಡಿರಿ"— (ನಿಮ್ಮ ಹಾಸಿಗೆ ಟ್ರಂಕು ಉಳಿದೀತೇ, ಎಂದೇಕೋ ಮುಂದೆ ಹಾಕಿರಲಿಕ್ಕಿಲ್ಲ!) ಎದುರು ಪುಟದಲ್ಲಿದ್ದುದು "ರಾಜರಾಥಿ ಹೋರ್ಡಿಂಗ ಹೌಸು" ಇದಕ್ಕೇ ಏನೋ ಮದರಾಸಿಗಳಿಗೆ ಉತ್ತರಾದಿಗಳೆಂದರೆ ಕಣ್ಣು ಕಿಸಿಯುವದು ಎಂದುಕೊಂಡೆ.

ಓದುವಾಗ ಬರುವ ಅಚ್ಚಿನ ತಪ್ಪುಗಳು ಉಣ್ಣುವಾಗ ಅನ್ನದಲ್ಲಿ ಬರುವ ಹರಳಿನಂತೆ. ಅರ್ಧ ಹರಳು, ಇನ್ನರ್ಧ ಕಸರು ಇದ್ದುದನ್ನು ಇಂದು ನಾವು ಅಕ್ಕಿ ಎಂದು ಕೊಂಡು ತಿನ್ನುತ್ತಿಲ್ಲವೆ? ತಪ್ಪುಗಳಿದ್ದರೆ ಇರಲಿ ಎಂದು ದೊಡ್ಡ ಮನಸ್ಸು ಮಾಡಿ ೩೨ ಪುಟದ ವಾರಪತ್ರಿಕೆ ೮'ಆಣೆ ಕೊಟ್ಟು ಕೊಂಡೆ ಮೊದಲನೆಯ ಪುಟದಲ್ಲಿಯೇ 'ಏಕೀಕರಣ'. ಸೂಜಿಗಲ್ಲಿನ ಸೆಳೆತಕ್ಕೆ ಬಿದ್ದಂತಾಯಿತು — ಯಾವ ಕನ್ನಡಿಗನಿಗೆ ಅಗಲಿಕ್ಕಿಲ್ಲ? ಕನ್ನಡಕವನ್ನು ಹಣೆಗೆ ಏರಿಸಿ, ದೀರ್ಘ ಲೇಖನವನ್ನು ಓದಲೇಬೇಕೆಂದು ನಿಶ್ಚಯ ಮಾಡಿ ಪ್ರಾರಂಭ ಮಾಡಿದೆ. ತಲೆಬರಹವನ್ನು ಓದಿದ ಕೂಡಲೆ ರಕ್ತ ಕುದಿಯಿತು. "ಏಕೀಕರಣಕ್ಕೆ ಹುಚ್ಚು ಜನರ ಬೆಂಬಲವಿದೆ" ಎಂದಿರಬೇಕೆ? ನಾನೂ ಬೆಂಬಲ ಕೊಟ್ಟವನೇ. ಮುಂದಿನ ವಾಕ್ಯದಲ್ಲಿದ್ದಿತು ಹೆಚ್ಚು ಜನರ ಬೆಂಬಲವೆಂದು ಕೈ ಮುಗಿದು ಮುಂದಿನ ಪುಟ ತಿರುವಿದೆ "ಬರಗಾಲದ ಮುಖ್ಯ ಮಂತ್ರಿಗಳು ಹಳ್ಳಿ ಹಿಡಿದರು" ಎಂದಿದ್ದಿತು, ಮೂರು ಹಗಲು ಮೂರು ರಾತ್ರಿ ಯೋಚಿಸಿದೆ, ಅವರು ಹಳ್ಳಿಯನ್ನು ಏಕೆ ಹಿಡಿದಿರಬಹುದೆಂದು. ಬರಗಾಲವೇನಾದರೂ ಕಾರಣವಿರಬಹುದೇ ಎಂದುಕೊಂಡೆ. ಗೆಳೆಯರೊಬ್ಬರು ಹೇಳಿದರು: "ಬಂಗಾಲದ ಮುಖ್ಯ ಮಂತ್ರಿಗಳು ದಿಲ್ಲಿ ಹಿಡಿದರು" ಎಂದು.

ಕಡೆಯ ಪುಟವೊಂದನ್ನು ನೋಡಿ ಊಟಕ್ಕೆ ಎದ್ದರಾಯಿತು ಎಂದು ಮುಂದೆಸಾಗಿದೆ. ಎಡೆಗಡೆ ಮೂಲೆಯಲ್ಲಿದ್ದೊಂದು ವಾರ್ತೆಯು ತಂಣಗೆ ಮಾಡಿತು.

"ಜಲಗಾಂವ ಲಾಲ ಮೆಹತಾರವರು ವೈಕುಂಠಕ್ಕೆ ಹೊರಟರು." ಇದರ ಇತ್ಯರ್ಥವಾಗಲೇಬೇಕೆಂದು ಎದ್ದು ಬಾಗಿಲಿಗೆ ಬಂದೆ. "ಊಟದ ಹೊತ್ತಿನಲ್ಲಿ ಎಲ್ಲಿಗೆ ಸವಾರಿ" ಎಂದು ಅವಳ ಪ್ರಶ್ನೆ ಹಿಂದೆಯೇ ಬಂದಿತು., ಪತ್ರಿಕೆಯನ್ನು ಅವಳ ಕೈಯಲ್ಲಿಕ್ಕಿ ಆ ವಾಕ್ಯವನ್ನು ತೋರಿಸಿ ಏನಿದರ ಅರ್ಥವೆಂದೆ. ಒಳಗಿಂದ ಇನ್ನೊಂದು ಪತ್ರಿಕೆಯನ್ನು ತಂದು ತೋರಿಸಿದಳು.

"ವೈಕುಂಠಲಾಲ ಮೆಹತಾರವರು ಜಲಗಾಂವಕ್ಕೆ ಹೊರಟರು" ಎಂದಿದ್ದಿತು.

"ಯಾವದೇ ರೀತಿಯ ವಸ್ತ್ರಗಳನ್ನು ಎರಡು ತಿಂಗಳ ವರೆಗೆ ಯಾರೂ ಹಾಕಕೂಡದೆಂದು ದಿಲ್ಲಿ ಮ್ಯಾಜಿಸ್ಟ್ರೇಟರ ಅಜ್ಞೆ" ಎಂದೊಂದು ವೃತ್ತಪತ್ರಿಕೆ ಸಾರಿತು. ಬಟ್ಟೆ ಕೊರತೆಯಾಗಿರುವದೇನೋ ನಿಜ. ಆದರೆ ಇದ್ದೆರಡು ಬಟ್ಟೆಗಳನ್ನು ಧರಿಸಲೂ ಮ್ಯಾಜಿಸ್ಟ್ರೇಟರ ಆಕ್ಷೇಪಣೆಯೇ? ನಾಚಿಕೆಗೇಡು! "ಶಸ್ತ್ರಾಸ್ತ್ರಗಳನ್ನು ಹಾಕಕೂಡದೆಂದು" ಅವರ ಅಜ್ಞೆಯಂತೆ, ಆ ವೇಳೆ ತಿಳಿಯಿತು. ಅಚ್ಚಿನ ಮನೆಯವರು 'ಸನ'ವನ್ನು ತಿಂದರೆ ಮ್ಯಾಜಿಸ್ಟ್ರೇಟರದೇನು ತಪ್ಪು? ಪಾಪ.

ಜಾಹೀರಾತುಗಳಲ್ಲಿಯೂ ತಪ್ಪುಗಳೆಂದರೆ ಕೊಂಚ ಯಾರಿಗಾದರೂ— ಜಾಹೀರಾತಿಗೆ ಹಣ ಕೊಟ್ಟವರಿಗಾದರೂ— ಕಷ್ಟ ಅಲ್ಲವೆ? ಸಂಗೀತ ಕಲಿತ ಸಲಕ್ಷಣ ಕನ್ನೆಯನ್ನು ಮದುವೆಯಾಗಲು ಒಬ್ಬ ರಸಿಕ ಯುವಕ ಬೇಕಾಗಿದೆ ಎನ್ನುವದರಲ್ಲಿ 'ರಸಿಕ' ಎನ್ನುವದು 'ರಜಕ' ಅಯಿತು. ಏನು ಸೀರೆ ಒಗೆಯಲಿಕ್ಕೇ! ಕತ್ತಿ ಮತ್ತು ಕತ್ತರಿಗಳು ಬೇಕೋ, ಎನ್ನುವದಕ್ಕೆ ಕತ್ತೆ ಮತ್ತು ಕತ್ತೆಮರಿಗಳು ಬೇಕೋ ಎಂದೊಂದು ಜಾಹೀರಾತು.

'ಅರಸನ ಕುವರಿಯ ಕೈ ಹಿಡಿದವನೇ ಧನ್ಯ' ವೆಂಬೊಂದು ವಾಕ್ಯವು 'ಅಗಸನ ಕುದುರೆಯ ಕೈ ಹಿಡಿದವನೇ ಧನ್ಯ'ನೆಂದು ಓದಿತು. ಸನಾತನ ಧರ್ಮವಂತೂ ಸಂತಾನಧರ್ಮವೆಂದೇ ಆಗಿಬಿಟ್ಟಿತು. 'ಪೋಲಿ ಅಧಿಕಾರಿಗೂ ಹಿಂದೀ ಕಾಮಿಗಳಿಗೂ ಯುದ್ಧ' ವೆಂದಿದ್ದರೆ ಅದನ್ನು ಪೋಲೀಸ ಅಧಿಕಾರಿಯೇ ಇರಬೇಕೆಂದು ಊಹಿಸಿದೆ. ಅದು ತಪ್ಪು, 'ಕೂಲಿ ಅಧಿಕಾರಿ' ಎಂದಿರಬೇಕೆಂದು ನನ್ನ ಗೆಳೆಯರೊಬ್ಬರು ನನ್ನೊಡನೆ ಯುದ್ಧ ಹೂಡಿದರು. "ಬಾವನೊಟ್ಟಿಗೆ ಅಕ್ಕ ಬರುವಾಗ ನನಗೆ ಮಾವಿನ ಹಣ್ಣನ್ನು ತರುವಳು" ಎಂದಿದ್ದ ವಾಕ್ಯಕ್ಕೆ ರೂಪಭೇದ ರೋಗ ಬಂದು "ಬಾವಗನೊಟ್ಟಿಗೆ ಅಕ್ಕ ಬರುವಾಗ ನನಗೆ ಮಾವನ ಹೆಣ್ಣನ್ನು ತರುವಳು" ಎಂದಾಗಿದ್ದಿತು. "ಕೂಲಿಕಾರರ ಬೇಡಿಕೆಗಳನ್ನು ಮಾನ್ಯಮಾಡಿರಿ" ಎಂಬ ದೊಡ್ಡಕ್ಷರದ ತಲೆಬರಹವು "ಕೂಲಿಕಾರರ ಬೇಡಿಗಳನ್ನು ಮಾನ್ಯಮಾಡಿರಿ" ಎಂದು ಕೂಗುತ್ತಿತ್ತು.

"ಮಾನವನ ಹಕ್ಕು ಓಟುಹಾಕುವದು, ಎಂದು ಆಳುವ ಅರಸರು ಕಡಿಗೆ ನುಡಿದರು" ಎಂಬ ನಾನೇ ಕಳಿಸಿದ ವಾರ್ತೆಯು "ಮಾವನ ಬೆಕ್ಕು ಕೋಟು ಹಾಕುವದು, ಎಂದು ಆಳುವ ಅಗಸರು ಗಡಿಗೆ ಒಡೆದರು" ಎಂದು ಬಂದುದನ್ನು ನೋಡಿದ ಮೇಲೆ ನನ್ನ ತಲೆಯಲ್ಲಿದ್ದ ಅನುಮಾನವು ಪೂರ್ತಿ ಬಲವಾಯಿತು. ಬ್ರಹ್ಮನು ಬರೆದ ನನ್ನ ಹಣೆಬರಹದಲ್ಲಿಯೂ ಅದೇ ರೀತಿ ಏನಾದರೂ ಅಚ್ಚಿನ ತಪ್ಪು ಇರಬೇಕೆಂದು. 'ಇಪ್ಪತ್ತೆ'ನೆಯ ವಯಸ್ಸಿನಲ್ಲಿ ನನಗೆ ಆಗಬೇಕಿದ್ದ ಅಖಿರೀತ್ರಿತ ಧನಲಾಭವು 'ಎಪ್ಪತ್ತ'ರ ವರೆಗೂ ಎಳೆದಂತಿದೆ. ಆಯುಷ್ಯ ಮಾತ್ರ ಸರಿಯಾಗಿ 'ಐವತ್ತು' ಎಂದೇ ಇದೆ.

ಮೊಳೆ ಜೋಡಿಸುವವರ ಕ್ಷಮಾಪಣೆ ಬೇಡಿ ಮುಗಿಸೋಣ ಸದ್ಯ. ಆ ಮೇಲೆ ಮುದ್ರಾರಾಕ್ಷಸಿಯು ಮೇಲೆಯೇ ಸೇಡು ತೀರಿಸಿಕೊಂಡಾಳು.

ಆ ಮುದುಕಿ

(೨ನೆಯ ಪುಟದಿಂದ)

ಕ್ಯಾಗಿಯಲ್ಲಿ, ಮುದುಕಿಯುವಾದ ವೈಖರಿಗೆ ಗಾಡಿಯಲ್ಲಿ ಕುಳಿತವರೆಲ್ಲ ಬೆರಗಾದರು. ಮೌನದಿಂದ ಕೂಡಿದ್ದ ಡಬ್ಬಿಯನ್ನೆಚ್ಚರಿಸಿ, ಹಿತವಾದ ಮಾತುಗಳಿಂದ ವಿಚಾರ ಚರ್ಚೆ ಮಾಡಿ, ಬೇಸರ ಕಳೆವಂತೆ ಮಾಡಿ, ಸರ್ವರನ್ನೆಲ್ಲಾ ಬೆರಗುಗೊಳಿಸಿದ ಆ ಮುದುಕಿ, ಹಳ್ಳಿಯವರಂತೆ ಇದ್ದರೂ, ಅಪಾರವಾದ ಅನುಭವದ ಜ್ಞಾನವನ್ನು ಹೊಂದಿತ್ತು. ಹೀಗೆ ಅಂದು ಚಿಕ್ಕಜಾಜೂರನ್ನು ಸೇರುವವರೆಗೂ ಅನೇಕ ವಿಚಾರಗಳನ್ನು ಮಾತಾಡಿದೆವು.

ನಂತರ, ಈ ದಿನದ ನಮ್ಮ ಪ್ರಯಾಣದಲ್ಲಿ, ಈ ಮುದುಕಿಯ ವಿಚಾರವಾಗಿ, ಏನಾದರೂ ಬರೆದು ಕಳಿಸೋಣವೆಂದು ಮಾತನಾಡಿದೆವು. ಡಬ್ಬಿಯಲ್ಲಿದ್ದವರೆಲ್ಲಾ, ಮುದುಕಿಯನ್ನು ಕುರಿತು, ನಿನ್ನ ಮೇಲೆ ಏನೋ ಕತೆ ಬರೆದು ಪೇಪರಿನಲ್ಲಿ ಹಾಕುತ್ತಾರಂತೆ, ನೋಡಜ್ಜೀ ಎಂತ ಒಬ್ಬರು ಮುದುಕಿಗೆ ಹೇಳಿ ನಕ್ಕರು. ಮುದುಕಿಯೂ ನಕ್ಕಳು. ಏನೋಪ್ಪ ನಿಮ್ಮನ್ನೆಲ್ಲಾ ಒಂದಷ್ಟು ಹೊತ್ತು ನಗಿಸಿದ್ದೇ ಸಂತೋಷ ಎಂದಿತು ಮುದುಕಿ.

ನಮಗೆ ಬಂಡಿಯನ್ನು ಬದಲಿಸಬೇಕಾಯಿತ್ತು. ಬಂಡಿಯನ್ನ ಬದಲಿಸಲಾರದೆ ಬದಲಿಸಿದ್ದಾಯಿತ್ತು. ಅಂತೂ ಅಧಿವೇಶನದಲ್ಲಾದ ದೇಹಾರು ಆ ಒಂದೆರಡು ಗಂಟೆಯಲ್ಲಿ ಸಂಪೂರ್ಣ ಮಾಯವಾಯಿತ್ತು. ಅನಂತರ ಕೆಲ ನಿಮಿಷದಲ್ಲಿ, ಮುದುಕಿ ತನ್ನ ಊರಕಡೆಯ ಬಂಡಿಯಲ್ಲಿ ಕುಳಿತು ತೆರಳಿದಳು. ಆಕೆ ಅತ್ತ ತೆರಳಿದನಂತರ ನಾವು ಮತ್ತೊಂದು ಬಂಡಿಯಲ್ಲಿ ರಾತ್ರಿ ಆಕೆ ಕುಳಿತು ಹೊರಟೆವು. ಆ ನಿಮಿಷ ಇನ್ನೂ ನಮ್ಮ ಮನಸ್ಸಿನಲ್ಲಿದೆ. ಆ ಮುದುಕಿ ನಮ್ಮ ನೆನಪಿನಿಂದ ಮಾಯವಾಗಿಲ್ಲ. ಶ್ರೀ ಕೃಷ್ಣರು ಆಗಾಗ್ಗೆ ಆ ಮುದುಕಿಯನ್ನು ನೆನಸುತ್ತಾರೆ. ಆಕೆಯ ಧರ್ಮಬುದ್ಧಿ, ತ್ಯಾಗ, ಕಾಂಕ್ಷೆ, ವಿಚಾರ ವೈವಿಧ್ಯತೆಗಳು ಆಪರ್ಕವಾಗಿವೆ. ಆ ಮುದುಕಿಯು ಹೇರೇನೋ ಗೊತ್ತಿಲ್ಲ. ಆದರೂ ಆಕೆಯನ್ನು ಮರೆಯುವದಿಲ್ಲ.

ವಕೀಲ: ಪಾಟೀ ಸವಾಲಿನ ಕಾಲಕ್ಕೆ ನೀನೇನೂ ಗಾಬರಿಯಾಗಲಿಲ್ಲವಲ್ಲ. ಬಹಳ ಅನುಭವಸ್ಥನಂತೆ ಕಾಣುತ್ತೆ?

ಪಕ್ಷಕಾರ: ನನಗೆ ಆರು ಮಕ್ಕಳು ಸ್ವಾಮೀ!

ಜೀವನ ವಿಜ್ಞಾನ

ಅಕ್ಕಿಯ ಗುಣ ಹೆಚ್ಚಿಸುವ ಬಗೆ

ಸಂಗ್ರಾಹಕ: ಶ್ರೀ ಶಂ. ರಾ. ಭವಾನೀಕರ್

ಹತ್ತಾರು ವರ್ಷಗಳಿಂದ ಬೆಂಗಳೂರು ಸೆಂಟ್ರಲ್ ಕಾಲೇಜಿನ ರಸಾಯನ ಶಾಸ್ತ್ರ ಅಧ್ಯಾಪಕರಾದ ಡಾಕ್ಟರ್ ಸಂಜೀವರಾಯರೂ ಅವರ ಶಿಷ್ಯರೂ ವಿವಿಧ ಅಕ್ಕಿಗಳ ಮೇಲೆ ಪ್ರಯೋಗಗಳನ್ನು ನಡೆಸಿ ಕೆಲವು ಅಂಶಗಳನ್ನು ನಿರ್ಣಯಿಸಿದ್ದಾರೆ. ಒಳ್ಳೆಯ ಅಕ್ಕಿಯೆಂದರೆ ಬೇಯಿಸಿದಾಗ ಬಿಡಿಬಿಡಿಯಾಗಿ, ಉಬ್ಬಿ, ಮೆತ್ತನೆಯ ಅನ್ನವಾಗುವದು, ಎಷ್ಟು ಉಬ್ಬಿದಷ್ಟು ಉತ್ಕೃಷ್ಟ. ವಾಸನೆ ಮತ್ತು ರುಚಿ ಇವುಗಳ ವಿಷಯ ಅಷ್ಟು ಪ್ರಾಮುಖ್ಯವಲ್ಲ. ಉಬ್ಬುವದಕ್ಕೂ ನೀರಿನಲ್ಲಿ ನೆನಸಿದ ಅಕ್ಕಿಯು ನೀರನ್ನು ಹೀರುವದಕ್ಕೂ ಸಂಬಂಧವಿದೆ. ಒಳ್ಳೆಯ ಅಕ್ಕಿಯು ಬೇಗನೆ ನೀರು ಹೀರುವುದು, ಅಲ್ಲದೆ ಒಣಗಿಸಿದರೆ ಬೇಗನೆ ನೀರನ್ನು ಬಿಟ್ಟುಬಿಡುವದು. ಹೊಸ ಭತ್ತವನ್ನು ಕುಟ್ಟಿ ಮಾಡಿದ ಅಕ್ಕಿಯಿಂದ ಚೆನ್ನಾದ ಅನ್ನವಾಗುವದಿಲ್ಲವೆಂಬುದು ಎಲ್ಲರಿಗೂ ತಿಳಿದಿದೆ. ಅಂಥ ಅಕ್ಕಿಯು ಹೆಚ್ಚು ನೀರನ್ನು ಬೇಗ ಹೀರುವದಿಲ್ಲ. ಅದೇ ಭತ್ತವನ್ನು ಹಳೆಯದು ಮಾಡಿಯಾಗಲೀ ಅಥವಾ ತಕ್ಕಷ್ಟು ಆರ್ದ್ರಯುಕ್ತ ಶಾಖವನ್ನು ಕೊಟ್ಟಾಗಲಿ ಅದರಿಂದ ಮಾಡಿದ ಅನ್ನವು ಚೆನ್ನಾಗುವದು ಶಾಖವು ಮಿತಿಮೀರಿದರೆ ಕೆಟ್ಟು ಹೋಗುವದು. ನಮ್ಮಲ್ಲಿ ಬಹಳ ವರ್ಷಗಳಿಂದ ಬಳಕೆಯಲ್ಲಿರುವ ಅರ್ಧ ಕುದಿಭತ್ತದಿಂದ (ಕುಚ್ಚಿಗೆ) ಆದ ಅಕ್ಕಿಯನ್ನು ಬೇಯಿಸಿದರೆ ಅನ್ನದ ಅಗುಳು ಹೊಸ ಅಕ್ಕಿ ಅನ್ನದಷ್ಟು ಉಬ್ಬುವದಿಲ್ಲ. ಆದುದರಿಂದ ಹೊಸ ಅಕ್ಕಿಯೂ ಉತ್ತಮವಲ್ಲ, ಕುಚ್ಚಲು ಅಕ್ಕಿಯೂ ಇತರ ಅವಗುಣಗಳಿಂದ ಮುಕ್ತವಲ್ಲ. ಅಕ್ಕಿಯನ್ನು ತಕ್ಕ ಹದಕ್ಕೆ ತರಲು ಕೆಲವು ತಿಂಗಳು ಭತ್ತವನ್ನು ಹಳೆಯದು ಮಾಡಬೇಕು. ಅಂದರೆ ಕಾಲವಿಳಂಬವಾಗುವದು.

ನಮಗೆ ಮುಖ್ಯವಾಗಿ ಕಾಲವಿಳಂಬವಾಗಬಾರದು. ಹೊಸ ಅಕ್ಕಿಯ ಮತ್ತು ಅರ್ಧ ಕುದಿ ಅಕ್ಕಿಯ ಅವಗುಣಗಳೆಲ್ಲ ಹೋಗಬೇಕು. ಇದಕ್ಕೆ ತಕ್ಕ ವಿಧಾನಗಳನ್ನು ಕಂಡುಹಿಡಿಯಬೇಕು. ಅಕ್ಕಿಯಲ್ಲಿನ ಪಿಷ್ಟ ಮತ್ತು ಸಾರಜನಕ ಪದಾರ್ಥಗಳ ಸ್ವಭಾವಗಳಿಗೂ ಅದರ ಗುಣಕ್ಕೂ ಸಂಬಂಧವಿದ್ದೇ ಇರಬೇಕಲ್ಲವೆ?

ಕುಚ್ಚಕ್ಕಿ

ಹಲವು ವರ್ಷಗಳಿಂದ ಭಾರತದಲ್ಲಿ ಬಳಕೆಯಲ್ಲಿರುವ ಭತ್ತವನ್ನು ಅರ್ಧ ಕುದಿಸಿ ಅಕ್ಕಿಮಾಡುವ ವಿಧಾನಕ್ಕೆ ಈಗಲೂ ಒಂದು ಸ್ಥಾನವಿದೆ. ಇದರ ಗುಣಾವಗುಣಗಳನ್ನು ಸ್ವಲ್ಪ ಚರ್ಚಿಸೋಣ. ಇದನ್ನು ಯಂತ್ರದಲ್ಲಿ ಕೊಟ್ಟು ಅಕ್ಕಿ ಮಾಡಿದರೆ ಹಳೆದು ಮಾಡಿ ಕೊಟ್ಟ ಭತ್ತಕ್ಕಿಂತಲೂ ನೂರಕ್ಕೆ ೧೦ ರಷ್ಟು ಹೆಚ್ಚಾಗಿ ಅಕ್ಕಿಯು ಬರುವುದು. ಅಲ್ಲದೆ ಕುಚ್ಚಲಿನ 'ಬಿ' ಜೀವಸತ್ವವೂ ಸಾರಜನಕವೂ ಮತ್ತು ಇತರ ಉಪ್ಪುಗಳೂ ನಷ್ಟವಾಗದೆ ಇರುವವು. ಈ ಅಕ್ಕಿಯನ್ನು ತೊಳೆದರೆ ಅದರಲ್ಲಿದ್ದ ಥಯಮಿನ್ ಎಂಬ ಬಹಳ ಪ್ರಯೋಜನಕಾರಿಯಾದ ರಸಾಯನ ವಸ್ತುವಿನ ಕೇವಲ ೮/೧೦೦ ಭಾಗವು ಹೋಗುವುದು. ಆದರೆ ಹೊಸ ಅಕ್ಕಿಯನ್ನು ತೊಳೆದರೆ ಆ ವಸ್ತುವಿನ ೬೦/೧೦೦ ಭಾಗವು ಹೋಗವುದು ಹಾಗಾದರೆ ಕುಚ್ಚಿಗೆ ಅಕ್ಕಿಯ ಯೋಗ್ಯತೆಯು ಹೆಚ್ಚಿದಂತಾಯಿತು ಆದರೂ ಇದರ ವಾಸನೆ ಮತ್ತು ವಿಚಿತ್ರ ರುಚಿಗಳನ್ನು ಕೆಲವರು ಸಹಿಸರು. ಅಲ್ಲದೆ ಅನ್ನದ ಅಗುಳು ಹಿಂದೆಯೇ ತಿಳಿಸಿದಂತೆ ಅಷ್ಟು ಮೆತ್ತಗಿರುವುದಿಲ್ಲ ಸೆಂಟ್ರಲ್ ಕಾಲೇಜಿನ ವೈಜ್ಞಾನಿಕರು ಕೆಟ್ಟವಾಸನೆ ಮತ್ತು ರುಚಿಯು ತೊಲಗಲು ಒಂದು ವಿಧಾನವನ್ನು ಕಂಡು ಹಿಡಿದಿದ್ದಾರೆ. ೨ ಅಥವಾ ೩ ಘಂಟೆಗಳ ಕಾಲ ೭೦ ಸೆಂಟಿಗ್ರೇಡ್ ಬಿಸಿನೀರಿನಲ್ಲಿ ನೆನೆಯಿಸಿಡಬೇಕೆನ್ನುತ್ತಾರೆ.

ಮೆತ್ತನೆಯ ಅನ್ನವಾಗುವಂತೆ ಕುಚ್ಚಿಗೆ ಅಕ್ಕಿಯ ತಯಾರಿಕೆಯನ್ನು ಮಾರ್ಪಡಿಸಬಹುದೇ? ಅಮೇರಿಕಾ ದೇಶದಲ್ಲಿ ಅಕ್ಕಿಗೆ ಹದಕೊಡುವ ಎರಡು ವಿಧಾನಗಳಿವೆ (೧) ಅಕ್ಕಿ ಮಾರ್ಪಡಿಸುವ ರೀತಿ (೨) 'ಮಾಲೆಕ್' ವಿಧಾನ. ಹೆಚ್ಚಾಗಿ ಇವು ಕುಚ್ಚಕ್ಕಿ ವಿಧಾನಗಳನ್ನೇ ಹೋಲುವುವು. ಇವೂ ಮೆತ್ತನೆಯ ಅನ್ನವನ್ನು ಕೊಡುವುದಿಲ್ಲ. ಆದುದರಿಂದ ಭಾರತದ ಜನಗಳಿಗೆ ಹಿಡಿಸದು.

ಕ್ಯಾಲ್ಸಿಯಂ ವಿಧಾನದಿಂದ ಹದಕೊಟ್ಟ ಅಕ್ಕಿ

ನೋಡಲು ಸಾಧಾರಣ ಅಕ್ಕಿಯಂತೆಯೂ ಕುಚ್ಚಲಿನ ಒಳ್ಳೆಗುಣಗಳನ್ನು ಹೊಂದಿಯೂ ಮೆತ್ತನೆಯ ಅಗುಳುಗಳಾಗುವಂತೆಯೂ ಅಕ್ಕಿಗೆ ಹದಕೊಡುವ ನವೀನ ರೀತಿಯನ್ನು ಸೆಂಟ್ರಲ್ ಕಾಲೇಜಿನ ವೈಜ್ಞಾನಿಕರು ಕಂಡು ಹಿಡಿದಿದ್ದಾರೆ. ಸಂಕ್ಷೇಪಿಸಿ ಹೇಳಬೇಕೆಂದರೆ– ಭತ್ತವನ್ನು ಕ್ಯಾಲ್ಸಿಯಂ ಕ್ಲೋರೈಡು ಕರಗಿದ ನೀರಿನಲ್ಲಿ ೭೦ ಸೆಂ. ಉಷ್ಣಾಂಶದಲ್ಲಿ ೨ ಘಂಟೆಗಳ ಕಾಲ ನೆನೆಹಾಕಬೇಕು. ಅದರಿಂದ ಭತ್ತವನ್ನು ತೆಗೆದು ಕುದಿನೀರಿನ ಹಬೆಯಲ್ಲಿ ಬಿಸಿಮಾಡಬೇಕು. ಆ ಮೇಲೆ ಆ ಭತ್ತವನ್ನು ಸಾಮಾನ್ಯ ರೀತಿಯಲ್ಲಿ ಒಣಗಿಸಬೇಕು. ಇದರಿಂದ ಅಕ್ಕಿಯಲ್ಲಿನ ಪಿಷ್ಟ ಕಣಗಳು ಕ್ಯಾಲ್ಸಿಯಂ ಅಯಾನುಗಳ ಸಹಾಯದಿಂದ ತಕ್ಕಷ್ಟು ಘಟ್ಟಿಯಾಗುವುವು. ಆದರೂ ಉಬ್ಬುವ ಗುಣವು ತಗ್ಗುವುದಿಲ್ಲ ಅನ್ನವು ಬಿಡಿಬಿಡಿಯಾಗಿಯೂ ಮೆತ್ತಗೂ ಇರುವುದು. ಕೆಟ್ಟ ವಾಸನೆಯೂ ಅರುಚಿಯೂ ಇರುವುದಿಲ್ಲ. ಅಲ್ಲದೆ ಕ್ಯಾಲ್ಸಿಯಂ ಭಾಗವನ್ನು ಅಕ್ಕಿಯು ಹೀರುವುದರಿಂದ ದೇಹದ ಬೆಳವಣಿಗೆಗೆ ಹೆಚ್ಚು ಕಾರಣವಾಗುವುದು. ಕ್ಯಾಲ್ಸಿಯಂ ಭಾಗವು ಸಾಧಾರಣ ಅಕ್ಕಿಯಲ್ಲಿರುವುದಕ್ಕಿಂತ ಐದರಷ್ಟಾಗುವುದು. ಈ ಅಕ್ಕಿಯನ್ನು ತೊಳೆವಾಗ ಕೇವಲ ೪/೧೦೦ ಭಾಗ ಥಯಮಿನ್ ಮಾತ್ರ ಹೋಗುವುದು. ಅಂದರೆ ಕುಚ್ಚಿಗೆ ಅಕ್ಕಿಗಿಂತ ಉತ್ಕೃಷ್ಟವೆಂದಾಯಿತು. ಈ ಅಕ್ಕಿಯನ್ನು ಸಂಚಯಿಸಿಡಬಹುದು. ಹುಳುಗಳು ಹೊಡೆಯುವುದಿಲ್ಲ

ಭಾರತದಲ್ಲಿ ಬಳಕೆಯಲ್ಲಿರುವ ನೂರಕ್ಕೆ ಅಕ್ಕಿಯಲ್ಲಿ ೬೦ ಭಾಗವು ಕುಚ್ಚಿಗೆ ಮಾಡುವದರಿಂದ ಅಷ್ಟನ್ನು ಹೊಸರೀತಿಯಲ್ಲಿ ತಿರುಗಿಸಿಕೊಡುವುದಕ್ಕೆ ಆಗುವುದೇ? ಎಂಬ ಯೋಜನೆಯು ವೈಜ್ಞಾನಿಕರಿಗೆ ಇದೆ.

ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ)

ಗಂಡು-ಹೆಣ್ಣು

ಬರೆದವರು ಶ್ರೀ ಗೌರೀಶ ಕಾಯ್ಕಿಣಿ, ಪ್ರಕಾಶಕರು ಕರ್ನಾಟಕ ಗ್ರಂಥಮಾಲೆ, ಗೋಕರ್ಣ. ಪುಟ ೧೦೩, ಬೆಲೆ ೧॥ ರೂ.

ಮನಃಶಾಸ್ತ್ರದ ತತ್ವಗಳ ಆಧಾರದಿಂದ ಗಂಡು ಹೆಣ್ಣಿನ ಸ್ವಭಾವ ವೈಲಕ್ಷಣ್ಯಗಳನ್ನು ವಿವರಿಸಹೋದ ಗ್ರಂಥವಿದು. ಮುಖಪುಟದ ಮೇಲೆ ಮುಖ್ಯಾಂಶವೆಂದು ಲೇಖಕರ ಮಾತುಗಳನ್ನು ಉದ್ಧರಿಸಲಾಗಿದೆ, ಆದರಿಂದಲೇ ಪುಸ್ತಕದ ಯೋಗ್ಯತೆಯ ಬಗ್ಗೆ ಸ್ಥೂಲಾಭಿಪ್ರಾಯವನ್ನು ತಾಳಬಹುದೆನ್ನುವಂತಿದೆ. ಅವು ಅಷ್ಟೇನೂ ವೈಜ್ಞಾನಿಕವಲ್ಲದಿದ್ದರೂ ಕೆಣಕುವ ಆ ವಾಕ್ಯಗಳನ್ನು ಹಾಗೇ ಬಿಡಲು ಶಕ್ಯವಿಲ್ಲ. ಅವರ ಮೊದಲ ವಾಕ್ಯದಲ್ಲಿ 'ಮನೋವಿಜ್ಞಾನದ ಕೊನೆಯ ವಿಷಯ ಹೆಣ್ಣು' ಎಂಬುದು ಗಂಡಿನ ದೃಷ್ಟಿಯಾಗಿದೆಯೆಂದು ಯಾರೂ ಹೇಳಬಹುದು. ಹೆಣ್ಣಿನ ಬಗ್ಗೆ ಅತ್ಯುತ್ಸುಕತೆ ತೋರಿಸುವ ಗಂಡಿಗೇ ಅವಳೊಂದು ಸಮಸ್ಯೆಯೆಂದು ತೋರುವಂತೆ ವರ್ಣಿಸಿ ತಾವೇ ಸಮಸ್ಯಾಲಗ್ನರಾದ ಲೇಖಕರ ಸಂಖ್ಯೆ ಜಗತ್ತಿನಲ್ಲಿ ಕಡಿಮೆಯಿಲ್ಲವೆಂಬುದಕ್ಕೆ ಇದೊಂದು ನಿದರ್ಶನ.

ಎರಡನೆಯ ವಾಕ್ಯದಲ್ಲಿ 'ಗಂಡಿನ ಕಣ್ಣಿಗೆ' ಹೆಣ್ಣು ಒಗಟಾಗಿದ್ದಾಳೆ ಎಂಬ ಮಹಾಸೂತ್ರವನ್ನು ಹೇಳಲಾಗಿದೆ. ಇದಾದರೂ ಕೆಲಸವಿಲ್ಲದೆ ಮೆಲುಕು ಹಾಕುವ ಭಾವೋನ್ಮಾದ ಪರವಶರ ಮಾತಲ್ಲದೆ ತತ್ವಶಾಸ್ತ್ರಕ್ಕೆ (ಇಲ್ಲಿ ಇದೇ ಮಾನವನ ಕೊನೆಯ ಶಾಸ್ತ್ರವಲ್ಲದೆ ಮನೋವಿಜ್ಞಾನವಲ್ಲ ಎಂದು ಗ್ರಂಥಕರ್ತರ ಪ್ರಥಮ ವಾಕ್ಯವನ್ನು ಪ್ರತಿಭಟಿಸಬಹುದು.) ಸಮ್ಮತವಾಗುವ ಮಾತಲ್ಲ.

'ಹೆಕ್ಕನ ಮಾತೇ ಹಾಗೆ. ಹೆಣ್ಣಿನೊಂದಿಗೆಯೂ ಗಂಡಸು ನೆಮ್ಮದಿಯಾಗಿ ಬದುಕಲಾರ! ಹೆಣ್ಣಿನ ಹೊರತಾಗಿಯೂ ಬದುಕಲಾರ' ಎಂಬ ಮೂರನೆಯ ವಾಕ್ಯವಾದರೂ ಗ್ರಂಥಕರ್ತರ ಸ್ವಾನುಭವ; ವಾಕ್ಯರಚನಾ ಬಲದಿಂದ ಅದೊಂದು ಅರ್ಧಾಂಶಸತ್ಯವಾಗಿರಬಹುದೇ ಹೊರತು ಎಲ್ಲ ಗಂಡಸರ ಇಲ್ಲವೆ ಬಹುಸಂಖ್ಯಾಕ ಗಂಡಸರ ಅನುಭವ ಹಾಗಿದೆ ಎನ್ನುವದು ಅವೈಜ್ಞಾನಿಕ ತರ್ಕಬಾಹಿರ ಎಂಬುದು ಸಂಸಾರಿಗಳಲ್ಲಿ ಬಹುಸಂಖ್ಯಾಕರಿಗೆ ಅರಿಯದ ಮಾತಲ್ಲ.

ಹೋಗಲಿ, ಪುಂಸ್ತ್ರೀ ವೈಲಕ್ಷಣ್ಯವನ್ನು ಹೇಳಹೋದ ಈ ಗ್ರಂಥಕರ್ತರು ವೈಲಕ್ಷಣ್ಯಗಳನ್ನು ಹೊಂದಿಸಿಕೊಂಡು ಭಿನ್ನಲಿಂಗಿಗಳು ಉಭಯಹಿತವನ್ನು ಸಾಧಿಸುವ ಒಂದು ಸೂತ್ರವನ್ನಾದರೂ ಹೇಳಿರುವರೆ? ಇಲ್ಲ. ಭೇದದ ಬಗ್ಗೆ ಸಂಸ್ಕಾರವನ್ನು ದೂರಿ, ಆ ಸಂಸ್ಕಾರಕ್ಕೆ ಗಂಡಸು ಕಾರಣನೆಂದು ಅವನನ್ನು ದೂರಿ, ಕಡೆಯಲ್ಲಿ- 'ಗಂಡು ಹೆಣ್ಣಿನ ಗುಣಶೀಲಗಳಲ್ಲಿ ಸಮಾನತೆ ಮೂಡಬಹುದು' ಎಂದು, ಅನಂತರ 'ಹೆಣ್ಣು ಗಂಡನ್ನು ಪೂರ್ಣವಾಗಿ ಅನುಕರಿಸಿದರೆ ಅಳಿಯದ ಮಾನಸಿಕ ಮತ್ತು ನೈತಿಕ ಲಕ್ಷಣಗಳೆಲ್ಲ ಗಂಡಿನಂತಾಗಿ ಬಿಡಬಹುದು' ಎಂದು ಮಹಾವ್ಯಾಪಕ ದು ತೀರ್ಮಾನಕ್ಕೆ ಬಂದಿದ್ದಾರೆ. ಇದು ಶಾಸ್ತ್ರಸಿದ್ಧಾಂತವೋ ಆದರ್ಶವನ್ನು, ಅದು ಹಾದಿಗೆ ಹಚ್ಚುವ ಶಸ್ತ್ರಚಿಕಿತ್ಸೆಯೋ ಬಲ್ಲವರು ವಿಚಾರಿಸಲಿ. ಮೊದಲನೆ ಮನೋವಿಜ್ಞಾನವೇ ಇಂದು ಅಪೂರ್ಣವಾಗಿದೆ. ಮನಸ್ಸಿನ ಸ್ವರೂಪವೇ ಕೊನೆಯದಾಗಿ ನಿರ್ದೇಶವಾಗಿಲ್ಲ. ಹೀಗಿರುವಾಗ ಆ ಅಪಕ್ವ ನಿರ್ಣಯಗಳ ಆಧಾರದ ಮೇಲೆ ಕಟ್ಟಿದ ಜೀವನದ ಅಗತ್ಯ ಮತ್ತು ಲಕ್ಷಣಗಳನ್ನು ಲಕ್ಷ್ಯಕ್ಕೆ ತಂದು ಅವುಗಳಿಗೆ ತಕ್ಕ ಹೇಳಹೊರಡುವುದು, ಸ್ವಭಾವತರ್ಕನವನ್ನು ಹೋಗುವುದು ದುರಂತಪ್ರಯತ್ನವೇ ಸರಿ.

ಈ ಗ್ರಂಥಕರ್ತರ ಭಾವವಾದರೂ ಅಮೇರಿಕ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ Feminists "ಪುರುಷೀಸುರ" ವಿಚಾರ ಸರಣಿ ಹೊಂದಿರುವಂತಿದೆಯಲ್ಲದೆ ಸ್ತ್ರೀಪುರುಷರ ಶಾರೀರಿಕ ಮತ್ತು ಮಾನಸಿಕ ಪ್ರವೃತ್ತಿಗಳ ಹೊಂದಿಕೆಯ ಮಾರ್ಗವನ್ನು ಕಂಡು,ಕಾ...

ಕುವ ಗುರಿಯುಳ್ಳದ್ದಾಗಿಲ್ಲ; ಆ ಬಗ್ಗೆ ಪುಸ್ತಕದಲ್ಲಿ ಬಹಳ ಹೇಳಿಲ್ಲ. ಅಲ್ಲದೆ, "ಅಂಜುವ ಹಿಂಜರಿಯುವ ತಿಳುವಳಿಕೆಯ ಹೊಯ್ದಾಟದ ಗಂಡಸಿಗಿಂತಲೂ, ಸಂಶಯಾತ್ಮಕ ಪುರುಷ ಬುದ್ಧಿಗಿಂತಲೂ ಹೆಣ್ಣಿನ ಮನಸ್ಸು ಮನುಷ್ಯಸ್ವಭಾವದ ವ್ಯಾಪಾರಗಳನ್ನೆಲ್ಲ ಹೆಚ್ಚು ಆಳವಾಗಿ ಅರಿತು ಹೆಚ್ಚು ಅಂದವಾಗಿ ಚಲನಗೊಳಿಸಿ "ಅಶಿಕ್ಷಿತ ಪಟುತ್ವ" ದ ಎಷ್ಟೋ ಮಿಗಿಲಾದ ತಿಳುವಳಿಕೆಯ ಕೆಳಲನ್ನು ತೋರುತ್ತದೆ" ಎಂಬಂತಹ ಸ್ವಕಪೋಲಕಲ್ಪಿತ ಸಿದ್ಧಾಂತಗಳು ಅನುಭವಜನ್ಯವೆಂದು ಹೇಳಲಾಗುವದಿಲ್ಲ. ಜೀವಿಗಳಲ್ಲಿ ವರ್ಗೀಕರಣ ಮಾಡಿ ಶಾಶ್ವತವಾದ ಮಾನಸಿಕ ಗುಣ ದೋಷಗಳನ್ನು ಹೇಳುವ ಧಾರ್ಷ್ಟ್ಯ ಮನಃಶಾಸ್ತ್ರಿಗೆಂದೂ ದಕ್ಕತಕ್ಕದ್ದಲ್ಲ. ತನ್ನ ಮನದ ಪರಿಚಯ ತನಗಿಲ್ಲದವನನ್ನು ಮನಃಶಾಸ್ತ್ರಿಯೆಂದು ಹೇಗೆ ಹೇಳಬೇಕಾದೀತು?

ಪುಸ್ತಕವನ್ನೇನೋ ಅಂದವಾಗಿ ಮುದ್ರಿಸಲಾಗಿದೆ. ಒಟ್ಟಿನಲ್ಲಿ ಶಾಸ್ತ್ರಜಿಜ್ಞಾಸುಗಳನ್ನು ಕೆಣಕುವಂತಿರುವ ಈ ಪುಸ್ತಕವು ಅಷ್ಟು ಮಟ್ಟಿಗೆ ಪುರಸ್ಕಾರ ಯೋಗ್ಯವೆನ್ನಬಹುದು.

ಪಾಶ್ಚಾತ್ಯ ಸಣ್ಣ ಕಥೆಗಳು

ಲೇಖಕರು, ಎ. ಎನ್. ಮೂರ್ತಿರಾವ, ಪ್ರಕಾಶಕರು, ವಿಶ್ವಸಾಹಿತ್ಯ ಮೈಸೂರು. ಪುಟಗಳು ಕ್ರೌನ ೧/೮ ೯೭. ಬೆಲೆ ೧ ರೂ.

ಇದರಲ್ಲಿ ವಿಶ್ವವಿಖ್ಯಾತರಾದ ನಾಲ್ಕು ಜನ ವಿದೇಶೀಯ ಲೇಖಕರ ನಾಲ್ಕು ಕಥೆಗಳ ಅನುವಾದಗಳಿವೆ. ಮೊದಲನೆಯದು ಇಂಗ್ಲೆಂಡಿನ ಪ್ರಸಿದ್ಧ ಕಾದಂಬರಿಕಾರ ಚಾರಲ್ಸ ಡಿಕನ್ಸರ ತಿರುಗುದಲ್ಲಾಳಿ ಹೇಳಿದ ಕಥೆ. ಇದನ್ನು ಹಾಸ್ಯ ದೃಷ್ಟಿಯಿಂದ ಬರೆಯಲಾಗಿದೆ. ಎರಡನೆಯದು ಅಮೇರಿಕೆಯ ಶ್ರೇಷ್ಠ ಸಾಹಿತ್ಯಕ ವಾಸಿಂಗ್ಟನ್ ಅರ್ವಿಂಗರ ಅರೇಬಿಯದ ಜ್ಯೋತಿಷ್ಯ ಎಂಬ ಕಥೆ. ಇದೊಂದು ಕಲ್ಪನಾ ಪ್ರಧಾನ ಚಿತ್ರವಾಗಿದೆ. ಮೂರನೆಯದು ಅಸಾಮಾನ್ಯ ಫ್ರೆಂಚ ಕಥೆಗಾರರೆನಿಸಿದ ಮೋಪಾಸಾ ಎಂಬವರ ಒಂದು ತಂಡುದಾರ ಎಂಬುದು. ಇದರಲ್ಲಿ ಒಂದು ಅಮುಖ್ಯವಾದ ಸಾಮಾನ್ಯ ಘಟನೆಯೇ ಜೀವಕ್ಕೆ ಮುಳುವಾದ ಬಗೆಯನ್ನು ಕಾಣಬಹುದು. ನಾಲ್ಕನೆಯದು ಸ್ಟೀವನ್ಸನ್ನರ ಮಾರ್ಕ ಹೈಮ ಎಂಬ ಕಥೆ. ಇದು ಒಂದು ಕೊಲೆಯ ಕಥೆ ಇದರಲ್ಲಿ ಮನೋವಿಶ್ಲೇಷಣವನ್ನೇ ಪ್ರಾಮುಖ್ಯವಾಗಿಟ್ಟುಕೊಳ್ಳಲಾಗಿದೆ ಕಥೆಗಳ ಈ ಸಂಕಲನವು ವೈವಿಧ್ಯದಿಂದ ಕೂಡಿದ್ದು ಒಂದೊಂದು ಕಥೆ ಒಂದೊಂದು ಬಗೆಯ ಸ್ವಾದವುಂಟು ಪ್ರತಿ ಕಥೆಯ ಆದಿಗೂ ಆಯಾ ಲೇಖಕರ ಅಲ್ಪ ಪರಿಚಯ ಕೊಡಲಾಗಿದ್ದು ಅದರಲ್ಲಿ ಅವರವರ ಜೀವನ ವೈಶಿಷ್ಟ್ಯವನ್ನು ಎರಡೇ ಮಾತುಗಳಲ್ಲಿ ಎತ್ತಿ ತೋರಿಸಲಾಗಿದೆ.

India of My Dreams

By M K. Gandhi Compiled by R. K. Prabhu with a fore-word by Dr. Rajendra Prasad Hind Kitabs Limited 261-263 Hornby Road Bombay.

P. P. 132+8. Price Rs. Two.

ಮಹಾತ್ಮಾ ಗಾಂಧಿಯವರು ಸ್ವತಂತ್ರ ಹಿಂದುಸ್ತಾನದ 'ಜನಕರು'. ಹಿಂದುಸ್ತಾನವು ಪರರಾಷ್ಟ್ರದಿಂದ ಮುಕ್ತವಾದ ಬಳಿಕ ಅದು ಯಾವ ಬಗೆಯ ಘಟನೆಯನ್ನು ರಚಿಸಿಕೊಳ್ಳಬೇಕು, ಭಾರತೀಯರೆಲ್ಲರ ಹಕ್ಕುಬಾಧ್ಯತೆಗಳೇನು, ಭಾರತದ ಪರರಾಷ್ಟ್ರ ಸಂಬಂಧವೆಂತಹದಿರಬೇಕು ಮುಂತಾದ ವಿಷಯನ್ನೆಲ್ಲ ಗಾಂಧೀಜಿ ತಮ್ಮ ಯಂಗ ಇಂಡಿಯಾ, ಹರಿಜನ ಪತ್ರಿಕೆಗಳಲ್ಲಿ ಆಗಾಗ ವಿವರವಾಗಿ ಚರ್ಚಿಸಿದ್ದಾರೆ. ಸ್ವತಂತ್ರ ಹಿಂದುಸ್ತಾನದಲ್ಲಿಯ ಅವರ ಆ ಹೊಂಗನಸುಗಳನ್ನು ಏಕತ್ರ ಸಂಗ್ರಹಿಸಿ ಶ್ರೀ ಪ್ರಭು ಇವರು ಈ ಪುಸ್ತಕವನ್ನು ರಚಿಸಿದ್ದಾರೆ. ವಿವಾದಾಸ್ಪದವಾದ ಜಟಿಲ ವಿಷಯಗಳ ಬಗೆಗೆ ಗಾಂಧೀಜಿಯ ಅಭಿಪ್ರಾಯವನ್ನು ತಿಳಿದುಕೊಳ್ಳಲು ಈ ಪುಸ್ತಕ ಬಹಳ ಉಪಯುಕ್ತವಾಗಿದೆ. ಇಂಗ್ಲಿಶ ಬಲ್ಲವರೆಲ್ಲ ಈ ಪುಸ್ತಕವನ್ನೋದಿ ಆಯಾ ಮಹತ್ವದ ವಿಷಯಗಳ ಬಗ್ಗೆ ಗಾಂಧೀಜಿಯ ಅಭಿಪ್ರಾಯ ತಿಳಿದುಕೊಳ್ಳತಕ್ಕದ್ದು. ದೇಶ ಭಾಷೆಗಳಲ್ಲಿ ಈ ಪುಸ್ತಕದ ಅನುವಾದವಾಗುವದು ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಶ್ರೀಪತಿಯ ಕಥೆಗಳು

ಬರೆದವರು 'ಶ್ರೀಪತಿ' ಪ್ರಕಾಶಕರು ಶ್ರೀ. ಕೆ. ಚಿದಂಬರಂ, ಕಾವ್ಯಾಲಯ, ಮೈಸೂರು. ಪುಟಗಳು ೧೭೯. ಬೆಲೆ ೨॥ ರೂಪಾಯಿ

ಉಕ್ತ ಕಥಾ ಸಂಗ್ರಹದಲ್ಲಿ ೧೩ ಕಥೆಗಳಿವೆ. ಅವುಗಳಲ್ಲಿ "ನನ್ನ ಸ್ನೇಹಿತ" ಮುಂತಾದ ಒಂದೆರಡು ಕಥೆಗಳಿವೆ ಉತ್ತಮವಾಗಿವೆ. ಉಳಿದವು ಸಾಮಾನ್ಯ ಓದುಗರ ಉತ್ಸಾಹ ಮತ್ತು ತನ್ಮಯತೆಗಳನ್ನು ಅಷ್ಟಾಗಿ ಪೋಷಿಸತಕ್ಕವಲ್ಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರವರಿಂದ ಮುದ್ರಿಸಿ ಪ್ರಕಟಿಸಲಾಯಿತು.